Swabhimani Sahakari

Pages : 33 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 05
May - 2023




## ಮತದಾನ ನಿಮ್ಮ ಹಕ್ಕು ಮತ್ತು ಕರ್ತವ್ಯ

ಮೇ
10





ಮೇ 01,
ಕಾರ್ಮಿಕ ದಿನಾಚರಣೆ



ಮೇ 05,
ಬುದ್ಧ ಪೂರ್ಣಿಮೆ

ಕರ್ನಾಟಕ ವಿಧಾನಸಭೆ
ಚುನಾವಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5926

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1624



**ಜಿ. ನಂಜನಗೌಡ**

> ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಾರ್ಮಿಕ ದಿನಾಚರಣೆಯ ಹಾಗೂ ಬುದ್ಧ ಪೌರ್ಣಿಮೆ ದಿನದ ಶುಭಾಶಯಗಳು. ಈ ವಿಶ್ವದ ಎಲ್ಲ ಕಾರ್ಮಿಕರ ಜೀವನ ಸುಖಕರವಾಗಿರಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಶ್ರೀ ಭಗವಾನ ಬುದ್ಧನ ಜೀವನ ಸಂದೇಶ ವಿಶ್ವದ ಎಲ್ಲ ಜನರ ಜೀವನ ಶಾಂತಿ ಹಾಗೂ ನೆಮ್ಮದಿಯಿಂದ ಕೂಡಿರುವಂತಾಗಲಿ ಎಂದು ಆಶಿಸುತ್ತೇನೆ.

# ಆಡಳಿತ ಪರಿಣಿತಿ ತರಬೇತಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕ. ನಿರ್ದೇಶಕರ ಭಾಗವಹಿಸುವಿಕೆ ತೃಪ್ತಿದಾಯಕ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಾರ್ಮಿಕ ದಿನಾಚರಣೆಯ ಹಾಗೂ ಬುದ್ಧ ಪೌರ್ಣಿಮೆ ದಿನದ ಶುಭಾಶಯಗಳು. ಈ ವಿಶ್ವದ ಎಲ್ಲ ಕಾರ್ಮಿಕರ ಜೀವನ ಸುಖಕರವಾಗಿರಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಶ್ರೀ ಭಗವಾನ ಬುದ್ಧನ ಜೀವನ ಸಂದೇಶ ವಿಶ್ವದ ಎಲ್ಲ ಜನರ ಜೀವನ ಶಾಂತಿ ಹಾಗೂ ನೆಮ್ಮದಿಯಿಂದ ಕೂಡಿರುವಂತಾಗಲಿ ಎಂದು ಆಶಿಸುತ್ತೇನೆ. ಸಂಯುಕ್ತ ಸಹಕಾರಿಯ 2023ರ ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮಗಳಲ್ಲಿ ಪ್ರಪ್ರಥಮವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರಗಳಿಗಾಗಿ ಬೆಂಗಳೂರಿನಲ್ಲಿ ನಡೆದ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ತರಬೇತಿ ಆಸಕ್ತಿ, ಅವರುಗಳ ಕ್ರಿಯಾಶೀಲತೆ ಮೆಚ್ಚುವಂತಹದ್ದು ಮತ್ತು ಸ್ವಾಗತಾರ್ಹವಾಗಿದೆ. ಶಿಕ್ಷಣ ಹಾಗೂ ತರಬೇತಿಯಿಂದ ಸೌಹಾರ್ದ ಸಹಕಾರಿಗಳ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಚಿಂತನ ಮಂಥನ ಮಾಡಲು ಮತ್ತು ಕ್ಷೇತ್ರದ ಅನುಭವಿಗಳೊಂದಿಗೆ. ಹಿರಿಯರೊಂದಿಗೆ ಅಧಿಕಾರಿಗಳೊಂದಿಗೆ ಬೆರೆಯಲು ಆಂತರಿಕ ಸಂಬಂಧಗಳ ನಿರ್ವಹಣೆಗೆ ಒಂದು ಉತ್ತಮ ಅವಕಾಶವಾಗುತ್ತದೆ ಎಂದು ನನ್ನ ಭಾವನೆ.

ಈ ಬಾರಿಯ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದ ಅನೇಕ ಹಿರಿಯ ಸಹಕಾರಿಗಳು, ಮಹಿಳೆಯರು ಮತ್ತು ಹಲವಾರು ಯುವ ಸಹಕಾರಿಗಳು ಭಾಗವಹಿಸಿರುವುದು ವಿಶೇಷ. ಒಟ್ಟಾರೆ 47 ಸೌಹಾರ್ದ ಸಹಕಾರಿಗಳಿಂದ 88 ಸಹಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದಿರುವುದು ಮತ್ತೆ ಇನ್ನೂ ಹೆಚ್ಚು ಜನರು ಈ ತರಬೇತಿಯಲ್ಲಿ ಭಾಗವಹಿಸಲು ಅಪೇಕ್ಷಿಸಿರುವುರಿಂದ 2ನೇ ತಂಡದ ತರಬೇತಿಯನ್ನು **ದಿನಾಂಕ 17, 18 ಮೇ 2023** ರಂದು ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ತರಬೇತಿ ಸಭಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಾತ್ಮಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಇದೇ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ವಿಭಾಗೀಯ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲು ಕ್ರಮವಿಡಲಾಗಿದೆ. ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತೃತ್ವವಹಿಸಿರುವ ಸಂಸ್ಥೆಯಾಗಿರುವುದರಿಂದ ಶಾಸನಬದ್ಧ ಕಾರ್ಯಚಟುವಟಿಕೆಗಳಿಗೆ ಮೊದಲ ಆದ್ಯತೆ ನೀಡಿ ನಂತರ ಅಭಿವೃದ್ಧಿಗೆ ಪೂರಕವಾಗುವ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಕಾರ್ಯಗಳಿಗೆ ಆದ್ಯತೆ ನೀಡುತ್ತ ಬಂದಿದೆ. ವಿಶೇಷವಾಗಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ ವಿಶೇಷವಾಗಿ ಸಮಯ ಪಾಲನೆ, ವಿಷಯಗಳ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ, ಅಧ್ಯಯನ ಸಾಹಿತ್ಯ ಹಾಗೂ ಉತ್ತಮ ವ್ಯವಸ್ಥೆಗಳ ಬಗ್ಗೆ ಸಹಕಾರಿ ಇಲಾಖೆಯ ಅಧಿಕಾರಿಗಳು ರಾಜ್ಯದ ಹಿರಿಯ ಸಹಕಾರಿಗಳು ತಮ್ಮ ಸಂತೋಷ ವ್ಯಕ್ತ ಪಡಿಸಿರುವುದು ಸಂಯುಕ್ತ ಸಹಕಾರಿಯ ಹೆಮ್ಮೆಯ ವಿಷಯ. ಈ ಸಾಧನೆಗೆ ತಮ್ಮೆಲ್ಲರ ಸಲಹೆ ಸಹಕಾರ ಹಾಗೂ ಮಾರ್ಗದರ್ಶನ ಅಗತ್ಯ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................... 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................... 20
ನಿಮ್ಮ ಪ್ರಶ್ನೆ ನಮ್ಮ ಉತ್ತರ ............... 21–22
**ಲೇಖನಗಳು :**
ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಅವಧಿ – 5 ವರ್ಷಗಳು ಒಂದು ಪುನರ್ ವಿಮರ್ಷೆ .......... ........................................... 23–25
ಕಾಯಕವೇ ಕೈಲಾಸ ಎಂಬುವುದೇ ಕಾರ್ಮಿಕರ ಮೂಲ ಮಂತ್ರವಾಗಿದೆ ............... 32–33

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳು ಸ್ವೀಕರಿಸುವ ಠೇವಣಿಗಳಿಗೆ ಹಾಗೂ ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿ ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಬೆಳೆಸುವುದಕ್ಕೆ ಸಂಯುಕ್ತ ಸಹಕಾರಿಯ ಸಕಾಲಿಕ ಕ್ರಮ.

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಹೆಚ್ಚಿನ ಸಹಕಾರಿಗಳು ಪತ್ತಿನ ವ್ಯವಹಾರವನ್ನೇ ನಿರ್ವಹಿಸುತ್ತಿರುವ ಸಹಕಾರಿಗಳು. ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಸಹಕಾರಿಯ ಬೆಳವಣಿಗೆಗಾಗಿ ತಮ್ಮ ಸದಸ್ಯರಿಂದ ಠೇವಣಿ ಸ್ವೀಕರಿಸುವುದು ನಂತರ ಸದಸ್ಯರಿಗೆ ಸಾಲ ನೀಡುವ ಕ್ರಮವನ್ನು ವ್ಯವಸ್ಥಿತವಾಗಿ ಆರ್ಥಿಕ ಶಿಸ್ತನ್ನು ಗಮನದಲ್ಲಿಟ್ಟು ನಿರ್ವಹಿಸಬೇಕಾಗುತ್ತದೆ. ಹೆಚ್ಚಿನ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಇದೆ. ಠೇವಣಿ ಸಂಗ್ರಹ ಅದಕ್ಕೆ ನಿಗದಿತ ಬಡ್ಡಿ ನೀಡುವುದು ಕ್ರಮವಾದ ರೀತಿಯಲ್ಲಿ ಸಾಲ ನೀಡುವುದು ಎಲ್ಲ ವ್ಯವಸ್ಥಿತವಾಗಿ ನಡೆದಿದೆ.

ಆದರೆ ಕೆಲವು ಸೌಹಾರ್ದ ಸಹಕಾರಿಗಳು ಅತಿಯಾದ ಅನಾವಶ್ಯಕ ಆಸಕ್ತಿಯಿಂದ ತಮ್ಮ ಸಹಕಾರಿಯು ಬೇಗನೆ ಬೆಳೆಯಬೇಕು ತಮ್ಮ ಸಹಕಾರಿಯ ಠೇವಣಿ ಕ್ಷಿಪ್ರದಲ್ಲಿ ವೃದ್ಧಿಯಾಗಬೇಕು. ಹೆಚ್ಚಿನ ಸಾಲ ನೀಡಬೇಕು ಮುಂತಾಗಿ ಹಲವು ಬಗೆಯ ಚಿಂತನೆ ಮಾಡಿ ಹೆಚ್ಚಿನ ಬಡ್ಡಿ ದರದಲ್ಲಿ ಠೇವಣಿ ಸ್ವೀಕರಿಸುತ್ತಿರುವುದು ಠೇವಣಿಗಳನ್ನು ತಂದು ಕೊಟ್ಟವರಿಗೆ ಕಮಿಷನ್ ಆಮಿಷ ನೀಡುವ ಮುಂತಾದ ಕಾನೂನು ಬಾಹಿರ ಕ್ರಮಗಳನ್ನು ಮಾಡುತ್ತಿರುವುದು ಸಂಗ್ರಹಿಸಿದ ಠೇವಣಿಗಳನ್ನು ಸರಿಯಾದ ಕ್ರಮದಲ್ಲಿ ವಿನಿಯೋಗಿಸದೆ ದುರುಪಯೋಗ ಮಾಡಿ ನಂತರ ಠೇವಣಿದಾರರಿಗೆ ಸಕಾಲದಲ್ಲಿ ಠೇವಣಿದಾರರಿಗೆ ವಾಪಸ್ಸು ಮಾಡಲು ವಿಫಲರಾಗುತ್ತಿರುವುದು ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಒಂದು ರೀತಿಯ ಆರ್ಥಿಕ ಅಶಿಸ್ತು ತೋರುತ್ತದೆ. ಸರಕಾರ ಸಹಕಾರ ಸಂಘಗಳ ನಿಬಂಧಕರು, ಸಾರ್ವಜನಿಕರು ಮತ್ತು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿದೆ.

ಹಲವಾರು ಪಟ್ಟಣ ಸಹಕಾರ ಬ್ಯಾಂಕುಗಳಲ್ಲೂ ಹೀಗೆ ಆಗುತ್ತಿರುವುದನ್ನು ಆರ್.ಬಿ.ಐ ಗಮನಿಸಿದೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಆರ್ಥಿಕ ಶಿಸ್ತು ತರಬೇಕೆಂದು ಭಾರತೀಯ ರಿಸರ್ವ ಬ್ಯಾಂಕಿನವರು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಒಂದು ಸುತ್ತೋಲೆಯನ್ನು ನೀಡಿ ಸದಸ್ಯರಿಂದ ಸ್ವೀಕರಿಸುವ ಠೇವಣಿಗಳಿಗೆ ಬ್ಯಾಂಕು ನೀಡುವ ಬಡ್ಡಿ ಹಾಗೂ ಸದಸ್ಯರಿಗೆ ನೀಡುವ ಸಾಲದ ಮೇಲೆ ಬ್ಯಾಂಕು ಸ್ವೀಕರಿಸುವ ಬಡ್ಡಿ ಈ ಎರಡರ ಮೇಲೂ ಒಂದು ಕಡಿವಾಣವಿರಬೇಕೆಂದು ಆಲೋಚಿಸಿ ಸುತ್ತೋಲೆಯನ್ನು ಹೊರಡಿಸಿರುವುದು ಸ್ವಾಗತಾರ್ಹ

1959ರ ಸಾಂಪ್ರದಾಯಿಕ ಕಾಯ್ದೆ ಅಡಿಯಲ್ಲಿಯೂ ಸಹ ಇದೇ ರೀತಿ ಹಲವಾರು ಪ್ರಕರಣಗಳು ಜರುಗುತ್ತಿರುವುದನ್ನು ನಿಗ್ರಹಿಸಲು ಸಹಕಾರ ಸಂಘಗಳ ನಿಬಂಧಕರು ಕೂಡ ಒಂದು ಸುತ್ತೋಲೆಯನ್ನು ಹೊರಡಿಸುವ ಕಾರ್ಯ ಪ್ರಗತಿಯಲ್ಲಿದೆ. ಶೀಘ್ರದಲ್ಲಿ ನಿಬಂಧಕರು ಸುತ್ತೋಲೆಯನ್ನು ಹೊರಡಿಸುವ ಸಾಧ್ಯತೆ ಇದೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಸಹ ಈ ಬಗ್ಗೆ ಸುದೀರ್ಘ ಚಿಂತನೆ ಮಾಡಿ ಸೌಹಾರ್ದ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮೂಡಿಸುವುದಕ್ಕಾಗಿ ಈ ಕ್ರಮ ಅಗತ್ಯ ಎಂದು ತೀರ್ಮಾನಿಸಿದೆ. ಮಾರ್ಚ್ 10, 2023 ರಂದು ಸುತ್ತೋಲೆಯನ್ನು ಹೊರಡಿಸಿದೆ. ಸುತ್ತೋಲೆಯನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸ್ವಾಭಿಮಾನಿ ಸಹಕಾರಿಯ ಮೇ 2023 ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮವಿಡಲಾಗಿದೆ.

ಸೌಹಾರ್ದ ಸಹಕಾರಿ ಸಂಸ್ಥೆಗಳು ಕೇವಲ ವ್ಯಾಪಾರಿ ಸಂಸ್ಥೆಗಳಲ್ಲ. ಸೇವಾ ಸಂಸ್ಥೆಗಳಾಗಿ ಸದಸ್ಯರ ಅನುಕೂಲಕ್ಕಾಗಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯ ನಿರ್ವಹಿಸಬೇಕೆಂಬುದು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸರಕಾರಗಳ ಸಹಕಾರಿಗಳ ಆಶಯವಾಗಿದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ನೀಡಿದ ಸುತ್ತೋಲೆ ಸೌಹಾರ್ದ ಸಹಕಾರಿಗಳಲ್ಲಿ ಹಣಕಾಸಿನ ಶಿಸ್ತನ್ನು ಬೆಳೆಸುವಲ್ಲಿ ಸಕಾಲಿಕ ಸೂಕ್ತ ಕ್ರಮವಾಗಿದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಸಿರಿತನ – ಬಡತನ"

ಎಲ್ಲರೂ ಬಯಸುವುದು ಸಂತೋಷವನ್ನು, ಜಗತ್ತಿನಲ್ಲಿ ಎಲ್ಲರೂ ಶ್ರೀಮಂತರಾಗಲು ಸಾಧ್ಯವಿಲ್ಲ. ಆದರೆ ಎಲ್ಲರೂ ಸಂತೋಷದಿಂದ ಇರಬಹುದು. ಅದಕ್ಕೆ ಆಧ್ಯಾತ್ಮ ಬೇಕು. ಯಾರಲ್ಲಿ ಅಧ್ಯಾತ್ಮದ ಬೆಳಕು ಇದೆಯೋ ಅವರು ಹೊರಗಿನ ವಸ್ತುಗಳು ಇಲ್ಲದಿದ್ದರೂ ಆರಾಮ ಇರುತ್ತಾರೆ.

ಭರ್ತೃಹರಿ ಒಬ್ಬ ಮಹಾನ್ ರಾಜ, ಎಲ್ಲಾ ಸುಖ ಸೌಲಭ್ಯಗಳಲ್ಲಿ ಮುಳುಗಿದ್ದ. ಒಂದು ದಿನ ಎಲ್ಲವನ್ನೂ ತ್ಯಜಿಸಿ ಸತ್ಯವನ್ನರಸುತ್ತ ಹೊರಟ. ಅವರು ಹೇಳಿದ "ಒಮ್ಮೆ ನಾನು ನೆಲದ ಮೇಲೆ ಮಲಗಿದೆ. ಬರೀ ನೆಲ. ಬಿಸಿಲಿನ ತಾಪವಿದ್ದರೂ ಗಿಡದ ನೆರಳಿದೆ. ಅಲ್ಲೇ ಮಲಗಿದೆ. ಅಲ್ಲಿಯೂ ಆನಂದ, ಕೆಲವು ಸಲ ಅರಮನೆಯಲ್ಲಿ ಮಲಗಿದೆ. ಸಕಲ ಸೌಲಭ್ಯಗಳ ಮಧ್ಯ, ಮೆತ್ತನೆ ಹಾಸಿಗೆ ಮೇಲೆ ನಿದ್ರೆ, ಎರಡೂ ಕಡೆ ಒಂದೇ ನಿದ್ದೆ, ಒಮ್ಮೆ ಉಡಲು ಬಟ್ಟೆ ಇರುವುದಿಲ್ಲ. ಕೆಲವು ಸಲ ರೇಷ್ಮೆ ಬಟ್ಟೆಗಳನ್ನು ಉಟ್ಟಿದ್ದೇನೆ. ಆದರೆ ಯಾವಾಗಲೂ ಹೀಗೇ ಇದ್ದೇನೆ. ಕೆಲವು ಸಲ ಕೇವಲ ಎಲೆಗಳನ್ನು ತಿಂದರೆ, ಇನ್ನೂ ಕೆಲವು ಸಲ ಮೃಷ್ಟಾನ್ನಭೋಜನ ಸೇವಿಸಿದ್ದೇನೆ. ಆದರೆ ಯಾವಾಗಲೂ ನನ್ನ ಮುಖದಲ್ಲಿ ಸಂತಸವಿದೆ. ಕಾರಣ ಅಧ್ಯಾತ್ಮ. ಅಧ್ಯಾತ್ಮವೇ ಸಂತಸದಿಂದ ಬದುಕುವುದನ್ನು ಕಲಿಸುತ್ತದೆ".

ಸಂತಸದಿಂದಿರುವುದು ಒಂದು ಬಗೆಯ ಜ್ಞಾನ. ಅದು ಹೃದಯದಿಂದ ಬರಬೇಕು. ಎಲ್ಲರಿಗೂ ಆ ಜ್ಞಾನ ಬೇಕು. ಆರಾಮವಿರುವುದು ಎದೆಯಲ್ಲಿರುವ ಭಾವಗಳಿಂದ, ಊಟ, ಬಟ್ಟೆ, ಮನೆ, ನಾಲ್ಕು ಜನರ ಪ್ರೀತಿ – ಸಹಕಾರಗಳು ಇದ್ದರೆ ಸಾಕು ಆರಾಮವಾಗಿ ಇರಬಹುದು. ಭಾರತೀಯ ಜನರು ಶ್ರೀಮಂತಿಕೆಯಿರಲಿ ಅಥವಾ ಬಡತನವಿರಲಿ ಆರಾಮದಿಂದ ಇರುತ್ತಾರೆ. ಏಕೆಂದರೆ ಇಲ್ಲಿಯ ಗಾಳಿಯಲ್ಲಿ ಅಧ್ಯಾತ್ಮವಿದೆ. ಇಲ್ಲಿಯ ನೆಲದ ಗುಣ, ನೀರಿನ ಗುಣ ಹಾಗಿದೆ. ಇಲ್ಲಿ ಅಧ್ಯಾತ್ಮ ಹಾಸು ಹೊಕ್ಕಾಗಿದೆ.

ಶಿಷ್ಯ ಕೇಳಿದ, "ಗುರುಗಳೇ ನನಗೆ ಯಾವುದು ಸತ್ಯ ಹಾಗೂ ಈ ಜಗತ್ತು ಹೇಗಿದೆ ಎಂಬುದು ತಿಳಿಯಿತು. ಆದರೆ ಈ ಜಗತ್ತನ್ನು ಯಾರು ನಡೆಸುತ್ತಾರೆ ? ಇದು ಎಷ್ಟು ಕ್ರಮಬದ್ಧವಾಗಿ ಸಾಗಿದೆ. ಇದಕ್ಕೆ ಯಾರು ಕಾರಣ ? ಎಂದು ಕೇಳಿದ, ಅದಕ್ಕೆ ಗುರು ಹೇಳಿದ "ಯಾರು ಮಾಡಿದ್ದಾರೋ ಅವರು ನಡೆಸುತ್ತಾರೆ.

ಮನುಷ್ಯ ಪ್ರಕೃತಿಯೊಂದಿಗೆ ಹೊಂದಿಕೊಂಡು ಬಾಳಬೇಕು. ಗಿಡಕ್ಕೆ ಹನ್ನೆರಡು ತಿಂಗಳೂ ಹಣ್ಣು ಕೊಡು ಎಂದು ಅಜ್ಞೆ ಕೊಟ್ಟರೆ ಅದು ಹೇಳುತ್ತದೆ. "ಮನುಷ್ಯನೇ ನೀನು ನನ್ನನ್ನು ಇಲ್ಲಿ ನೆಟ್ಟಿರಬಹುದು ಅಷ್ಟೇ ಆದರೆ ನೀನು ನನ್ನ ಮಾಲೀಕನಲ್ಲ. ನನ್ನ ಕರ್ತೃ ಬೇರೆಯೇ ಇದ್ದಾನೆ. ನಾನು ಕೇವಲ ಅವನ ಮಾತನ್ನು ಕೇಳುತ್ತೇನೆ". ಸೂರ್ಯ, ಚಂದ್ರ ನಕ್ಷತ್ರ, ನಿಸರ್ಗ – ನಾವು ಹೇಳಿದಂತೆ ಕೇಳುವುದಿಲ್ಲ. ಅವು ಹೇಳುತ್ತವೆ. "ನಾವು ನಿಮ್ಮ ಮಾತು ಕೇಳುವುದಿಲ್ಲ. ನಮ್ಮನ್ನು ಯಾರು ಹುಟ್ಟಿಸಿದ್ದಾರೆಯೋ ಅವರ ಮಾತನ್ನು ಮಾತ್ರ ನಾವು ಕೇಳುತ್ತೇವೆ. ಆ ಹುಟ್ಟಿಸಿದವ ನಮ್ಮ ಮುಂದಿಲ್ಲ. ಹಿಂದಿದ್ದಾನೆ. ಅವನೇ ದೇವರು', ಅದೊಂದು ಅದ್ಭುತವಾದ ವೈಶ್ವಿಕ ಶಕ್ತಿ. ಅದೇ ಎಲ್ಲದಕ್ಕೂ ರೂಪ ಕೊಡುವುದು. ಅದು ವಿಶ್ವಶಕ್ತಿ ಆ ಶಕ್ತಿಗೆ ನಿರಾಕಾರ ದೇವರು ಎನ್ನುತ್ತಾರೆ. ಎಲ್ಲವನ್ನೂ ಅದು ನಿಯಂತ್ರಿಸುತ್ತದೆ. ಅದು ಎಲ್ಲದರ ಒಳಗೆ ಇದೆ. ಈ ಜಗತ್ತಿನ ಕೆಲಸ ಮಾಡುವ ಶಕ್ತಿ ಅದಾಗಿದೆ. ಅದು ಈ ಸಾಕಾರ ಜಗತ್ತನ್ನು ರೂಪಿಸುತ್ತದೆ. ಆದ್ದರಿಂದ ಅದು ಸಾಕಾರ ದೇವರು. ಆ ದೇವರು ಈ ಜಗತ್ತನ್ನು ಮಾಡುವುದರಿಂದ ಅವನನ್ನು ಕರ್ತೃ/ಕರ್ತಾರ ಎನ್ನುತ್ತೇವೆ. ಆ ಕರ್ತೃ ಒಬ್ಬನೇ. ಇಡೀ ಜಗತ್ತಿನಲ್ಲಿ ಒಂದೇ ಶಕ್ತಿ ತುಂಬಿದೆ. ಅವನೇ ಈಶ. ಇಡೀ ಜಗತ್ತಿನ ಮಾಲೀಕ. ಮನುಷ್ಯ ತಾನು ತಯಾರಿಸಿದ ವಸ್ತುಗಳಿಗೆ ಮಾಲೀಕ. ಆದರೆ ಅದರಲ್ಲಿರುವ ಮೂಲ ವಸ್ತುವಿಗೆ ಮಾಲಿಕನಲ್ಲ. ಉದಾಹರಣೆಗೆ ಮನುಷ್ಯ ತಾನು ಕಟ್ಟಿದ ಮನೆಗೆ ಮಾಲೀಕ. ಆದರೆ ಮನೆಯನ್ನು ಕಟ್ಟಲು ಉಪಯೋಗಿಸಿದ ಕಲ್ಲು, ಕಟ್ಟಿಗೆ, ಮಣ್ಣಿಗೆ ಮಾಲಿಕನಲ್ಲ.

ಈ ನಿಸರ್ಗವನ್ನು ರಚಿಸಿದವರಾರು? ಅಕ್ಕಮಹಾದೇವಿ ಹೇಳುತ್ತಾಳೆ, "ಲಿಂಬೆಗೆ ಹುಳಿ, ಕಬ್ಬಿಗೆ ಸಿಹಿ, ಹೂವುಗಳನ್ನು ಪರಿಮಳವನ್ನು ಎರೆದವರಾರು ? ಇಲ್ಲಿ ಲಿಂಬೆ, ಕಬ್ಬು, ಹೂವಿನ ಗಿಡಕ್ಕೆ ಹಾಕಿರುವ ನೀರು ಒಂದೇ ಆದರೂ ಆ ನೀರು ಹುಳಿ, ಸಿಹಿ, ಪರಿಮಳವಾಗಿ ಬದಲಾಗುತ್ತದೆ. ಇದನ್ನು ಮಾಡಿದವರಾರು? ಆ ಮಹಾದೇವನೇ ಅಲ್ಲವೇ?

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 27,258 ಆಗಿರುತ್ತದೆ. ಇವುಗಳ ಪೈಕಿ 15,298 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 11,960.

**ಏಪ್ರಿಲ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 137 ಇತ್ಯರ್ಥಗೊಂಡ ಪ್ರಕರಣಗಳು 209

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,918 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,088 ಪ್ರಕರಣಗಳು ಇತ್ಯರ್ಥಗೊಂಡಿದ್ದು. 4,830 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1029 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 448 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಎಪ್ರಿಲ್ ತಿಂಗಳಿನಲ್ಲಿ 181 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ : 1ನೇ ತಂಡ ಮುಕ್ತಾಯ ನಿರ್ದೇಶಕರ ಭಾಗವಹಿಸುವಿಕೆ ತೃಪ್ತಿದಾಯಕ.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿಯನ್ನು ಬೆಂಗಳೂರಿನಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಎರಡು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ 47 ಸೌಹಾರ್ದ ಸಹಕಾರಿಗಳಿಂದ 88 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

---

### ಸಾಲ ವಸೂಲಾತಿಗೆ ಸುಭದ್ರ ದಾಖಲಾತಿ ಅಗತ್ಯ : ಶ್ರೀ ಅರುಣಕುಮಾರ, ಸದಸ್ಯರು, ಕರ್ನಾಟಕ ಅಪೆಲೇಟ್ ಟ್ರಿಬ್ಯುನಲ್



ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಕರ್ನಾಟಕ ಅಪೆಲೇಟ್ ಟ್ರಿಬ್ಯುನಲ್ ಸದಸ್ಯ ಹಾಗೂ ಸಹಕಾರಿ ಇಲಾಖೆಯ ಅಪರ ನಿಬಂಧಕರಾದ ಶ್ರೀ ಎಸ್ ಅರುಣಕುಮಾರರವರು ಮಾತನಾಡಿ ಸಂಯುಕ್ತ ಸಹಕಾರಿಯ ಜೊತೆಗೆ ಕಳೆದ ಹಲವಾರು ವರ್ಷಗಳ ಒಡನಾಟದಲ್ಲಿದ್ದೇನೆ. ಉತ್ತಮ ತರಬೇತಿ ವ್ಯವಸ್ಥೆಯನ್ನು ಹೊಂದಿದ್ದಾರೆ. ಉತ್ತಮ ವಿಷಯಗಳ ಆಯ್ಕೆ ಇರುತ್ತದೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡುತ್ತಾರೆ. ಕಾರ್ಯಕ್ರಮಗಳನ್ನು ತುಂಬ ಅಚ್ಚುಕಟ್ಟಾಗಿ ನಡೆಸುತ್ತಾರೆ. ಇವತ್ತಿನ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ. ವಿಶೇಷವಾಗಿ ಸಹಕಾರಿ ಸಂಸ್ಥೆಗಳ ಸಾಲ ನೀಡುವುದು ಎಷ್ಟು ಮಹತ್ವದ್ದಾಗಿದೆಯೊ ಅಷ್ಟೆ ಮಹತ್ವದ್ದು. ಸಾಲ ವಸೂಲಾತಿ ಸಂದರ್ಭಗಳಲ್ಲಿ ದಾಖಲಾತಿ ಸರಿ ಇರದಿದ್ದರೆ ಸಾಲ ವಸೂಲಾತಿ ಆಗುವುದಿಲ್ಲ. ಹೀಗಾಗಿ ಸುಭದ್ರ ದಾಖಲಾತಿಗೆ ಹೆಚ್ಚು ಮಹತ್ವ ನೀಡುವುದು ಅಗತ್ಯ ಎಂದು ತಿಳಿಸಿದರು.

---

### ನಿರ್ದೇಶಕರುಗಳಿಗೆ ಆಡಳಿತ ಕೌಶಲ್ಯದ ತರಬೇತಿ ಅಗತ್ಯ : ಶ್ರೀ ಪ್ರಸಾದ ರೆಡ್ಡಿ ಪೀಠಾಧಿಕಾರಿಗಳು, ದಾವಾಪಂಚಾಯಿತಿ ನ್ಯಾಯಾಲಯ, ಬೆಂಗಳೂರು




ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಪ್ರಸಾದ ರೆಡ್ಡಿ ಯವರು ಮಾತನಾಡಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಆಡಳಿತ ಮಂಡಳಿಯವರ ಜವಾಬ್ದಾರಿಗಳಿಗೆ ಹೆಚ್ಚಿನ ಮಹತ್ವ ಇದೆ. ಎಲ್ಲ ಸದಸ್ಯರ ನಿಕಟ ಸಂಪರ್ಕ, ಸಹಕಾರಿಯ ಆರ್ಥಿಕ ಚಟುವಟಿಕೆಗಳು ಅತ್ಯಂತ ಸುಭದ್ರವಾಗಿರಬೇಕಾದರೆ ಅವರಲ್ಲಿ ಆಡಳಿತ ಕೌಶಲ್ಯ ಬೆಳೆಯಬೇಕು. ಇಂತಹ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಅವರಿಗೆ ಆಡಳಿತದಲ್ಲಿ ಪರಿಣಿತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಎಂದು ತಿಳಿಸಿದರು.

---

### ಸೌಹಾರ್ದ ಸಹಕಾರಿಗಳ ಗುಣಮಟ್ಟ ಅಭಿವೃದ್ಧಿಗೆ ನಿರ್ದೇಶಕರುಗಳಿಗೆ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ : ಶ್ರೀ ಜಿ. ನಂಜನಗೌಡ, ಅಧ್ಯಕ್ಷರು, ಕೆ.ಎಸ್.ಎಸ್.ಎಫ್.ಸಿ.ಎಲ್.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಜಿ. ನಂಜನಗೌಡರವರು ಸಂಯುಕ್ತ ಸಹಕಾರಿ ರಾಜ್ಯದ ಸೌಹಾರ್ದ ಸಹಕಾರಿಗಳ ಗುಣಮಟ್ಟ ರಕ್ಷಣೆಗೆ ರಾಜ್ಯದಾದ್ಯಂತ ವಿಭಾಗೀಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಹಮ್ಮಿಕೊಳ್ಳುತ್ತದೆ. ಅದರಲ್ಲೂ ವರ್ಷದ ಪ್ರಪ್ರಥಮ ಕಾರ್ಯಕ್ರಮವವನ್ನು ಸೌಹಾರ್ದ ಸಹಕಾರಿಗಳ ನಿರ್ದೆಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿಯನ್ನು ಕಳೆದ ಹಲವಾರು ವರ್ಷಗಳಿಂದ ಹಮ್ಮಿಕೊಳ್ಳುತ್ತ ಬಂದಿದೆ. ಉತ್ತಮ ವಿಷಯಗಳ ಆಯ್ಕೆ ಮಾಡುತ್ತೇವೆ. ಉತ್ತಮ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ವ್ಯವಸ್ಥೆ ಇರುತ್ತದೆ. ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳು ಅಷ್ಟೆ ಉತ್ಸಾಹದಿಂದ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳ ಗುಣಮಟ್ಟ ವೃದ್ಧಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.



## ನಿರ್ದೇಶಕರುಗಳಿಗೆ ಕರ್ತವ್ಯ ಹಾಗೂ ಜವಾಬ್ದಾರಿಗಳ ಅರಿವು ಅಗತ್ಯ.

**: ಶ್ರೀ ಎ .ಆರ್. ಪ್ರಸನ್ನಕುಮಾರ, ಉಪಾಧ್ಯಕ್ಷರು, ಕೆ.ಎಸ್.ಎಸ್.ಎಫ್.ಸಿ.ಎಲ್.**

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರರವರು ಸಹಕಾರ ಸಂಸ್ಥೆಗಳನ್ನು ಕಟ್ಟುವುದು ಬಹಳ ಸರಳ ಆದರೆ ಅವುಗಳನ್ನು ನಡೆಸಿಕೊಂಡು ಹೋಗುವುದು ಅತ್ಯಂತ ಮಹತ್ವದ್ದಾಗಿದೆ. ಸಹಕಾರ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಲು ಅಧ್ಯಕ್ಷರಾದಿಯಾಗಿ ಎಲ್ಲ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು ಸಿಬ್ಬಂದಿಯವರು ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡುವುದರ ಜೊತೆಗೆ ಅಗತ್ಯ ಜ್ಞಾನವನ್ನು ಹೊಂದಿರಬೇಕಾಗುತ್ತದೆ. ಅವರನ್ನೆಲ್ಲ ಉತ್ತಮ ಸಹಕಾರಿ ಜ್ಞಾನವಂತರನ್ನಾಗಿಸುವುದಕ್ಕಾಗಿ ಸಂಯುಕ್ತ ಸಹಕಾರಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ತರಬೇತಿ ಪಡೆದ ನಿರ್ದೇಶಕರುಗಳು ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ನೂತನ ವಿಷಯಗಳ ಅಳವಡಿಕೆಗೆ ಚಿಂತನೆ ಮಾಡಬೇಕು ಎಂದು ತಿಳಿಸಿ ಶಿವಮೊಗ್ಗ ಸೌಹಾರ್ದ ಸಹಕಾರಿಗಳ ಒಕ್ಕೂಟದ ನೇತೃತ್ವದಲ್ಲಿ ಕೊಡಚಾದ್ರಿಯ ಮಡಿಲಲ್ಲಿ ಒಂದು ಉತ್ತಮ ಅಂತರರಾಷ್ಟ್ರೀಯ ಮಟ್ಟದ ಸಹಕಾರ ತರಬೇತಿಗಳನ್ನು ನಡೆಸುವುದಕ್ಕಾಗಿ ರೆಸಾರ್ಟ್ ಮಾದರಿಯಲ್ಲಿ ಸಹಕಾರಿ ರೆಸಾರ್ಟ ನಿರ್ಮಾಣಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದ ಎಲ್ಲ ಸಹಕಾರಿಗಳು ಈ ಕೇಂದ್ರದಲ್ಲಿ ಬಂದು ಸಭೆ ಸಮಾರಂಭಗಳನ್ನು ನಡೆಸಲು, ಸಭಾಂಗಣ, ತರಬೇತಿ ಹಾಲ್‌ಗಳು, ವಸತಿ ವ್ಯವಸ್ಥೆ, ಊಟ ಉಪಹಾರಗಳ ವ್ಯವಸ್ಥೆ ಉತ್ತಮ ಪರಿಸರ ವ್ಯವಸ್ಥೆ ಇರುತ್ತದೆ ಎಂದು ತಿಳಿಸಿದರು.



## ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆ : ಸಂಯುಕ್ತ ಸಹಕಾರಿಯ ಗುರಿ.

**: ಶ್ರೀ ಶರಣಗೌಡ ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಕರು, ಕೆ.ಎಸ್.ಎಸ್.ಎಫ್.ಸಿ.ಎಲ್.**

ಪ್ರಾರಂಭದಲ್ಲಿ ಶ್ರೀಮತಿ ಹರ್ಷಪ್ರಭ ಮತ್ತು ಸಿಂಧು ಇವರುಗಳು ಪ್ರಾರ್ಥನೆ ನಡೆಸಿಕೊಟ್ಟರು ಶ್ರೀ ಆರ್.ಶೋಭ. ಉಪಪ್ರಧಾನ ವ್ಯವಸ್ಥಾಪಕರು ಇವರು ಸ್ವಾಗತ ಕೋರಿದ ನಂತರ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ್ ರವರು ಪ್ರಾಸ್ತಾವಿಕ ನುಡಿಗಳನ್ನು ಹೇಳುತ್ತ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿ ಪ್ರತಿವರ್ಷ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸೌಹಾರ್ದ ಸಹಕಾರಿಗಳ ಗುಣಮಟ್ಟ ಅಭಿವೃದ್ಧಿಯೇ ಸಂಯುಕ್ತ ಸಹಕಾರಿಯ ಗುರಿಯಾಗಿದೆ ಎಂದು ತಿಳಿಸುತ್ತ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ವಿವರಗಳನ್ನು ತಿಳಿಸಿದರು. ಕೊನೆಯಲ್ಲಿ ಶ್ರೀಮತಿ ಸವಿತಾ ಎನ್.ಇ.ಇವರು ವಂದನಾರ್ಪಣೆ ನೇರವೇರಿಸಿದರು.

ಎರಡು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಡಾ. ಎಸ್.ಎ.ಸಿದ್ದಾಂತಿ, ಡಾ ನಂದೀಶ ಹಿರೇಮಠ, ಶ್ರೀಮತಿ ಮೀನಾಕ್ಷಿ ಖಂಡೀಮಠ, ಡಾ.ಹರೀಶ, ಶ್ರೀ ವೈ.ವಿ.ಗುಂಡೂರಾವ ಇವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

## ಸಮಾರೋಪ ಕಾರ್ಯಕ್ರಮ



**ನಿರ್ದೇಶಕರುಗಳು ಸಹಕಾರಿ ಸಂಸ್ಥೆಗಳ ಟ್ರಸ್ಟೀಗಳು : ಶ್ರೀ ಬಿ.ಎಸ್. ಗುಂಡೂರಾವ, ನಿರ್ದೇಶಕರು, ಕೆ.ಎಸ್.ಎಸ್.ಎಫ್.ಸಿ.ಎಲ್.**

ಎರಡು ದಿನಗಳ ತರಬೇತಿ ಕೊನೆಯಲ್ಲಿ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಕಾರ್ಯಕ್ರಮದ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು, ವ್ಯವಸ್ಥೆ ಎಲ್ಲವೂ ಉತ್ತಮವಾಗಿತ್ತು ಎಂದು ಅಭಿಪ್ರಾಯ ತಿಳಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಸಮಾರೋಪ ಭಾಷಣ ಮಾಡಿದರು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವರವರು ಎಲ್ಲ ಅಭ್ಯರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ ಒಂದು ನೆನಪಿನ ಕಾಣಿಕೆಯನ್ನು ನೀಡಿದ ನಂತರ ಮಾತನಾಡುತ್ತ ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕ ಮಂಡಳಿಯವರಿಗೆ ಹೆಚ್ಚಿನ ಜವಾಬ್ದಾರಿ ಇದೆ. ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದರೆ ವಿಷಯಗಳ ತಿಳುವಳಿಕೆ ಇರಬೇಕಾಗುತ್ತದೆ. ಅದಕ್ಕಾಗಿಯೇ ಇಂತಹ ತರಬೇತಿಗಳನ್ನು ಸಂಯುಕ್ತ ಸಹಕಾರಿಯ ವತಿಯಿಂದ ವ್ಯವಸ್ಥೆ ಮಾಡಲಾಗುತ್ತದೆ. ನಿರ್ದೇಶಕರುಗಳೆಂದರೆ ಒಂದು ಸಂಸ್ಥೆಯ ಧರ್ಮದರ್ಶಿಗಳಿದ್ದಂತೆ (ಟ್ರಸ್ಟೀಸ್) ಎಂದು ತಿಳಿಸಿದರು.

ಉಪಪ್ರಧಾನ ವ್ಯವಸ್ಥಾಪಕ ಶ್ರೀ ಆರ್. ರಘುನಂದನ ವಂದನಾರ್ಪಣೆ ಮಾಡಿದರು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಕೌಶಲ್ಯ ಅಭಿವೃದ್ಧಿ ಹಾಗೂ ಅಧ್ಯಯನ ಪ್ರವಾಸ ತರಬೇತಿ




**ಬೆಳಗಾವಿ :** ದಿನಾಂಕ 07.04.2023 ರಂದು ಸಂಯುಕ್ತ ಸಹಕಾರಿಯ ಸಮಸ್ತ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯ ಅನುಮೋದಿತ ವಾರ್ಷಿಕ ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ 3 ದಿನಗಳ ಕೌಶಲ್ಯಾಭಿವೃದ್ಧಿ ಹಾಗೂ ಅಧ್ಯಯನ ಪ್ರವಾಸವನ್ನು ದಿನಾಂಕ 7, 8, ಹಾಗೂ 9 ಏಪ್ರೀಲ್ 2023 ರಂದು ಬೆಳಗಾವಿಯಲ್ಲಿ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಆವರಣದಲ್ಲಿ ಏರ್ಪಡಿಸಲಾಗಿತ್ತು.



## ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. : ಶ್ರೀ ಎಮ್ ಎನ್ ಮಣಿ, ಸಹಕಾರ ಸಂಘಗಳ ಉಪನಿಬಂಧಕರು.

ಕಾರ್ಯಕ್ರಮದ ಉದ್ಘಾಟನೆಯನ್ನು ಬೆಳಗಾವಿಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎಮ್ ಎನ್ ಮಣಿಯವರು ನೆರವೇರಿಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾದ ಮಾರ್ಗದರ್ಶನವನ್ನು ನೀಡುತ್ತಲಿದ್ದಾರೆ. ಈ ರೀತಿಯ ತರಬೇತಿ ಕಾರ್ಯಕ್ರಮಗಳು ಅಧಿಕಾರಿಗಳ ಕ್ಷಮತೆಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದರು.

## ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ತರಬೇತಿ ಕಾರ್ಯಕ್ರಮಗಳು ಅವಶ್ಯಕ. : ಶ್ರೀ ರವೀಂದ್ರ ಪಾಟೀಲ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು.



ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಶ್ರೀ ರವೀಂದ್ರ ಪಾಟೀಲ್‌ರವರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಇಂತಹ ತರಬೇತಿ ಕಾರ್ಯಕ್ರಮಗಳು ಅತ್ಯಂತ ಅವಶ್ಯಕ. ರಾಜ್ಯದ ಸೌಹಾರ್ದ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಂಯುಕ್ತ ಸಹಕಾರಿ ಅನೇಕ ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಂತೋಷದಾಯಕ ಎಂದು ತಿಳಿಸಿದರು.



## ಕೌಶಲ್ಯ, ವೃತ್ತಿಪರತೆ ಹಾಗು ವೇಗ ಹೆಚ್ಚಿಸಲು ಈ ತರಬೇತಿ : ಶ್ರೀ ಶರಣಗೌಡ. ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಪ್ರತಿವರ್ಷ ಅವರ ಕೌಶಲ್ಯಾಭಿವೃದ್ಧಿ, ಕ್ಷಮತೆ ಹಾಗೂ ವೃತ್ತಿಪರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚಿಂತನೆ ಮಾಡುತ್ತ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬಂದಿದೆ. ಸಿಬ್ಬಂದಿಯವರಲ್ಲಿ ದಕ್ಷತೆ ಹೆಚ್ಚಬೇಕು. ವೃತ್ತಿಪರತೆ ಬೆಳೆಯಬೇಕು. ಕೆಲಸವನ್ನು ಹೆಚ್ಚು ಕೌಶಲ್ಯತೆಯಿಂದ ಮಾಡಬೇಕು. ಅದಕ್ಕಾಗಿ ಈ ರೀತಿಯ ತರಬೇತಿಗಳನ್ನು ಏರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು.

## ಭವಿಷ್ಯವನ್ನು ಚೆನ್ನಾಗಿ ರೂಪಿಸಿ : ಕುಟುಂಬವನ್ನು ಪ್ರೀತಿಸಿ ಪೋಷಿಸಿ. ಕುಟುಂಬವೇ ಶಕ್ತಿ ಕೇಂದ್ರ, ಮನಸ್ಥಿತಿ ಬದಲಾದರೆ ಪರಿಸ್ಥಿತಿ ಬದಲಾಗುತ್ತದೆ. : ಶ್ರೀ ಮಹೇಶ ಮಾಶಾಳ.



ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದ ಕಾರ್ಪೋರೇಟ್ ಟ್ರೇನರ್ ಶ್ರೀ ಮಹೇಶ ಮಾಶಾಳರವರು ಜೀವನದಲ್ಲಿ ಅನೇಕ ಬಾರಿ ಅನೇಕ ವಿಷಯಗಳಿಗೆ ನಕಾರಾತ್ಮಕವಾಗಿ ಸ್ಪಂದಿಸುವುದು ವ್ಯಕ್ತಿತ್ವವನ್ನು ಬ್ರಾಂಡ್ ಮಾಡುತ್ತದೆ.

ಸಂತೋಷ ಕೊಡುವುದಿಲ್ಲ ಸಕಾರಾತ್ಮಕವಾಗಿರುವುದರಿಂದ ವ್ಯಕ್ತಿತ್ವಕ್ಕೆ ಹೆಚ್ಚು ಗೌರವ ಹಾಗೂ ಆಕರ್ಷಣೆ ಬರುತ್ತದೆ. ನಮ್ಮ ಜೀವನ ನಮ್ಮ ಭವಿಷ್ಯ ಚೆನ್ನಾಗಿ ರೂಪಿಸಿಕೊಳ್ಳಲು ಬಾಗಿಲುಗಳು ತೆರೆಯುತ್ತವೆ. ಅವಕಾಶಗಳು ಬಂದಾಗ ಅವುಗಳ ಸದುಪಯೋಗಕ್ಕೆ ನಾವು ಸಿದ್ಧರಿರಬೇಕು. ನಮಗೆ ಬೇಕಾದಾಗ ಅವುಗಳು ಬರುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ನಮ್ಮ ಕುಟುಂಬಗಳು. ನಾವು ಕುಟುಂಬಗಳನ್ನು ಪ್ರೀತಿಸಬೇಕು. ನಮಗೆ ಅವರುಗಳೇ ಶಕ್ತಿ ಕೇಂದ್ರಗಳು ಅವರುಗಳನ್ನು ಚೆನ್ನಾಗಿ ಪೋಷಿಸಬೇಕು ಆದ್ದರಿಂದ ಮನಸ್ಥಿತಿ ಬದಲಾಯಿಸಿಕೊಳ್ಳುವುದು ಅವಶ್ಯಕ. ಮನಸ್ಥಿತಿ ಬದಲಾದರೆ ಪರಿಸ್ಥಿತಿ ಬದಲಾಗುತ್ತದೆ. ಎಂದು "ನರ್ಚರ್ ದ ಫ್ಯೂಚರ್" ಎಂಬ ವಿಷಯವಾಗಿ ಸುದೀರ್ಘ ಉತ್ತಮ ಉಪನ್ಯಾಸ ಮಾಡಿದರು.

ನಂತರದಲ್ಲಿ ಶ್ರೀ ಉಪಪ್ರಧಾನ ವ್ಯವಸ್ಥಾಪಕರುಗಳಾದ ಶ್ರೀ ನಾರಾಯಣ ಹೆಗಡೆ ಹಾಗೂ ಶ್ರೀ ಶ್ರೀಕಾಂತ ಬರುವೆ ಇವರುಗಳು ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯ ಸಂದರ್ಭದಲ್ಲಿ ಅನುಸರಿಬಹುದಾದ ವಿಷಯಗಳ ಚರ್ಚೆಯ ಮುಖಾಂತರ ವಿವರಣೆ ನೀಡಿದರು. ಚರ್ಚೆ ಬಹಳ ಪರಿಣಾಮಕಾರಿಯಾಗಿ ನಡೆಯಿತು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು "ಸಂಯುಕ್ತ ಸಹಕಾರಿಯ ದೃಷ್ಟಿ (ವಿಶನ್) 2030" ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳ್ಳಿ ಹಬ್ಬದ ಆಚರಣೆ ಯಾವ ರೀತಿಯಲ್ಲಿರಬೇಕು ಎಂಬುವುದಕ್ಕೆ ಅನೇಕ ವಿಚಾರಗಳನ್ನು ಪ್ರಸ್ತಾವಿಸಿ ಎಲ್ಲರೂ ಈ ನೀಲ ನಕ್ಷೆಯನ್ನು ಸಿದ್ಧಪಡಿಸಲು ಸೂಚಿಸಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಹಿಳಾ ಶ್ರೀ ಹರ್ಷಪ್ರಭ, ಶ್ರೀಮತಿ ಮಲ್ಲಮ್ಮ ಮತ್ತು ಕುಮಾರಿ ಅಕ್ಷತರವರು ಪ್ರಾರ್ಥನೆ ಮಾಡಿದರು. ಸ್ವಾಗತವನ್ನು ಶ್ರೀ ಬಸವರಾಜ ಹೊಂಗಲರವರು ನೆರವೇರಿಸಿದರು. ಶ್ರೀ ರಘುನಂದನರವರು ಪ್ರಾಸ್ತಾವಿಕವನ್ನು ನೆರವೇರಿಸಿದರು. ವಂದನಾರ್ಪಣೆಯನ್ನು ಶ್ರೀ ಶಿವಕುಮಾರ ಬಿರಾದಾರರವರು ನೇರವೇರಿಸಿದರು, ಸಾಯಂಕಾಲ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಶ್ರೀ ಸುಭಾಷ ಹೆಗಡೆಯವರು ಮೊಟಿವೇಶನ್, ಕಮ್ಯೂನಿಕೇಶನ್‌ಮತ್ತು ಟೀಮ್ ಬಿಲ್ಡಿಂಗ್ ಬಗ್ಗೆ ಗ್ರೂಪ್ ಗೇಮ್ಸ್ ಆಡಿಸುವುದರ ಮೂಲಕ ವಿಷಯಗಳನ್ನು ತಿಳಿಸಿಕೊಟ್ಟರು.

---

## ದಿನಾಂಕ : 08.04.2023

ಎರಡನೇ ದಿನದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಹಿಳಾ ಸಿಬ್ಬಂದಿಯವರಾದ ಶ್ರೀಮತಿ ರೇಣುಕಾ, ಶ್ರೀಮತಿ ಮಲ್ಲಮ್ಮ, ಕುಮಾರಿ ಅಕ್ಷತಾ, ಇವರುಗಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸ್ವಾಗತವನ್ನು ಉಪಪ್ರಧಾನ ವ್ಯವಸ್ಥಾಪಕ ಶ್ರೀ ಶ್ರೀಕಾಂತ ಬರುವೆ ಇವರು ನಡೆಸಿಕೊಟ್ಟರು. ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ನಡೆಸಿಕೊಟ್ಟರು.

---

## ಸಂಸ್ಥೆ ನನ್ನದು. ಇದರ ಅಭಿವೃದ್ಧಿ ನನ್ನ ಗುರಿ ಮಾನಸಿಕತೆ ಬೆಳೆಸಿಕೊಳ್ಳಿ : ಶ್ರೀ ಎ. ಆರ್. ಪ್ರಸನ್ನಕುಮಾರ, ಉಪಾಧ್ಯಕ್ಷರು, ಕೆ.ಎಸ್.ಎಸ್.ಎಫ್.ಸಿ.ಎಲ್.



ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ.ಆರ್.ಪ್ರಸನ್ನಕುಮಾರರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ. ಪ್ರತಿಯೊಬ್ಬ ಸಿಬ್ಬಂದಿಯವರು ಸಂಸ್ಥೆ ನನ್ನದು ಇದರ ಅಭಿವೃದ್ಧಿ ನನ್ನ ಗುರಿ ಎಂಬ ಮಾನಸಿಕತೆ ಬೆಳೆಸಿಕೊಳ್ಳುವುದು ಅಗತ್ಯ. ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಸವಾಲುಗಳು ಅನೇಕ ಬರುತ್ತವೆ. ಅದೇ ರೀತಿ ಅವಕಾಶಗಳು ಸಾಕಷ್ಟಿವೆ. ನಕಾರಾತ್ಮ ಭಾವನೆಗಳಿಂದ ದೂರ ಸರಿದು ಸಕಾರಾತ್ಮಕವಾಗಿ ಸ್ಪಂದಿಸಿದಾಗ ಸಂಸ್ಥೆಯ ಕಾರ್ಯ ಸುಗಮವಾಗುತ್ತದೆ. ಸಂಸ್ಥೆ ಅಭಿವೃದ್ಧಿ ಪಥದಲ್ಲಿ ಸಾಗುತ್ತದೆ ಹಾಗೂ ನಿಮ್ಮ ವ್ಯಯಕ್ತಿಕ ಬದುಕು ಸುಂದರವಾಗುತ್ತದೆ. ಎಂದು ತಿಳಿಸಿದರು.

---



## ಪ್ರತಿ ಜಿಲ್ಲೆಗೆ ಒಂದು ಮಾದರಿ ಸೌಹಾರ್ದ ಸಹಕಾರಿ ಅಭಿಯಾನ ಪ್ರಾರಂಭಿಸಿ : : ಶ್ರೀ ಮಂಜುನಾಥ ಎಸ್. ಕೆ. ನಿರ್ದೇಶಕರು, ಕೆ.ಎಸ್.ಎಸ್.ಎಫ್.ಸಿ.ಎಲ್.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ.ಎಸ್.ಮಂಜುನಾಥರವರು ಮಾತನಾಡುತ್ತ 119 ವರ್ಷಗಳ ಇತಿಹಾಸವಿರುವ ಹಳೆಯ ಕಾಯ್ದೆಯ ಸಹಕಾರಿ ಸಂಸ್ಥೆಗಳು ಮಾಡಲಾಗದ್ದನ್ನು 22 ವರ್ಷಗಳ ಇತಿಹಾಸವಿರುವ ಸೌಹಾರ್ದ ಸಹಕಾರಿ ಕ್ಷೇತ್ರ ಸಾಧಿಸಿದೆ ಎಂಬ ಹೆಗ್ಗಳಿಕೆ ನಮ್ಮ ಕ್ಷೇತ್ರದ್ದಾಗಬೇಕಾದರೆ ಪ್ರತಿ ಜಿಲ್ಲೆಯಲ್ಲಿ ಒಂದು ಮಾದರಿ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಮಾಡುವಲ್ಲಿ ನಮ್ಮ ಸಿಬ್ಬಂದಿಯವರು ಕಾರ್ಯನಿರ್ವಹಿಸಬೇಕು. ಅದಕ್ಕಾಗಿ ನಿಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಿ .ಜ್ಞಾನವನ್ನು ಹೆಚ್ಚಿಸಿಕೊಳ್ಳಿ, ಕೌಶಲ್ಯತೆಯನ್ನು ಬೆಳೆಸಿಕೊಳ್ಳಿ. ಸಹಕಾರಿ ಸಂಸ್ಥೆಗಳು ತಮಗೆ ಬೇಕಾದ ಮಾಹಿತಿ ಪಡೆಯುವುದಕ್ಕಾಗಿ ನಿಮ್ಮನ್ನು ಹುಡುಕಿಕೊಂಡು ಬರುವ ಹಾಗೆ ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ ಎಂದು ತಿಳಿಸಿದರು.



## ಸಿಬ್ಬಂದಿಯವರು ಸಂಸ್ಥೆಯ ಆಸ್ತಿಯಾಗಿ : ಜವಾಬ್ದಾರಿ ಎನಿಸಬಾರದು.

### : ಶ್ರೀ ಗುರುನಾಥ ಜಾಂತೀಕರ, ನಿರ್ದೇಶಕರು, ಕೆ.ಎಸ್.ಎಸ್.ಎಫ್.ಸಿ.ಎಲ್.

ಸಂಯುಕ್ತ ಸಹಕಾರಿಯ ಹಾಲಿ ನಿರ್ದೇಶಕರು ಮಾಜಿ ಅಧ್ಯಕ್ಷರೂ ಆಗಿರುವ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಸಿಬ್ಬಂದಿಯವರು ಉತ್ತಮ ಹವ್ಯಾಸಗಳನ್ನು ರೂಢಿಸಿಕೊಂಡು ಆರೋಗ್ಯವಂತರಾಗಿದ್ದು ಉತ್ತಮ ಮಾನಸಿಕತೆಯಿಂದ ಕಾರ್ಯನಿರ್ವಹಿಸಬೇಕು. ಸಮಯ ಪ್ರಜ್ಞೆ, ಶಿಸ್ತುದಕ್ಷತೆ ಇವುಗಳು ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ. ಎಂದು ತಿಳಿಸಿ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯ ಬಗ್ಗೆ ವಿವರವಾದ ಮಾಹಿತಿಗಳನ್ನು ಹಂಚಿಕೊಂಡರು.

## ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸೌಲಭ್ಯ ನೀಡುವುದು ಸಹಕಾರ ಕ್ಷೇತ್ರ ಮಾತ್ರ. :

### ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರು, ಕೆ.ಎಸ್.ಎಸ್.ಎಫ್.ಸಿ.ಎಲ್.



ಸಂಯುಕ್ತ ಸಹಕಾರಿ ಮಾಜಿ ಉಪಾಧ್ಯಕ್ಷರೂ ಹಾಲಿ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಬೆಳಗಾವಿ ಜಿಲ್ಲೆ ಸಹಕಾರಿ ಕ್ಷೇತ್ರದ ತವರು. ಆಡು ಮುಟ್ಟದ ಸೊಪ್ಪಿಲ್ಲ ರವಿಕಾಣದ ಸೂಬಗಿಲ್ಲ ಎಂಬಂತೆ ಬೆಳಗಾವಿ ಜಿಲ್ಲೆಯಲ್ಲಿ ಎಲ್ಲ ವಿಧವಾದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿಶೇಷವಾಗಿ ಹುಕ್ಕೇರಿಯ ವಿದ್ಯುಚ್ಛಕ್ತಿ ಸಹಕಾರ ಸಂಘ, ಚಂದರಗಿ ಸ್ಪೋರ್ಟ್ಸ ಸಹಕಾರಿ ಸಂಘ, ಸಹಕಾರ ಸಕ್ಕರೆ ಕಾರ್ಖಾನೆಗಳು ಮತ್ತು ಘಟಪ್ರಭ ಜೆ.ಜೆ ಸಹಕಾರಿ ಹಾಸ್ಪಿಟಲ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರಿ ಬ್ಯಾಂಕುಗಳು ಕ್ರೆಡಿಟ್ ಸಹಕಾರ ಸಂಘಗಳು ಕೃಷಿ ಪತ್ತಿನ ಸಹಕಾರ ಸಂಘಗಳ ಬಗ್ಗೆ ವಿವರ ನೀಡುತ್ತ ಸಹಕಾರ ಕ್ಷೇತ್ರದಲ್ಲಿ ಎಲ್ಲ ಸಮಸ್ಯೆಗಳಿಗೆ ಪರಿಹಾರವಿದೆ. ಸಿಬ್ಬಂದಿಯವರು ತಾವು ಪಡೆಯುವ ಸಂಬಳಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಸಿಬ್ಬಂದಿಯವರು ವ್ಯಕ್ತಿ ನಿಷ್ಠರಾಗದೆ ಸಂಸ್ಥೆಗೆ ನಿಷ್ಠರಾಬೇಕು ಎಂದು ಕರೆನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಜಿ.ಎನ್.ಪಾಟೀಲ್, ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಉಪಸ್ಥಿತರಿದ್ದರು.

ಮಧ್ಯಾಹ್ನದ ಉಪನ್ಯಾಸರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಕಛೇರಿ ಆಡಳಿತ ಹಾಗೂ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ 107 ಸಿಬ್ಬಂದಿಯವರಲ್ಲಿ 96 ಸಿಬ್ಬಂದಿಯವರು ಸಕ್ರೀಯವಾಗಿ ಭಾಗವಹಿಸಿದ್ದರು. ಶ್ರೀ ಸೂರ್ಯಕಾಂತ ರ್‍ಯಾಕಲೇಯವರು ವಂದನಾರ್ಪಣೆ ನೇರವೇರಿಸಿದರು.

## ಅಧ್ಯಯನ ಪ್ರವಾಸ

ಅಧ್ಯಯನ ಪ್ರವಾಸದ ಅಂಗವಾಗಿ ಕೆ.ಎಮ್.ಎಫ್ ಬೆಳಗಾವಿ, ನಿಪ್ಪಾಣಿಯ ಶ್ರೀ ಮಹಾತ್ಮಾ ಬಸವೇಶ್ವರ ಸೌಹಾರ್ದ ಸಹಕಾರಿ ಹಾಗೂ ಶ್ರದ್ಧಾ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲಾಯಿತು.

## ಅಧ್ಯಯನ ಪ್ರವಾಸ ಅನಿಸಿಕೆಗಳು

ದಿನಾಂಕ 09.04.2023 ರಂದು ಸಂಜೆ ನಡೆದ ಸರಳ ಸಮಾರೋಪ ಕಾರ್ಯಕ್ರಮದಲ್ಲಿ ಅನೇಕ ಸಿಬ್ಬಂದಿಯವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿ ಕಾರ್ಯಕ್ರಮ ಬಹಳ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು ನಿರ್ವಹಣೆಯೂ ಅಷ್ಟೇ ಉತ್ತಮವಾಗಿತ್ತು. ಆಳವಡಿಸಿದ ವಿಷಯಗಳು ಉತ್ತಮ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯಗಳ ಮಂಡನೆಯಾಗಿದೆ. ನಮ್ಮ ಕೌಶಲ್ಯಗಳನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಗಿದೆ. ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.



ಶ್ರದ್ಧಾ ಸೌಹಾರ್ದ ಸಹಕಾರಿಗೆ ಭೇಟಿ




ಶ್ರೀ ಮಹಾತ್ಮ ಬಸವೇಶ್ವರ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರನ್ನು ಸನ್ಮಾನಿಸಿದರು

# ತಮಿಳುನಾಡಿನ ಸಹಕಾರಿ ಇಲಾಖೆಯ ಅಧಿಕಾರಿಗಳು ಕರ್ನಾಟಕದಲ್ಲಿನ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಹಾಗೂ ಚಿಟ್ ಫಂಡ್ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರ ಸಂಘಗಳ ಬಗ್ಗೆ ಅಧ್ಯಯನ ಮಾಡಲು ಬಂದಿರುವ ತಂಡವು ಸಂಯುಕ್ತ ಸಹಕಾರಿಗೆ ಹಾಗೂ ಉದಯ ಮತ್ತು ಸ್ಪಂದನ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದ ವರದಿ.



ದಿನಾಂಕ 26.04.2023 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ತಮಿಳುನಾಡು ಸಹಕಾರಿ ಇಲಾಖೆಯ ಉನ್ನತ ಅಧಿಕಾರಿಗಳು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಸೌಹಾರ್ದ ಕಾಯ್ದೆಯ ಅಧ್ಯಯನಕ್ಕಾಗಿ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಬೆಂಗಳೂರಿನ ಸಹಕಾರಿ ಇಲಾಖೆಯ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

| ತಮಿಳುನಾಡಿನ ಸಹಕಾರಿ ಇಲಾಖೆಯ ಅಧಿಕಾರಿಗಳು | | ಸಂಯುಕ್ತ ಸಹಕಾರಿಯ ಅಧಿಕಾರಿಗಳು | |
|---|---|---|---|
| ಶ್ರೀ ಎಂ ಮುರುಗನ್ | ಅಪರ ನಿಬಂಧಕರು | 1. ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು |
| ಡಾ॥ ಕೆ.ಸಿ ರವಿಚಂದ್ರನ್ | ಜಂಟಿ ನಿಬಂಧಕರು | 2. ಶ್ರೀ ನಾರಾಯಣ ಹೆಗಡೆ | ಉಪ ಪ್ರಧಾನ ವ್ಯವಸ್ಥಾಪಕರು |
| ಶ್ರೀ ಜಿ.ಕೆ ರಾಜಕುಮಾರ್ | ಜಂಟಿ ನಿಬಂಧಕರು | 3. ಶ್ರೀ ರಘುನಂದನ್ ಕೆ | ಉಪ ಪ್ರಧಾನ ವ್ಯವಸ್ಥಾಪಕರು |
| ಶ್ರೀ ಯು ದೊರೆಸ್ವಾಮಿ | ಉಪ ನಿಬಂಧಕರು | 4. ಶ್ರೀ ರಾಜಶೇಖರ್ ಹೆಚ್ | ಸಹ ಪ್ರಧಾನ ವ್ಯವಸ್ಥಾಪಕರು |
| ಶ್ರೀ ಪಾರ್ಥಿಬನ್ | ಉಪ ನಿಬಂಧಕರು | 5. ಶ್ರೀ ಸುರೇಶ್ ಆರ್.ಎಸ್ | ವ್ಯವಸ್ಥಾಪಕರು |
| ಸಹಕಾರ ಇಲಾಖೆಯ ಅಧಿಕಾರಿಗಳು | | 6. ಶ್ರೀ ವಿ.ಜೆ ಕಾರಕೂನ | ತರಬೇತಿ ಅಧಿಕಾರಿಗಳು |
| ಶ್ರೀ ಬಿ ಜಯಪ್ರಕಾಶ್ | ಜಂಟಿ ನಿಬಂಧಕರು (ಕಾನೂನು ಕೋಶ) | 7. ಶ್ರೀ ರಾಜೇಂದ್ರ ಶಿಂಧೆ | ವ್ಯವಸ್ಥಾಪಕರು (ಇ–ಸ್ಟಾಂಪಿಂಗ್) |
| ಶ್ರೀ ಪಿ ಶಶಿಧರ್ | ಉಪ ನಿಬಂಧಕರು (4ನೇ ವಲಯ) | 8. ಶ್ರೀಮತಿ ಸಿಂಧು ಸಿ.ಟಿ | ವ್ಯವಸ್ಥಾಪಕರು (ತಂತ್ರಾಂಶ) |
| ಶ್ರೀ ಬಿ.ಕೆ ಸಲೀಂ | ಉಪ ನಿಬಂಧಕರು (3ನೇ ವಲಯ) | 9. ಶ್ರೀ ಮಹಾಂತಪ್ಪ ಎಸ್ | ವ್ಯವಸ್ಥಾಪಕರು (ಶಾಸನಾತ್ಮಕ ವಿಭಾಗ) |
| ಶ್ರೀ ಶಶಿಧರ್ ವಿ | ಸೀನಿಯರ್ ಇನ್ಸ್‌ಪೆಕ್ಟರ್ (4ನೇ ವಲಯ) | 10. ಶ್ರೀ ಪಾಲರಾಜ ಎ | ವ್ಯವಸ್ಥಾಪಕರು (ಮಾನವ ಸಂಪನ್ಮೂಲ) |
| ಶ್ರೀ ದೇವರಾಜನ್ | ಕೆ.ಸಿ.ಎ | 11. ಶ್ರೀ ವಿಕ್ರಾಂತ್ ಪಾಟೀಲ್ | ಆಡಳಿತ ವಿಭಾಗ |
| ಶ್ರೀ ವೈ.ಪಿ ವೆಂಕಟೇಶ್ | ಸಿ.ಡಿ.ಓ | 12. ಶ್ರೀ ರಾಜೇಶ್ ಕೆ.ಎಂ. | ಜಿಲ್ಲಾ ಸಂಯೋಜಕರು |
| ಶ್ರೀ ವಾಸು ನಾಯ್ಡು | ಸಿ.ಡಿ.ಓ | | |

- ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಇವರು ತಮಿಳುನಾಡಿನ ಸಹಕಾರ ಇಲಾಖೆಯಿಂದ ಬಂದ ಅಧಿಕಾರಿಗಳನ್ನು ಮತ್ತು ಕರ್ನಾಟಕ ಸಹಕಾರ ಇಲಾಖೆ ಅಧಿಕಾರಿಗಳನ್ನು ಹೂಗುಚ್ಛ ನೀಡುವ ಮೂಲಕ ಸ್ವಾಗತಿಸಿದರು. ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪಿ ಶಶಿಧರ್ (DRCS) ರವರು ಕರ್ನಾಟಕದ ಸಹಕಾರ ಇಲಾಖೆಯ ರಚನೆ ಮತ್ತು ಕಾರ್ಯಪದ್ಧತಿಯನ್ನು ವಿವರಿಸಿದರು.
- ತಮಿಳುನಾಡಿನ ಸಹಕಾರಿ ವ್ಯವಸ್ಥೆಯಲ್ಲಿ ಜಿಲ್ಲೆಗೆ ಒಬ್ಬ ಜೆಆರ್‌ಸಿಎಸ್ ಇದ್ದು, (ಒಟ್ಟು 38 ಜಿಲ್ಲೆಗಳು) ಅವರ ಕೆಳಹಂತದಲ್ಲಿ 3–4 ಡಿಆರ್‌ಸಿಎಸ್ ಗಳಿದ್ದು, (3–4 ತಾಲ್ಲೂಕುಗಳನ್ನೊಳಗೊಂಡಂತೆ) ಸಬ್ ರಿಜಿಸ್ಟ್ರಾರ್ (circle) ಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ತಮ್ಮ ತಮಿಳುನಾಡಿನಲ್ಲಿರುವ

ವ್ಯವಸ್ಥೆಯ ಪರಿಚಯ ಮಾಡಿಕೊಟ್ಟರು.

- ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭದ ಹಿನ್ನೆಲೆ ಸೌಹಾರ್ದ ಚಳುವಳಿ ಬೆಳೆದು ಬಂದ ದಾರಿಯನ್ನು ಪರಿಚಯಿಸಿದರು, ಮತ್ತು ಈ ಬಗ್ಗೆ ಒಂದು ಸಾಕ್ಷಚಿತ್ರವನ್ನು (Documentrry Film-Building Video) ಪ್ರದರ್ಶಿಸಲಾಯಿತು.
- Presentation ಮೂಲಕ ಸಂಯುಕ್ತ ಸಹಕಾರಿಯ ರಚನೆ, ಕಾರ್ಯಗಳು ವಿವಿಧ ರೀತಿಯ ಸಹಕಾರಿಗಳ ಕಾರ್ಯಗಳ ಕುರಿತು ಪರಿಚಯಿಸಿದರು.
- ತಮಿಳುನಾಡಿನ ಸಹಕಾರ ಸಂಘಗಳು ತಾವು ಗಳಿಸಿರುವ ಲಾಭದಲ್ಲಿ 5% ಅನ್ನು ವಂತಿಕೆಯಾಗಿ ಪಡೆಯಲು ಅವಕಾಶವಿದೆ. ಇದರಲ್ಲಿ ಜಿಲ್ಲಾ ಕೋ-ಆಪ್ ಯೂನಿಯನ್‌ಗಳಿಗೆ 10% ಉಳಿದ ಹಣವನ್ನು ರಾಜ್ಯ ಫೆಡರೇಷನ್‌ಗಳಿಗೆ ಪಡೆದು, ಶಿಕ್ಷಣಕ್ಕಾಗಿ ಉಪಯೋಗಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಅದಲ್ಲದೆ (Training institute) ಗಳಿಗೆ ಹಾಗೂ ಸಹಕಾರ ಕಂಪ್ಯೂಟರ್ ಶಿಕ್ಷಣಕ್ಕಾಗಿ, ಡಿಪ್ಲೋಮಾ & ಆರ್ಟ್ಸ್ ಕಾಲೇಜುಗಳನ್ನು ನಡೆಸುತ್ತಿರುವುದಾಗಿ ತಮಿಳುನಾಡು ಪ್ರತಿನಿಧಿ ವಿವರಿಸಿದರು.
- ತಮಿಳುನಾಡಿನ ಅಧಿಕಾರಿಗಳು ಸಂಯುಕ್ತ ಸಹಕಾರಿಗೆ ಯಾವುದಾದರೂ ಸರ್ಕಾರದ ಹಣಕಾಸಿನ ನೆರವು ಇರುವ ಬಗ್ಗೆ ಕೇಳಿದರು ಇದ್ದಕ್ಕೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿಯನ್ನು ಪಡೆದು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು.
- ಸಂಯುಕ್ತ ಸಹಕಾರಿಯು ಆಡಳಿತ & ನಿಯಂತ್ರಣಾತ್ಮಕ ಕಾರ್ಯಗಳನ್ನು ಮಾತ್ರ ನಿರ್ವಹಿಸುತ್ತಿರುವುದಾಗಿ ಪ್ರಶ್ನೆಯೊಂದಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಉತ್ತರಿಸಿದರು. ಇ-ಸ್ಟ್ಯಾಂಪಿಂಗ್, ದಾವಾ ಪಂಚಾಯ್ತಿ ನ್ಯಾಯಲಯ, ಡಿಸಿಬಿಎಂ ಕಾರ್ಯಚಟುವಟಿಕೆಗಳ ಬಗ್ಗೆ ಪರಿಚಯ ನೀಡಲಾಯಿತು.
- (Corpus Fund) ರಚನೆಗೊಂಡಿದ್ದು ಯಾವುದಾದರೂ ಪ್ಯಾಕ್ಸ್‌ಗಳು ನಷ್ಟ, ದಿವಾಳಿ ಹೊಂದಿದ್ದಲ್ಲಿ 30 ಸಾವಿರ ಪರಿಹಾರ ನೀಡುತ್ತಿರುವುದಾಗಿ ಹಾಗೂ ಪ್ರಸುತ 300 ಕೋಟಿ ಕಾರ್ಪಸ್ ಫಂಡ್ ಇರುವುದಾಗಿ ತಿಳಿಸಿದರು.
- ಈ ಮೇಲ್ಕಂಡ ಮಾದರಿಯಲ್ಲಿ ನಮ್ಮಲ್ಲಿಯು ಕೂಡ ಠೇವಣಿ ಹಿತರಕ್ಷಣಾ ನಿಧಿ ರಚಿಸುವ ಬಗ್ಗೆ ಚಿಂತನೆಯಲ್ಲಿರುವುದಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.
- ಸಹಕಾರ ಇಲಾಖೆಯ ಕಾರ್ಯಚಟುವಟಿಕೆಗಳ ಬಗ್ಗೆ ಜೆಆರ್‌ಸಿಎಸ್ (ಕಾನೂನು ಕೋಶ) ರವರು ವಿವರಿಸಿದರು. ಚಿಟ್ ಫಂಡ್ ವ್ಯವಹಾರದ ಕುರಿತು ಸಹಕಾರ ಇಲಾಖೆಯ ಅಧಿಕಾರಿಗಳು ಚಿಟ್ ಫಂಡ್ / ಕಾಯ್ದೆಯ ನಿಬಂಧಕರಿಗಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಮಿಳುನಾಡಿನ ಪ್ರತಿನಿಧಿಗಳಿಗೆ ಪ್ರಶ್ನೆಗೆ ಉತ್ತರಿಸಿದರು.
- ಬೆಂಗಳೂರಿನ ನಗರದಲ್ಲಿ 15 ಸೌಹಾರ್ದ ಸಹಕಾರಿಗಳು ಚಿಟ್ ಫಂಡ್ ವ್ಯವಹಾರ ಮಾಡುತ್ತಿರುವುದಾಗಿ ಮಾಹಿತಿ ನೀಡಲಾಯಿತು. ಹಾಗೂ ಇಡೀ ರಾಜ್ಯದಲ್ಲಿ 300-400 ಸಹಕಾರಿಗಳು ಚಿಟ್ ಫಂಡ್ ಕಾರ್ಯನಿರ್ವಹಿಸುತ್ತಿರುವುದಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮಾಹಿತಿ ನೀಡಿದರು.
- ಸಂಯುಕ್ತ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಪಾಲರಾಜ್ ರವರು ತಮಿಳುನಾಡಿನ ಅಧಿಕಾರಿಗಳಿಗೆ ತಮಿಳು ಭಾಷೆಯಲ್ಲಿ ಹಾಗೂ ಕರ್ನಾಟಕ ಸಹಕಾರ ಇಲಾಖೆಯವರಿಗೆ, ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಕನ್ನಡದಲ್ಲಿ ವಂದಾನಾರ್ಪಣೆಯನ್ನು ಸಲ್ಲಿಸಿದರು.



ಸ್ಪಂದನ ಸೌಹಾರ್ದ ಸಹಕಾರಿಗೆ ಭೇಟಿ



ಉದಯ ಸೌಹಾರ್ದ ಸಹಕಾರಿಗೆ ಭೇಟಿ

## ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳ ಕುರಿತು ತರಬೇತಿ ಕಾರ್ಯಕ್ರಮ

ದಿನಾಂಕ 26.04.2023 ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಅನ್ ಲೈನ್ ಮೂಲಕ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ. ಜಿ. ಭಟ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ಮುಧೋಳ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಶಿವಕುಮಾರ ಬಿರಾದರ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಪ್ರಾಂತೀಯ ಕಚೇರಿ ಮೈಸೂರು ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಜವಾಹರ ಮುಗ್ಗನವರ, ಜಿಲ್ಲಾ ಸಂಯೋಜಕ, ಮೈಸೂರು ಮತ್ತು ಕೊಡಗು ಇವರು ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಶಿವಕುಮಾರ. ಎ., ಸಹಾಯಕ, ಪ್ರಾಂತೀಯ ಕಚೇರಿ ಮೈಸೂರು ಇವರು ನೆರವೇರಿಸಿದರು. ಸದರಿ ತರಬೇತಿಯಲ್ಲಿ ಒಟ್ಟು 63 ಸಹಕಾರಿಗಳು ಭಾಗವಹಿಸಿದ್ದರು.

ದಿನಾಂಕ 27.04.2023ರಂದು ಮಧ್ಯಾಹ್ನ 03.00 ಗಂಟೆಗೆ ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು ವಿಷಯದ ಕುರಿತು ಅನ್ ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಜಿ. ಭಟ್ ರವರು ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ. ಕೆ. ಕೇಶವ ಡೋಂಗ್ರೆ, ಸನ್ನದು ಲೆಕ್ಕಪರಿಶೋಧಕರು, ಮೈಸೂರು ಇವರು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ 58 ಪ್ರತಿನಿಧಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

ದಿನಾಂಕ 27.04.2023 ರಂದು ಬೆಳಿಗ್ಗೆ 10.30 ಗಂಟೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಅನ್ ಲೈನ್ ಮೂಲಕ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು..

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ. ಜಿ. ಭಟ್, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ ಬೆಂಗಳೂರು, ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಜಗದೀಶ್ ಹೆಬ್ಬಾರ್, ಇವರು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ ಒಟ್ಟು 220 ಸಹಕಾರಿಗಳು ಭಾಗವಹಿಸಿದ್ದರು.

## ಬಸವ ಜಯಂತಿ ಆಚರಣೆ



ದಿನಾಂಕ 22 ಏಪ್ರಿಲ್ 2023 ರಂದು ಹನ್ನೆರಡನೇ ಶತಮಾನದ ಬಹುದೊಡ್ಡ ಸಮಾಜ ಸುಧಾರಕರಾದ ವಿಶ್ವಗುರು ಬಸವಣ್ಣನವರ 890ನೇ ವರ್ಷದ ಜಯಂತಿಯನ್ನು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಅವರು ಜಾತಿ ಧರ್ಮ, ದೀನದಲಿತರ ಉದ್ಧಾರಕ್ಕಾಗಿ ನಿಂತವರು ಬಸವಣ್ಣನವರು, ಇವರು ಜ್ಞಾನದ ದೀಪ ಹರಿಸಿದ ಮಹಾನ್ ಮಾನವತಾವಾದಿ. ಜಗಜ್ಯೋತಿ ಬಸವಣ್ಣ, ಭಕ್ತಿ ಭಂಡಾರಿ, ವಿಶ್ವಗುರು, ತಮ್ಮ ವಚನಗಳ ಮೂಲಕವೇ ಸಮಾಜದಲ್ಲಿ ಬಹುದೊಡ್ಡ ಬದಲಾವಣೆಯನ್ನು ತರಲು ಬಯಸಿದ, ಜನರಲ್ಲಿ ಜ್ಞಾನದ ದೀವಿಗೆ ಹಚ್ಚಿಗೆ ಮಹಾನ್ ಮಾನವತಾವಾದಿ ಎಂದು ಉಲ್ಲೇಖೀಸಿದರು, ಅದರಂತೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜು ಹೊಂಗಲ ಅವರು ಮತನಾಡುತ್ತ ವಿಶ್ವಗುರು ಬಸವಣ್ಣನವರು ತಿಳಿಸಿಕೊಟ್ಟ ದಾರಿಯಂತೆ ಕಾಯಕವೇ ಕೈಲಾಸ ಎಂಬಂತೆ ಎಲ್ಲರು ನಿಷ್ಠೆಯಿಂದ ಕಾಯಕವನ್ನು ಮಾಡೋಣ ಎನ್ನುವ ಮಾತಿನೊಂದಿಗೆ ಎಲ್ಲ ಸಿಬ್ಬಂದಿಗಳಿಗೆ ಕಾಯಕದ ಮಹತ್ವವನ್ನು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ಪ್ರಾಂತೀಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
'ಸೌಹಾರ್ದ ಸಹಕಾರಿ ಸೌಧ', 17 & 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055
ದೂರವಾಣಿ : 080–23378375–80, ಇ–ಮೇಲ್ : souharda@souharda.coop, www.souharda.coop

## ಸುತ್ತೋಲೆ

**ಪೀಠಿಕೆ**

ಸೌಹಾರ್ದ ಸಹಕಾರ ಕ್ಷೇತ್ರದಲ್ಲಿನ ಅನಿಯಮಿತ ಬಡ್ಡಿದರ ಹಾಗೂ ಗುಣಮಟ್ಟದ ಹಣಕಾಸು ನಿರ್ವಹಣೆಯ ಉದ್ದೇಶಕ್ಕಲ್ಲದೆ ಠೇವಣಿ ಸಂಗ್ರಹಿಸುವ ಉದ್ದೇಶದಿಂದ ನಿಗದಿಪಡಿಸುತ್ತಿರುವ ಬಡ್ಡಿದರಗಳಿಂದ ಹೆಚ್ಚಿನ ಠೇವಣಿ ಸಂಗ್ರಹಿಸಿ, ಅಂತಹ ಠೇವಣಿಗಳನ್ನು ಸಮರ್ಪಕವಾಗಿ ದುಡಿಸಿಕೊಳ್ಳದೆ ಠೇವಣಿದಾರರಿಗೆ ಹಣ ಹಿಂತಿರುಗಿಸಲಾಗದ ಪ್ರಕರಣಗಳು ಹೆಚ್ಚುತ್ತಿರುವುದರ ಕುರಿತು ರಾಜ್ಯ ಸರ್ಕಾರದ ಹಾಗೂ ಸಹಕಾರ ಇಲಾಖೆಯ ಹಂತದಲ್ಲಿ ಚರ್ಚೆಗಳು ನಡೆದಿರುತ್ತವೆ. ಹಾಗೂ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳ ಸಂಪರ್ಕ ಸಭೆಗಳಲ್ಲಿ ಕೂಡ ಸಂಯುಕ್ತ ಸಹಕಾರಿಯಿಂದ ಬಡ್ಡಿದರ ನಿಗದಿಪಡಿಸುವ ಬಗ್ಗೆ ಸಲಹೆಗಳು ಬಂದಿರುತ್ತವೆ. ಆದಕಾರಣದಿಂದ ಬಡ್ಡಿದರ ನಿಗದಿಪಡಿಸಿ ಸುತ್ತೋಲೆ ನೀಡುವ ಬಗ್ಗೆ ಸಂಯುಕ್ತ ಸಹಕಾರಿಯಲ್ಲಿ ಉಪಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಸಭೆಗಳನ್ನು ಸೇರುವ ಮೂಲಕ ಚರ್ಚಿಸಿ, ಸಹಕಾರ ಇಲಾಖೆ ಹಾಗೂ ತಜ್ಞರ ಸಲಹೆ/ಅಭಿಪ್ರಾಯಗಳನ್ನು ಪಡೆದು ರಚಿಸಿದ ಕರಡು ಸುತ್ತೋಲೆಯ ಅಂಶಗಳನ್ನು ಜುಲೈ 2022ರ ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟಿಸುವ ಮೂಲಕ ಸಲಹೆ ಹಾಗೂ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಸ್ವೀಕೃತವಾದ ಸಲಹೆ/ಅಭಿಪ್ರಾಯ/ಆಕ್ಷೇಪಣೆಯನ್ನು ಪರಿಗಣಿಸಿ ಸಿದ್ಧಪಡಿಸಲಾದ ಅಂತಿಮ ಕರಡನ್ನು ದಿನಾಂಕ: 10 ಜನವರಿ 2023 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 15ಎ ರಲ್ಲಿ ಅಗತ್ಯ ಬದಲಾವಣೆಯೊಂದಿಗೆ ಅನುಮೋದಿಸಲಾಗಿದೆ. ಹಾಗೂ ದಿನಾಂಕ: 10 ಮಾರ್ಚ್ 2023 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ವಿಷಯ 02 ರಲ್ಲಿ ಸೌಹಾರ್ದ ಸಹಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಲು ತೀರ್ಮಾನಿಸಲಾಗಿದೆ.

**ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆ**

**ಕಾಯ್ದೆ ಕಲಂ.53(7)(ಎ) ಹಾಗೂ (ಹೆಚ್) ರಡಿಯ ಪ್ರಾವಧಾನದಂತೆ**

**ಸಂಖ್ಯೆ: ಸಂಸ/ಆಸು–01/2022–23** **ದಿನಾಂಕ: 30.03.2023**

1. ಯಾವುದೇ ಸೌಹಾರ್ದ ಸಹಕಾರಿಯು ಸದಸ್ಯೇತರರಿಂದ ಹಾಗೂ ನಾಮಮಾತ್ರ ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸತಕ್ಕದ್ದಲ್ಲ.
2. ಯಾವುದೇ ಸೌಹಾರ್ದ ಸಹಕಾರಿಯು ಠೇವಣಿಯನ್ನು ಪತ್ತೇತರ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದಲ್ಲ.
3. ಸೌಹಾರ್ದ ಸಹಕಾರಿಯು ಸದಸ್ಯರ ಉಳಿತಾಯ ಖಾತೆಗೆ ನಿಗದಿಪಡಿಸುವ ಬಡ್ಡಿದರಗಳು ಶೇ.4ನ್ನು ಮೀರತಕ್ಕದ್ದಲ್ಲ.
4. ಅವಧಿ ಠೇವಣಿಗಳಿಗೆ ಮತ್ತು ಮರುಕಳಿಸುವ ಠೇವಣಿ (RD)ಗಳಿಗೆ, ಎಸ್.ಬಿ.ಐ/ವಾಣಿಜ್ಯ ಬ್ಯಾಂಕ್‌ಗಳು ಕಾಲಕಾಲಕ್ಕೆ ನಿಗದಿಪಡಿಸುವ ಬಡ್ಡಿ ದರಕ್ಕಿಂತ ಶೇ.4 ರವರೆಗೆ ಮೀರತಕ್ಕದ್ದಲ್ಲ.
5. ಸಹಕಾರಿಗಳು ಪಿಗ್ಮಿ ಠೇವುಗಳನ್ನು ಸ್ವೀಕರಿಸಿದಲ್ಲಿ ಅವುಗಳ ಮೇಲೆ ಕೊಡುವ ಕಮೀಷನ್ ದರವು ಶೇ.3 ನ್ನು ಮೀರಬಾರದು. ಅಂತಹ ಪಿಗ್ಮಿ ಠೇವುಗಳ ಮೇಲೆ ಗರಿಷ್ಠ ಅವಧಿಗೆ (3 ವರ್ಷ ಹಾಗೂ ಮೇಲ್ಪಟ್ಟು) ಕೊಡುವ ಬಡ್ಡಿದರ ಗರಿಷ್ಠ ಶೇ.4 ನ್ನು ಮೀರಬಾರದು.

6. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಠೇವಣಿ ಮರುಪಾವತಿ ಕೋರಿದಲ್ಲಿ, ಆ ಅವಧಿಯ ಠೇವಣಿಗೆ ಕೊಡುತ್ತಿದ್ದ ಬಡ್ಡಿದರದಲ್ಲಿ ಗರಿಷ್ಠ ಶೇ.2 ಕಡಿತಗೊಳಿಸಬಹುದು.

7. ಸೌಹಾರ್ದ ಸಹಕಾರಿಗಳು ವಿತರಿಸುವ ಭದ್ರತಾ ಸಾಲಗಳಿಗೆ ಗರಿಷ್ಠ ಶೇ.16 ಹಾಗೂ ಭದ್ರತಾ ರಹಿತ ಸಾಲಗಳಿಗೆ ಗರಿಷ್ಠ ಶೇ.18ರಷ್ಟು ಬಡ್ಡಿ ದರವನ್ನು ಮೀರತಕ್ಕದ್ದಲ್ಲ.

8. ನಿರ್ದಿಷ್ಠ ಅವಧಿಯ ಯೋಜನೆಗಳನ್ನು ಹೊರತುಪಡಿಸಿ, (ದುಪ್ಪಟ್ಟು ಯೋಜನೆ/Double Scheme) ಯಾವುದೇ ಸಹಕಾರಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.

9. ಒಂದು ಸಹಕಾರ ಸಂಘವು ದಿನವಹಿ ನಿರ್ವಹಿಸುವ ನಗದು ಬಾಕಿ (Cash Balance) ಸಂಘದ ಠೇವಣಿಗಳ ಶೇ.2ನ್ನು ಮೀರತಕ್ಕದ್ದಲ್ಲ. ಇದರಲ್ಲಿ ದ್ರವ್ಯಾಸ್ತಿಯು, ವಾಣಿಜ್ಯ ಬ್ಯಾಂಕಿನಲ್ಲಿ ಚಾಲ್ತಿ ಖಾತೆಯಲ್ಲಿ ವಿನಿಯೋಗಿಸುವ ಮೊತ್ತವನ್ನೂ ಒಳಗೊಂಡಿರುತ್ತದೆ.

10. ಸಹಕಾರಿ ಸಂಸ್ಥೆಗಳು ಸ್ಥಾನಿಕ ಹಣಕಾಸು ಸಂಸ್ಥೆಗಳಾಗಿದ್ದು, ಸಂಸ್ಥೆಗಳಲ್ಲಿಯ ಆಡಳಿತ, ವ್ಯವಹಾರ ಪದ್ಧತಿಯನ್ನು ಆಧರಿಸಿ ಸಾರ್ವಜನಿಕರು ಸದಸ್ಯರಾಗಿ ಠೇವುಗಳನ್ನು ಜಮೆ ಮಾಡುವರು. ಇಂತಹ ಸಹಕಾರಿ ಸಂಸ್ಥೆಗಳಲ್ಲಿ ಸಹಕಾರಿಗಳು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮುಖಾಂತರ ಕಮೀಷನ್/ಇನ್ಸೆಂಟಿವ್ ಕೊಡುವುದರ ಮೂಲಕ ಠೇವುಗಳನ್ನು ಸ್ವೀಕರಿಸತಕ್ಕದ್ದಲ್ಲ ಹಾಗೂ ಜಾಹೀರಾತು ಮೂಲಕ ಠೇವು ಸಂಗ್ರಹಣೆ ಮಾಡತಕ್ಕದ್ದಲ್ಲ.

11. ಪ್ರಸ್ತುತ ನೀಡಲಾಗುತ್ತಿರುವ ಬಡ್ಡಿ ದರ ಸುತ್ತೋಲೆಯನ್ನು ಕಾಲ ಕಾಲಕ್ಕೆ ಪರಿಷ್ಕರಣೆ ಮಾಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

ಸೌಹಾರ್ದ ಸಹಕಾರಿಗಳು ಪಡೆಯುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವ ಸುತ್ತೋಲೆಯನ್ನು ದಿನಾಂಕ: 10 ಮಾರ್ಚ್ 2023 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ : 01.04.2023 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

Karnataka State Souharda Federal Co-operative Ltd. Reg. No. RSR / SOU / ACT / 136 / Regn. 051/2001-02 Dated: 04-01-2002 ★ Bengaluru ★

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

## ಭೇಟಿ



**ತುಮಕೂರು** : ದಿನಾಂಕ 13.04.2023 ರಂದು ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಸಾಮಾನ್ಯ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಮಂಜುನಾಥ್, ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿದ್ದರು.

ದಿನಾಂಕ 13.04.2023ರಂದು ವಾಲ್ಮೀಕಿ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಸಾಮಾನ್ಯ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ಕಾನೂನು ಸಲಹೆ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿ ಸಿಬ್ಬಂದಿಗಳ ವರ್ಗಾವಣೆ ಕುರಿತು ಕಛೇರಿ ಆದೇಶ

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

"ಸೌಹಾರ್ದ ಸಹಕಾರಿ ಸೌಧ", ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. 080-23378375-80.
ಇ-ಮೇಲ್ : Souharda@souharda.coop ವೆಬ್ ತಾಣ : www.Souharda.coop

ಪ.ಸಂ:ಕರಾಸೌಸಂಸನಿ/ಸಿ.ವ/05/2022-23 ದಿನಾಂಕ:20.03.2023

### ಕಛೇರಿ ಆದೇಶ

ವಿಷಯ : ಸಂಯುಕ್ತ ಸಹಕಾರಿ ಸಿಬ್ಬಂದಿಗಳ ವರ್ಗಾವಣೆ ಕುರಿತು.

ಉಲ್ಲೇಖ: 1. ಸಂಯುಕ್ತ ಸಹಕಾರಿಯ ಸಿಬ್ಬಂದಿ ಸೇವಾನಿಯಮಾವಳಿ ಸಂಖ್ಯೆ 17(1 & 2)ರನ್ವಯ.

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಸಿಬ್ಬಂದಿಯವರನ್ನು ಈ ಕೆಳಕಂಡ ಹೆಸರಿನ ಮುಂದೆ ತೋರಿಸಿರುವ ಸ್ಥಳಕ್ಕೆ ಆಡಳಿತಾತ್ಮಕ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಾನುಕೂಲದ ಹಿತದೃಷ್ಟಿಯಿಂದ ದಿನಾಂಕ 01.04.2023 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ವರ್ಗಾವಣೆ ಮಾಡಿ ಹಾಗೂ ಕೇಂದ್ರ ಸ್ಥಾನವನ್ನು ನಿಗದಿಗೊಳಿಸಿ ಆದೇಶಿಸಿದೆ.

**ಸೂಚನೆ:** ಪಸಂ:ಕರಾಸೌಸಂಸನಿ/ಟಾ.ಫೋ.ಎ/01/2020-21, ದಿನಾಂಕ:05.04.2021 ಜಿಲ್ಲಾ ಸಂಯೋಜಕರ ಕಾರ್ಯ ಬದಲಾವಣೆ ಆದೇಶವನ್ನು ಹಿಂಪಡೆಯಲಾಗಿದೆ.

| 1 | 2 | 3 | 4 |
|---|---|---|---|
| ಕ್ರ. ಸಂ. | ಸಿಬ್ಬಂದಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಮತ್ತು ಸ್ಥಳ | ಸ್ಥಳ ನಿಯುಕ್ತಿಗೊಳಿಸಲಾದ ಹುದ್ದೆ ಮತ್ತು ಸ್ಥಳ | ಕೇಂದ್ರ ಸ್ಥಾನ |
| ಕೇಂದ್ರ ಕಛೇರಿ | | | |
| 1 | ಶ್ರೀ ರಾಜಶೇಖರ್ ಹೆಚ್, ಪ್ರಾಂತೀಯ ವ್ಯವಸ್ಥಾಪಕರು, ಕಲಬುರಗಿ ಪ್ರಾಂತೀಯ ಕಛೇರಿ. | ಸಹಪ್ರಧಾನ ವ್ಯವಸ್ಥಾಪಕರು, ಹಣಕಾಸು ವಿಭಾಗ. ಕೇಂದ್ರ ಕಛೇರಿ | ಬೆಂಗಳೂರು |
| 2 | ಶ್ರೀ ಗುರುಪ್ರಸಾದ್ ಬಂಗೇರಾ, ಜಿಲ್ಲಾ ಸಂಯೋಜಕ, ಮಂಗಳೂರು, ಉಡುಪಿ, ಚಿಕ್ಕಮಗಳೂರು ಹಾಗೂ ಟಾಸ್ಕ್‌ಫೋರ್ಸ್ ಕಾರ್ಯ. | ಹಿರಿಯ ವ್ಯವಸ್ಥಾಪಕರು, ಶಾಸನಾತ್ಮಕ ವಿಭಾಗ. ಕೇಂದ್ರ ಕಛೇರಿ | ಬೆಂಗಳೂರು |
| 3 | ಶ್ರೀ ಸುರೇಶ್ ಆರ್.ಎಸ್, ಜಿಲ್ಲಾ ಸಂಯೋಜಕರು, ಮೈಸೂರು, ಕೊಡಗು ಜಿಲ್ಲೆ. | ವ್ಯವಸ್ಥಾಪಕರು, ಆಡಳಿತ & ಸ್ಥಾಪನಾ ವಿಭಾಗ ಕೇಂದ್ರ ಕಛೇರಿ | ಬೆಂಗಳೂರು |
| 4 | ಶ್ರೀ ರಾಜೇಶ್ ಕೆ.ಎಂ, ಜಿಲ್ಲಾ ಸಂಯೋಜಕ, ಬೆಂಗಳೂರು 2 & 3, ರಾಮನಗರ ಜಿಲ್ಲೆ. | ಜಿಲ್ಲಾ ಸಂಯೋಜಕ, ಟಾಸ್ಕ್‌ಫೋರ್ಸ್ ವಿಭಾಗ ಮತ್ತು ಅಧ್ಯಕ್ಷರ ಆಪ್ತ ಸಹಾಯಕ, ಕೇಂದ್ರ ಕಛೇರಿ. | ಬೆಂಗಳೂರು |
| ಬೆಂಗಳೂರು ಪ್ರಾಂತೀಯ ಕಛೇರಿ | | | |
| 5 | ಶ್ರೀ ಶ್ರೀಧರ್ ಆರ್, ಸಹಪ್ರಧಾನ ವ್ಯವಸ್ಥಾಪಕರು, 441 ನ್ಯಾಯಾಲಯ, ಬೆಂಗಳೂರು. | ಪ್ರಾಂತೀಯ ವ್ಯವಸ್ಥಾಪಕರು, ಬೆಂಗಳೂರು ಪ್ರಾಂತೀಯ ಕಛೇರಿ. | ಬೆಂಗಳೂರು |
| 6 | ಶ್ರೀ ಶಶಿಕುಮಾರ್ ಎಸ್, ಜಿಲ್ಲಾ ಸಂಯೋಜಕ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆ. | ಜಿಲ್ಲಾ ಸಂಯೋಜಕ-ಚಿತ್ರದುರ್ಗ, ದಾವಣಗೆರೆ ಜಿಲ್ಲೆ. | ದಾವಣಗೆರೆ |

1

| | | | |
|---|---|---|---|
| 7 | ಶ್ರೀ ವೆಂಕಟೇಶ ನಾಯ್ಕ, ಜಿಲ್ಲಾ ಸಂಯೋಜಕ, ಸ್ಥಾಪನಾ ವಿಭಾಗ, ಕೇಂದ್ರ ಕಛೇರಿ. | ಜಿಲ್ಲಾ ಸಂಯೋಜಕ–ಬೆಂಗಳೂರು 2 & 3, ರಾಮನಗರ ಜಿಲ್ಲೆ. | ಬೆಂಗಳೂರು |
| 8 | ಶ್ರೀ ನಾಗರಾಜ ಜಿ ಹೆಚ್, ಜಿಲ್ಲಾ ಸಂಯೋಜಕ, ಬಾಗಲಕೋಟೆ ಜಿಲ್ಲೆ. | ಜಿಲ್ಲಾ ಸಂಯೋಜಕ–ಶಿವಮೊಗ್ಗ ಜಿಲ್ಲೆ | ಶಿವಮೊಗ್ಗ |
| **ಮೈಸೂರು ಪ್ರಾಂತೀಯ ಕಛೇರಿ** | | | |
| 9 | ಶ್ರೀ ವಿಜಯ ಬಿ ಎಸ್, ಜಿಲ್ಲಾ ಸಂಯೋಜಕ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆ. | ಜಿಲ್ಲಾ ಸಂಯೋಜಕ–ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ. | ಉಡುಪಿ |
| 10 | ಶ್ರೀ ಜವಾಹರ ಮುಗನ್ನವರ್, ಜಿಲ್ಲಾ ಸಂಯೋಜಕ, ಬೆಳಗಾವಿ–01. | ಜಿಲ್ಲಾ ಸಂಯೋಜಕ–ಮೈಸೂರು, ಕೊಡಗು ಜಿಲ್ಲೆ. | ಮೈಸೂರು |
| 11 | ಶ್ರೀ ಶಿವಕುಮಾರ ಎ, ಸಹಾಯಕ, ಮೈಸೂರು, ಮಂಡ್ಯ, ಚಾಮರಾಜನಗರ, ಮಡಿಕೇರಿ, ಹಾಸನ ಜಿಲ್ಲೆಯ ಟಾಸ್ಕ್‌ಫೋರ್ಸ್ ಕಾರ್ಯಗಳು. | ಸಹಾಯಕ–ಚಿಕ್ಕಮಗಳೂರು ಜಿಲ್ಲಾ ಸಂಯೋಜಕ ಕಾರ್ಯಗಳು ಮತ್ತು ಪ್ರಾಂತೀಯ ಕಛೇರಿ ಕಾರ್ಯಗಳು. | ಮೈಸೂರು |
| **ಬೆಳಗಾವಿ ಪ್ರಾಂತೀಯ ಕಛೇರಿ** | | | |
| 12 | ಶ್ರೀ ಗಂಗಾರಾಂ ಸಗ್ಗು ಕೊಳಪಾಟೆ, ಜಿಲ್ಲಾ ಸಂಯೋಜಕ, ಬೆಳಗಾವಿ – 2 | ವ್ಯವಸ್ಥಾಪಕರು, ಬೆಳಗಾವಿ ಮತ್ತು ಕಲಬುರಗಿ ಟಾಸ್ಕ್‌ಫೋರ್ಸ್ ಉಸ್ತುವಾರಿ. | ಬೆಳಗಾವಿ |
| 13 | ಶ್ರೀ ಭವನ್ ರಾವ್, ಕಿರಿಯ ವ್ಯವಸ್ಥಾಪಕ, ಸಚಿವಾಲಯ. | ಜಿಲ್ಲಾ ಸಂಯೋಜಕ–ಬೆಳಗಾವಿ, ಖಾನಪುರ ತಾಲೂಕು | ಬೆಳಗಾವಿ |
| 14 | ಶ್ರೀ ಸುಜಯ್ ಡಿ ಬೆಳವಿ, ಜಿಲ್ಲಾ ಸಂಯೋಜಕ, ಗೋಕಾಕ್, ಮೂಡಲಗಿ. | ಜಿಲ್ಲಾ ಸಂಯೋಜಕ–ನಿಪ್ಪಾಣಿ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ ತಾಲೂಕು | ಚಿಕ್ಕೋಡಿ |
| 15 | ಶ್ರೀ ಶಿವಕಾಂತ ಎನ್, ಜಿಲ್ಲಾ ಸಂಯೋಜಕ, ವಿಜಯಪುರ ಜಿಲ್ಲೆ. | ಜಿಲ್ಲಾ ಸಂಯೋಜಕ–ಹುಕ್ಕೇರಿ ತಾಲೂಕು. | ಹುಕ್ಕೇರಿ |
| 16 | ಶ್ರೀ ರಾಚಯ್ಯ ಹಿರೇಮಠ, ಸಹಾಯಕ, ಬೈಲಹೊಂಗಲ, ಸವದತ್ತಿ, ಖಾನಪುರ, ರಾಮದುರ್ಗ, ಕಿತ್ತೂರು, ತಾಲೂಕು ಜಿಲ್ಲಾ ಸಂಯೋಜಕ ಕಾರ್ಯಗಳು | ಸಹಾಯಕ–ಚೆನ್ನಮ್ಮನ ಕಿತ್ತೂರು, ಬೈಲಹೊಂಗಲ, ಗೋಕಾಕ, ಸವದತ್ತಿ, ರಾಮದುರ್ಗ, ಯಾರಟ್ಟಿಗಿ, ಮುನವಳ್ಳಿ ತಾಲೂಕು ಜಿಲ್ಲಾ ಸಂಯೋಜಕ ಕಾರ್ಯಗಳು | ಬೈಲಹೊಂಗಲ |
| 17 | ಶ್ರೀ ಬಸವರಾಜ ಎಸ್, ಜಿಲ್ಲಾ ಸಂಯೋಜಕ, ಹಾವೇರಿ, ಧಾರವಾಡ, ಗದಗ ಜಿಲ್ಲೆ. | ಜಿಲ್ಲಾ ಸಂಯೋಜಕ–ವಿಜಯಪುರ, ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ತಾಲೂಕು | ವಿಜಯಪುರ |
| 18 | ಶ್ರೀ ಪ್ರಭಯ್ಯ ಹಿರೇಮಠ, ಜಿಲ್ಲಾ ಸಂಯೋಜಕ, ವಿಜಯಪುರ ಜಿಲ್ಲೆ. | ಜಿಲ್ಲಾ ಸಂಯೋಜಕ–ಚಡಚಣ, ಇಂಡಿ, ತಾಳಿಕೋಟೆ, ಮುದ್ದೇಬಿಹಾಳ, ನಿಡಗುಂದಿ, ಕೊಲ್ಹಾರ ತಾಲೂಕು | ವಿಜಯಪುರ |
| 19 | ಶ್ರೀಮತಿ ಪ್ರತಿಭಾ ಮಠ, ಸಹಾಯಕಿ, ಬೆಳಗಾವಿ & ಕಲಬುರಗಿ ಜಿಲ್ಲೆಯ ಟಾಸ್ಕ್‌ಫೋರ್ಸ್ ಕಾರ್ಯಗಳು. | ಸಹಾಯಕಿ–ಬಸವನ ಬಾಗೇವಾಡಿ, ಬಬಲೇಶ್ವರ, ತಿಕೋಟಾ ತಾಲೂಕು ಜಿಲ್ಲಾ ಸಂಯೋಜಕ ಕಾರ್ಯಗಳು ಮತ್ತು ಜಿಲ್ಲಾ ಸಂಪರ್ಕ ಕಛೇರಿ ಕಾರ್ಯಗಳು. | ವಿಜಯಪುರ |

| | | | |
|---|---|---|---|
| 20 | ಶ್ರೀ ವೆಂಕಟೇಶ ರಾಠೋಡ, ಹಿರಿಯ ಸಹಾಯಕ, ರಾಯಚೂರು, ಯಾದಗಿರಿ ಜಿಲ್ಲಾ ಸಂಯೋಜಕ ಕಾರ್ಯಗಳು. | ಹಿರಿಯ ಸಹಾಯಕ-ಬಾಗಲಕೋಟೆ ಜಿಲ್ಲಾ ಸಂಯೋಜಕ ಕಾರ್ಯಗಳು. | ಬಾಗಲಕೋಟೆ |
| 21 | ಶ್ರೀಮತಿ ರೇಷ್ಮಾ ಪಾಟೀಲ್, ಸಹಾಯಕಿ, ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿ. | ಸಹಾಯಕಿ-ಬಾಗಲಕೋಟೆ ನಗರ ಜಿಲ್ಲಾ ಸಂಯೋಜಕ ಕಾರ್ಯಗಳು ಮತ್ತು ಜಿಲ್ಲಾ ಸಂಪರ್ಕ ಕಛೇರಿ. | ಬಾಗಲಕೋಟೆ |
| 22 | ಶ್ರೀ ಕೃಷ್ಣ ಹಾಲಗೇರಿ, ಉಪ ಸಿಬ್ಬಂದಿ ಕಂ ವಾಹನ ಚಾಲಕ, ಕಲಬುರಗಿ ಪ್ರಾಂತೀಯ ಕಛೇರಿ. | ಉಪ ಸಿಬ್ಬಂದಿ ಕಂ ವಾಹನ ಚಾಲಕ, ಬೆಳಗಾವಿ ಪ್ರಾಂತೀಯ ಕಛೇರಿ. | ಬೆಳಗಾವಿ |
| | **ಕಲಬುರಗಿ ಪ್ರಾಂತೀಯ ಕಛೇರಿ** | | |
| 23 | ಶ್ರೀ ಸೂರ್ಯಕಾಂತ ರ್‍ಯಾಕಲೆ, ಹಿರಿಯ ವ್ಯವಸ್ಥಾಪಕರು, ಕಾನೂನು ವಿಭಾಗ. | ಪ್ರಾಂತೀಯ ವ್ಯವಸ್ಥಾಪಕರು, ಕಲಬುರಗಿ ಪ್ರಾಂತೀಯ ಕಛೇರಿ. ಕಲಬುರಗಿ. | ಕಲಬುರಗಿ |
| 24 | ಶ್ರೀ ವೀರಶೆಟ್ಟಿ, ಜಿಲ್ಲಾ ಸಂಯೋಜಕ, ಬೀದರ, ಯಾದಗಿರಿ ಜಿಲ್ಲೆ. | ಜಿಲ್ಲಾ ಸಂಯೋಜಕ-ಕಲಬುರಗಿ, ಬೀದರ್ ಜಿಲ್ಲೆ. | ಬೀದರ್ |
| 25 | ಶ್ರೀ ನಟರಾಜ್, ಜಿಲ್ಲಾ ಸಂಯೋಜಕ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆ ಹಾಗೂ ಟಾಸ್ಕ್‌ಫೋರ್ಸ್ ಕಾರ್ಯಗಳು. | ಜಿಲ್ಲಾ ಸಂಯೋಜಕ-ರಾಯಚೂರು ಜಿಲ್ಲೆ. | ರಾಯಚೂರು |
| 26 | ಶ್ರೀ ಓಂಕಾರ್, ಜಿಲ್ಲಾ ಸಂಯೋಜಕ, ಬಳ್ಳಾರಿ, ಕಲಬುರಗಿ ಜಿಲ್ಲೆ. | ಜಿಲ್ಲಾ ಸಂಯೋಜಕ-ಕೊಪ್ಪಳ ಜಿಲ್ಲೆ. | ಕೊಪ್ಪಳ |
| 27 | ಶ್ರೀ ಪವನ್ ಎಂ ಆರ್, ಜಿಲ್ಲಾ ಸಂಯೋಜಕ, ಕೊಪ್ಪಳ, ವಿಜಯನಗರ ಜಿಲ್ಲೆ. | ಜಿಲ್ಲಾ ಸಂಯೋಜಕ-ಯಾದಗಿರಿ & ಕಲಬುರಗಿ ಪ್ರಾಂತೀಯ ಕಛೇರಿ. | ಕಲಬುರಗಿ |
| 28 | ಶ್ರೀ ರಾಜಕುಮಾರ್, ಉಪ ಸಿಬ್ಬಂದಿ ಕಂ ವಾಹನ ಚಾಲಕ, ಬೆಳಗಾವಿ ಪ್ರಾಂತೀಯ ಕಛೇರಿ. | ಉಪ ಸಿಬ್ಬಂದಿ ಕಂ ವಾಹನ ಚಾಲಕ, ಕಲಬುರಗಿ ಪ್ರಾಂತೀಯ ಕಛೇರಿ. | ಕಲಬುರಗಿ |
| | **441 ನ್ಯಾಯಾಲಯ, ಬೆಂಗಳೂರು.** | | |
| 29 | ಶ್ರೀ ಸಂಜಯ್ ಕೋರಟಕರ್, ಪ್ರಾಂತೀಯ ವ್ಯವಸ್ಥಾಪಕರು (ಪ್ರ), ಬೆಂಗಳೂರು ಪ್ರಾಂತೀಯ ಕಛೇರಿ. | ಹಿರಿಯ ವ್ಯವಸ್ಥಾಪಕರು, 441 ನ್ಯಾಯಾಲಯ, ಬೆಂಗಳೂರು. | ಬೆಂಗಳೂರು |
| 30 | ಶ್ರೀ ವಿನೋದ್ ಕೆ.ಸಿ, ಸಹಾಯಕ, ಹಣಕಾಸು ವಿಭಾಗ, ಕೇಂದ್ರ ಕಛೇರಿ | ಸಹಾಯಕ-ಹಣಕಾಸು ವಿಭಾಗ, 441 ನ್ಯಾಯಾಲಯ, ಬೆಂಗಳೂರು. | ಬೆಂಗಳೂರು |

ಈ ಮೇಲ್ಕಂಡ ಸಿಬ್ಬಂದಿಗಳು 31.03.2023 ರ ವರೆಗೆ ಈಗಿನ ಹುದ್ದೆ ಮತ್ತು ಕರ್ತವ್ಯದಲ್ಲೆ ಕಾರ್ಯನಿರ್ವಹಿಸಿ ಎಲ್ಲಾ ಬಾಕಿ ಕಾರ್ಯಗಳನ್ನು ಮುಕ್ತಾಯಗೊಳಿಸಿ ತಮ್ಮ ಪ್ರಭಾರೆಯನ್ನು ಸಂಬಂಧಪಟ್ಟ ನಿಯೋಜಿತ ಸಿಬ್ಬಂದಿಗೆ/ವಿಭಾಗ ಮುಖ್ಯಸ್ಥರಿಗೆ ದಿನಾಂಕ 20.04.2023ರ ಒಳಗಾಗಿ ವರದಿ ಮಾಡಿಕೊಂಡು ತಮ್ಮ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಯ ಮತ್ತು ಕೇಂದ್ರ ಸ್ಥಾನದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು.

3

Karnataka State Souharda Federal Co-operative
Reg. No. RSR/SOU/ACT/13
Regn. 051/200
Dated: 04-01-20
Bengaluru

ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾನಿಯಮಾವಳಿ ಸಂಖ್ಯೆ 16(ಸಿ) ಮತ್ತು 17 ರಂತೆ ವರ್ಗಾವಣೆ ಅನುದಾನ, ಪ್ರಯಾಣ ಭತ್ಯೆ, ಸೇರಿಕೆ ಅವಧಿ ಮತ್ತು ಇತರೆ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ ಹಾಗೂ ಆಡಳಿತ ಮಂಡಲಿ ನಿರ್ಧರಿಸಿದಂತೆ ಕಾಲ ಕಾಲಕ್ಕೆ ಮನೆ ಬಾಡಿಗೆ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಕೋರಿಕೆ ವರ್ಗಾವಣೆಗೆ 16(ಸಿ) ಮತ್ತು 17 ರ ಸೌಲಭ್ಯಗಳು ಅನ್ವಯವಾಗುವುದಿಲ್ಲ.

ಈ ಮೇಲ್ಕಂಡ ಆದೇಶವು ದಿನಾಂಕ 20.03.2023 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಹೊರಡಿಸಲಾಗಿದೆ.

Karnataka State Souharda Federal Co-operative Ltd. Reg. No. RSR / SOU / ACT / 135 / Regn. 051/2001-02 Dated: 04-01-2002 * Bangalore *

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಗೌರವಪೂರ್ವಕವಾಗಿ, ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಎಲ್ಲಾ ನಿರ್ದೇಶಕರುಗಳಿಗೆ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

2. ಸಂಬಂಧಪಟ್ಟ ಸಿಬ್ಬಂದಿಗಳಿಗೆ.
3. ಟಾಸ್ಕ್ ಫೋರ್ಸ್ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.
4. ಮಾನ್ಯ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು.

## ಉದ್ಘಾಟನೆ



ಬೆಳಗಾವಿ : ದಿನಾಂಕ 04.03.2023 ರಂದು ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿ., ಯರಗಟ್ಟಿ ಸಂಘ ನೂತನ ನಾಲ್ಕನೇ ಶಾಖೆಯ ಉದ್ಘಾಟನೆಯನ್ನು ಕುಮಾರೇಶ್ವರ ವಿರಕ್ತಮಠದ ಮ.ನಿ.ಪ್ರ.ಸ್ವ. ಸಚ್ಚಿದಾನಂದ ಮಹಾಸ್ವಾಮಿಗಳು ನೆರವೇರಿಸಿದರು. ಶಿವಯೋಗೀಶ್ವರ ಮಠ ಮ.ಘ.ಚ.ಡಾ. ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅವರು ಕಂಪ್ಯೂಟರ್ ಸೇವೆಗೆ ಮತ್ತು ಸೇಫ್ ಲಾಕರ್‌ಗೆ ಚಾಲನೆ ನೀಡಿದರು. ದಿವ್ಯಸಾನಿಧ್ಯ ಧವಳೇಶ್ವರ ಮಠದ ಪ್ರ. ಸ್ವ. ರೇಣುಕಾ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದರು. ಯರಗಟ್ಟಿ ಶ್ರೀ ರಾಜರಾಜೇಶ್ವರಿ ಆಶ್ರಮದ ಗಣಪತಿ ಮಹಾರಾಜರು ಆರ್ಶಿವಚನ ನೀಡಿದರು.

ಮುಖ್ಯ ಅತಿಥಿಗಳಾಗಿ ಉಮೇಶ ಬಾಳಿ, ಟಿ.ಪಿ. ಮುನವಳ್ಳಿ, ಪಂಚನಗೌಡ್ರ ದ್ಯಾಮನಗೌಡ್ರ, ರಮೇಶ ಹುಲಕುಂದ, ಸದಾನಂದ ಕರಿಗಾರ, ತಿಪ್ಪಣ್ಣಾ ಶಿಂಗಾರಗೊಪ್ಪ, ಶಂಕರ ರೆಬ್ಬಣ್ಣವರ ಸ್ಥಳೀಯ ಗ್ರಾ.ಪಂ. ಅಧ್ಯಕ್ಷರು ಹಾಗೂ ಸರ್ವಸದಸ್ಯರು, ಪಿಕೆಪಿಎಸ್ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಬ್ಯಾಂಕ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬಿಳ್ಕೋಡುಗೆ



ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ. ಶಿವಮೊಗ್ಗ ದಿನಾಂಕ 29–04–2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್ ಇವರಿಗೆ ಬಿಳ್ಕೋಡುಗೆ ನೀಡಲಾಯಿತು. ಇವರು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗೆ ವರ್ಗಾವಣೆಗೊಂಡಿದ್ದು, ಈ ಬಿಳ್ಕೋಡುಗೆ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಶ್ರೀ ಎಸ್.ಎ ನಾರಾಯಣ ಮೂರ್ತಿ, ಮುಖ್ಯಕಾರ್ಯನಿರ್ವಾಹಣಾಧಿಕಾರಿ ಶ್ರೀಮತಿ ಮಾಲತಿ ಎಂ.ಪಿ ಹಾಗೂ ಸಹಕಾರಿಯ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ.ಆರ್ ಮತ್ತು ಸಹಕಾರಿಯ ನಿರ್ದೇಶಕರುಗಳು ಹಾಜರಿದ್ದರು.

## ಸಂಯುಕ್ತ ಸಹಕಾರಿ ಸಿಬ್ಬಂದಿಗಳ ಆಂತರಿಕ ವಿಭಾಗ ಬದಲಾವಣೆ ಕುರಿತು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಶಾಸನಬದ್ಧ ಸಹಕಾರಿ ಸಂಸ್ಥೆ
"ಸೌಹಾರ್ದ ಸಹಕಾರಿ ಸೌಧ", ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. 080-23378375-80,
ಇ-ಮೇಲ್ : Souharda@souharda.coop ವೆಬ್ ತಾಣ : www.Souharda.coop

ಪಸಂ:ಕರಾಸೌಸಂಸನಿ/ಸಿ.ವ/06/2022-23 ದಿನಾಂಕ: 20.03.2023

**ಕಛೇರಿ ಆದೇಶ**

**ವಿಷಯ: ಸಂಯುಕ್ತ ಸಹಕಾರಿ ಸಿಬ್ಬಂದಿಗಳ ಆಂತರಿಕ ವಿಭಾಗ ಬದಲಾವಣೆ ಕುರಿತು**

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಇದರ ಸಿಬ್ಬಂದಿಯವರನ್ನು ಈ ಕೆಳಕಂಡ ಹೆಸರಿನ ಮುಂದೆ ತೋರಿಸಿರುವ ವಿಭಾಗಕ್ಕೆ ಆಡಳಿತಾತ್ಮಕ ಮತ್ತು ಸಂಯುಕ್ತ ಸಹಕಾರಿಯ ಕಾರ್ಯಾನುಕೂಲದ ಹಿತದೃಷ್ಟಿಯಿಂದ ದಿನಾಂಕ 01.04.2023 ರಿಂದ ಅನ್ವಯವಾಗುವಂತೆ ಮುಂದಿನ ಆದೇಶದವರೆಗೆ ಆಂತರಿಕ ವಿಭಾಗ ಬದಲಾವಣೆ ಮಾಡಿ ಆದೇಶಿಸಿದೆ.

| ಕ್ರ ಸಂ. | ಸಿಬ್ಬಂದಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಮತ್ತು ಸ್ಥಳ | ಸ್ಥಳ ನಿಯುಕ್ತಿಗೊಳಿಸಲಾದ ಹುದ್ದೆ ಮತ್ತು ಸ್ಥಳ |
|---|---|---|
| 1 | ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು, ಬೆಂಗಳೂರು & ಮೈಸೂರು ಪ್ರಾಂತ್ಯ ಟಾಸ್ಕ್ ಫೋರ್ಸ್ ಉಸ್ತುವಾರಿ | ಉಪಪ್ರಧಾನ ವ್ಯವಸ್ಥಾಪಕರು, ಟಾಸ್ಕ್ ಫೋರ್ಸ್ ರಾಜ್ಯ ಮುಖ್ಯಸ್ಥರು, ಕೇಂದ್ರ ಕಛೇರಿ, ಬೆಂಗಳೂರು. |
| 2 | ಶ್ರೀಮತಿ ಶೊಭಾ ಆರ್, ಸಹಪ್ರಧಾನ ವ್ಯವಸ್ಥಾಪಕರು, ಹಣಕಾಸು ವಿಭಾಗ, ಕೇಂದ್ರ ಕಛೇರಿ. | ಸಹಪ್ರಧಾನ ವ್ಯವಸ್ಥಾಪಕರು, ಆಡಳಿತ & ಸ್ಥಾಪನಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು. |
| 3 | ಶ್ರೀ ಬಸವರಾಜ್ ಹೊಂಗಲ್, ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರು (ಪ್ರ) | ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಪ್ರಾಂತೀಯ ಕಛೇರಿ. |
| 4 | ಶ್ರೀ ಪಾಲ್‌ರಾಜ್ ಎ, ವ್ಯವಸ್ಥಾಪಕರು, ಸಿಬ್ಬಂದಿ ಮತ್ತು ಆಂತರಿಕ ಆಡಳಿತ, ಕೇಂದ್ರ ಕಛೇರಿ | ವ್ಯವಸ್ಥಾಪಕರು, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಸಂಶೋಧನೆ & ಅಭಿವೃದ್ಧಿ, ಕೇಂದ್ರ ಕಛೇರಿ |
| 5 | ಶ್ರೀ ಮಹಂತಪ್ಪ ಎಸ್.ಎಂ, ವ್ಯವಸ್ಥಾಪಕರು, ಶಾಸನಾತ್ಮಕ ವಿಭಾಗ, ಕೇಂದ್ರ ಕಛೇರಿ. | ವ್ಯವಸ್ಥಾಪಕರು, ಟಾಸ್ಕ್ ಫೋರ್ಸ್ ಬೆಂಗಳೂರು ಮತ್ತು ಮೈಸೂರು ಪ್ರಾಂತ ಉಸ್ತುವಾರಿ, ಕೇಂದ್ರ ಕಛೇರಿ. |

ಈ ಮೇಲ್ಕಂಡ ಸಿಬ್ಬಂದಿಗಳು 31.03.2023 ರ ವರೆಗೆ ಈಗಿನ ಹುದ್ದೆ ಮತ್ತು ಕರ್ತವ್ಯದಲ್ಲೆ ಕಾರ್ಯನಿರ್ವಹಿಸಿ ಎಲ್ಲಾ ಬಾಕಿ ಕಾರ್ಯಗಳನ್ನು ಮುಕ್ತಾಯಗೊಳಿಸಿ ತಮ್ಮ ಪ್ರಭಾರೆಯನ್ನು ಸಂಬಂಧಪಟ್ಟ ನಿಯೋಜಿತ ಸಿಬ್ಬಂದಿಗೆ/ವಿಭಾಗ ಮುಖ್ಯಸ್ಥರಿಗೆ ದಿನಾಂಕ 20.04.2023ರ ಒಳಗಾಗಿ ವರದಿ ಮಾಡಿಕೊಂಡು ತಮ್ಮ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಯ ಮತ್ತು ವಿಭಾಗದ ಕರ್ತವ್ಯಕ್ಕೆ ಹಾಜರಾಗುವುದು.

ಈ ಮೇಲ್ಕಂಡ ಆದೇಶವು ದಿನಾಂಕ 20.03.2023 ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಹೊರಡಿಸಲಾಗಿದೆ.

Karnataka State Souharda Federal Co-op., Regn. No. RSR/SOU/ACT/136/Regn. 051/2001-02 Dated: 04-01-20.. Bengaluru

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

## ಉದ್ಘಾಟನೆ



ದಿನಾಂಕ 13.04.2023ರಂದು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ನಿ,. ತುಮಕೂರು ಇದರ ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ನೆರವೇರಿಸಿದರು. ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಸಿ.ಪಿ. ವಿಜಯ್ ರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಭಾಗವಹಿಸಿದ್ದರು.

## ಭೇಟಿ

ದಿನಾಂಕ 13.04.2023 ರಂದು ದಿ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ,. ತುಮಕೂರು ಶಾಖೆಗೆ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭೇಟಿ ನೀಡಿದರು. ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಸಹಕಾರಿಯ ನಿರ್ದೇಶಕರು, ಸಿಬ್ಬಂದಿ ವರ್ಗ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಭಾಗವಹಿಸಿದ್ದರು.

ದಿನಾಂಕ 13.04.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಗೆ ಭೇಟಿ ನೀಡಿದರು. ತುಮಕೂರು ಜಿಲ್ಲೆಯ ನಿರ್ದೇಶಕರಾದ ಶ್ರೀ ಸಿ.ಪಿ.ವಿಜಯ್ ರವರು, ಶ್ರೀ ವಿಠ್ಠಲ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಎನ್. ಸುರೇಶ್ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

ದಿನಾಂಕ 13.04.2023ರಂದು ಸಿದ್ದಗಂಗಾ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭೇಟಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಗಂಗಾಧರಯ್ಯ ಹಾಗೂ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಬೀದರ ಸೌಹಾರ್ದ ಸಹಕಾರಿ ಸಂಘ ನಿ., ಬೀದರ**



ಶ್ರೀ ಕ್ರಾಂತಿಕುಮಾರ ವೈ ಕುಲಾಲ
ಅಧ್ಯಕ್ಷರು



ಶ್ರೀ ಬಸವರಾಜ್ ಬಿ ಮದಕಟ್ಟಿ
ಉಪಾಧ್ಯಕ್ಷರು

## ಉದ್ಘಾಟನೆ



ಉತ್ತರ ಕನ್ನಡ ಜಿಲ್ಲೆಯ ಜನಪ್ರಿಯ ಸಹಕಾರಿ ಸಂಸ್ಥೆಯಾದ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ 15ನೇ ಶಾಖೆಯನ್ನು ಶಾಖಾ ಕಟ್ಟಡದ ಮಾಲಿಕರಾದ ವೈ.ಎಸ್. ಶಶಿಧರ ಮತ್ತು ಭದ್ರತಾ ಕೊಠಡಿಯನ್ನು ಶ್ರೀಮತಿ ವೀಣಾ ಶಶಿಧರ ಇವರು ಉದ್ಘಾಟಿಸಿದರು.

**ನಿಮ್ಮ ಪ್ರಶ್ನೆ**



**ನಮ್ಮ ಉತ್ತರ**

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ.

–ಸಂಪಾದಕರು

**ಪ್ರಶ್ನೆ : ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು** **ಉತ್ತರ : ಶ್ರೀ ಮಹಾಂತಪ್ಪ, ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

**ಪ್ರಶ್ನೆ: 1: ಸೆಕ್ಷನ್ 20ಬಿ. ಅನ್ವಯ ಯಾರೇ ಸದಸ್ಯನು,**

(ಎ) ಸಹಕಾರಿಯ ಮಹಾಸಭೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಚುನಾವಣಾ ದಿನಾಂಕದಂದು ಸದಸ್ಯನಾಗಿ ಒಂದು ವರ್ಷ ಪೂರ್ಣಗೊಳ್ಳದಿದ್ದರೆ;

(ಬಿ) ಸಹಕಾರಿಯ ಯಾವುದೇ ಬಾಕಿಗಳಿಗಾಗಿ ಸುಸ್ತಿದಾರನಾಗಿದ್ದರೆ;

(ಸಿ)(i) ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗುವ ಮೂಲಕ;

(ii) ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ;

– ವ್ಯವಸ್ಥಾಪನೆಯಲ್ಲಿ ಭಾಗವಹಿಸದಿದ್ದರೆ,

– ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡಲು ಒಂದುವರ್ಷದ ವರೆಗೆ ಅನರ್ಹಗೊಳಿಸತಕ್ಕದ್ದು.

ಮೇಲಿನ ಪ್ರಾವದಾನದಲ್ಲಿ "ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡಲು ಒಂದುವರ್ಷದ ವರೆಗೆ ಅನರ್ಹಗೊಳಿಸತಕ್ಕದ್ದು" ಅನ್ನುವುದು (ಸಿ)(i) ಮತ್ತು (ಸಿ)(ii) ಇವುಗಳಿಗೆ ಮಾತ್ರ ಅನ್ವಯವಾಗುತ್ತದೋ ಅಥವ (ಎ) ಮತ್ತು (ಬಿ) ಇವುಗಳಿಗೂ ಅನ್ವಯವಾಗುತ್ತದೆಯೋ?

**ಉತ್ತರ:–** ಹೌದು (ಎ) ಮತ್ತು (ಬಿ), (ಸಿ)(i), (ಸಿ)(ii)ಗಳಿಗೆ ಅನ್ವಯವಾಗುತ್ತದೆ.

**ಪ್ರಶ್ನೆ: 2: 32 (1) (ಡಿ) ಅನ್ವಯ, ಸಹಕಾರ ವರ್ಷ ಮುಗಿದ ಮೂವತ್ತು ದಿನಗಳ ಒಳಗಾಗಿ ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ ತಯಾರಿಸಬೇಕು. ದಿನಾಂಕ 30ನೇ ಏಪ್ರಿಲ್ ದಿನದಂದು ಸಿದ್ಧಪಡಿಸಿದರೆ ಅದು ಮೂವತ್ತು ದಿನಗಳ ಒಳಗಾಗಿ ಸಿದ್ಧಪಡಿಸಿದ್ದು ಎಂದು ಪರಿಗಣಿತವಾಗುತ್ತದೆಯೇ?**

**ಉತ್ತರ:–** ಹೌದು 30ನೇ ಏಪ್ರಿಲ್ ದಿನದಂದು ಸಿದ್ದಪಡಿಸಿದರೆ ಅದು ಮೂವತ್ತು ದಿನಗಳ ಒಳಗಾಗಿ ಸಿದ್ದಪಡಿಸಿದ್ದು ಎಂದು ಪರಿಗಣಿಸಬಹುದಾಗಿದೆ.

**ಪ್ರಶ್ನೆ: 3: "ಸುಸ್ತಿದಾರ" ಎಂದರೆ ಯಾರು? ಈ ಬಗ್ಗೆ ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಿದ್ದು ಕಾಣಿಸಲಿಲ್ಲ. "ಸುಸ್ತಿದಾರ" ಅನ್ನುವ ಪದ ಕನ್ನಡದ ಕಾಯ್ದೆಯಲ್ಲಿ ಕಾಣಿಸದಿದ್ದರೂ defaulter ಅನ್ನುವ ಪದ ಸೌಹಾರ್ದ ಇಂಗ್ಲಿಷ್ ಕಾಯ್ದೆ ಪುಸ್ತಕದ ಸೆಕ್ಷನ್ 25(ಇ)ರಲ್ಲಿದೆ. ಒಬ್ಬ ನಿರ್ದೇಶಕ ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಸಂದಾಯ ಮಾಡಲು ತಪ್ಪಿದರೆ ಅಥವ ಸಾಲದ ನಿರಂತರ ಮೂರು ಕಂತುಗಳನ್ನು ಮರುಸಂದಾಯ ಮಾಡಲು ತಪ್ಪಿರುವಂತಹ ಸಾಲಗಾರನಿಗೆ ಜಾಮೀನುದಾರನಾಗಿದ್ದರೆ ನಿರ್ದೇಶಕನಾಗಿ ಚುನಾಯಿತನಾಗಲು ಅಥವ ಮುಂದುವರಿಯಲು ಅನರ್ಹನಾಗುತ್ತಾನೆ.**

**ಹೀಗೆ ಕಾಯ್ದೆಯಲ್ಲಿ "ಸುಸ್ತಿದಾರ" ಎಂಬ ಬಗ್ಗೆ ವಿವರಣೆ ಇಲ್ಲದಿರುವುದರಿಂದ ಒಂದುವೇಳೆ ಸಹಕಾರಿಯ ಬೈಲಾದಲ್ಲೂ ಇದರ ಬಗ್ಗೆ ಉಲ್ಲೇಖವಿಲ್ಲದಿದ್ದರೆ ಯಾರನ್ನು ಸುಸ್ತಿದಾರ ಎಂದು ಪರಿಗಣಿಸಬೇಕು?**

**ಉತ್ತರ:–** ಸಾಮಾನ್ಯವಾಗಿ ಸುಸ್ತಿದಾರ ಎಂದರೆ ಸಾಲಗಾರನು ತಾನು ತೆಗೆದುಕೊಂಡ ಸಾಲದ ಕಂತನ್ನು ನಿಗದಿತ ಅವಧಿಯೊಳಗೆ ನಿಗದಿತ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ಅವರನ್ನು ಸುಸ್ತಿದಾರ ಎಂದು ಪರಿಗಣಿಸಬಹುದಾಗಿದೆ.

ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25ರಲ್ಲಿ ಸಹಕಾರಿಯ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆಗೊಳಗಾಗುವ ಪ್ರಾವಧಾನವಿದ್ದು ಅದರಲ್ಲಿ 25(1)(ಇ)ರಲ್ಲಿ ಒಬ್ಬ ನಿರ್ದೇಶಕ ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಸಂದಾಯ ಮಾಡಲು ತಪ್ಪಿದರೆ ಅಥವ ಸಾಲದ ನಿರಂತರ ಮೂರು ಕಂತುಗಳನ್ನು ಮರುಸಂದಾಯ ಮಾಡಲು ತಪ್ಪಿರುವಂತಹ ಸಾಲಗಾರನಿಗೆ ಜಾಮೀನುದಾರನಾಗಿದ್ದರೆ ನಿರ್ದೇಶಕನಾಗಿ ಚುನಾಯಿತನಾಗಲು ಅಥವ ಮುಂದುವರಿಯಲು ಅನರ್ಹನಾಗುತ್ತಾನೆ ಎಂದು ತಿಳಿಸುತ್ತದೆ.

**ಪ್ರಶ್ನೆ: 4: ಅಧಿನಿಯಮ 20ಬಿ(ಸಿ)(i) ಪ್ರಕಾರ ಹಿಂದಿನ ಐದು ವಾರ್ಷಿಕ ಮಹಾಸಭೆಗಳ ಪೈಕಿ ಯಾವುದೇ ಎರಡು ವಾರ್ಷಿಕ ಮಹಾಸಭೆಗಳಲ್ಲಿ ಹಾಜರಾಗದಿದ್ದರೆ ಪಟ್ಟಿಯಲ್ಲಿ ಸೇರಿಸುವಂತಿಲ್ಲ.**

**ಸೇರಿ ಒಂದು ವರ್ಷ ಮುಗಿದ ಸದಸ್ಯನಿಗೆ ಹಿಂದಿನ ಐದು ಸರ್ವಸದಸ್ಯರ ಸಭೆಯಲ್ಲಿ ಕನಿಷ್ಠ ಎರಡು ಸಭೆಗಳಲ್ಲಿ ಭಾಗವಹಿಸಬೇಕು ಅನ್ನುವ ನಿಯಮವನ್ನು ಅನ್ವಯಿಸದೇ ಪಟ್ಟಿಯಲ್ಲಿ ಸೇರಿಸಬೇಕೇ? ಹಾಗಾದರೆ ಎಷ್ಟು ವರ್ಷ ಇದರಲ್ಲಿ ವಿನಾಯತಿ ನೀಡಬೇಕು? ನಂತರದ ಐದು ವರ್ಷದ ಒಂದು ಟರ್ಮ್ ಮುಗಿದಮೇಲೆ, "ಒಂದುವರ್ಷದ ವರೆಗೆ ಅನರ್ಹಗೊಳಿಸತಕ್ಕದ್ದು" ಎಂಬುದನ್ನು ಅನ್ವಯಿಸದೇ ಮತ್ತೆ ಐದು ವರ್ಷಗಳವರೆಗೆ ಹಾಜರಾಗಲು ಅರ್ಹನಾಗುತ್ತಾನೆಯೇ?**

**ಉತ್ತರ:–** ಸಹಕಾರಿಯ ಸದಸ್ಯನಾಗಿ ಸೇರಿದ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಯಲ್ಲಿ ಸರ್ವಸದಸ್ಯರ ಸಭೆಯಲ್ಲಿ ಕನಿಷ್ಠ ಎರಡು ಸಭೆಗಳಲ್ಲಿ ಭಾಗವಹಿಸದೆ ಇದ್ದಲ್ಲಿ ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳಿಸತಕ್ಕದ್ದು.

**ಪ್ರಶ್ನೆ: 5: ಅಧಿನಿಯಮ 20ಬಿ(ಸಿ)(ii) ಅನ್ವಯ ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸಹಕಾರಿಯು ನೀಡಿದ ಅಂಥ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳುವ ಮೂಲಕ ಸಹಕಾರಿಯ ವ್ಯವಸ್ತಾಪನೆಯಲ್ಲಿ ಭಾಗವಹಿಸಿರಬೇಕು.**

ಸೇರಿ ಒಂದು ವರ್ಷ ಪೂರೈಸಿದ ಸದಸ್ಯನನ್ನು, ಮೇಲಿನ ನಿಯಮ ಅನ್ವಯಿಸದೇ ಎಷ್ಟುವರ್ಷ ಅವಕಾಶ ಕೊಡಬೇಕು? ಐದು ವರ್ಷದ ಒಂದು ಟರ್ಮ್ ಮುಗಿದಮೇಲೆ, "ಒಂದುವರ್ಷದ ವರೆಗೆ ಅನರ್ಹಗೊಳಿಸತಕ್ಕದ್ದು" ಎಂಬುದನ್ನು ಅನ್ವಯಿಸದೇ ಮತ್ತೆ ಐದು ವರ್ಷಗಳವರೆಗೆ ಹಾಜರಾಗಲು ಅರ್ಹನಾಗುತ್ತಾನೆಯೇ?

**ಉತ್ತರ:-** ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಮಂಡಲಿ ಚುನಾವಣೆಯಲ್ಲಿ ಮತದಾನ ಮಾಡಲು ಒಂದು ವರ್ಷದವರೆಗೆ ಅನರ್ಹಗೊಳಿಸತಕ್ಕದ್ದು.

ಪರಂತು, ಸಹಕಾರಿಯ ಹೊಸದಾಗಿ ನೋಂದಣಿಗೊಂಡ ತರುವಾಯ ಕೂಡಲೇ ನಡೆಯುವ ಸಹಕಾರಿಯ ಆಡಳಿತ ಮಂಡಲಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಮತ್ತು ಪ್ರಥಮ ಮಹಾಸಭೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಈ ನಿರ್ಬಂಧವು ಅನ್ವಯಿಸತಕ್ಕದ್ದಲ್ಲ.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2022-23ನೇ (ಮಾರ್ಚ್ 2023ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

| ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು. | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 383.27 |
| ಸಾಲ ಮತ್ತು ಮುಂಗಡಗಳು | 256.43 |
| ಒಟ್ಟು ವ್ಯವಹಾರ | 639.70 |
| ನಿವ್ವಳ ಲಾಭ | 9.05 |
| ನೆಟ್ ಎನ್.ಪಿ.ಎ ಅನುಪಾತ | 0% |
| 2022-23ರ ಸಹಕಾರಿಯ ಪ್ರಗತಿ | ಶೇ. 120.66 |

| ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಾನಗಲ್ಲ | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
| ಠೇವಣಿಗಳು | 3.92 ಕೋಟಿ |
| ಸಾಲ ಹಾಗೂ ಮುಂಗಡಗಳು | 4.36 ಕೋಟಿ |
| ಒಟ್ಟು ವ್ಯವಹಾರ | 8.28 ಕೋಟಿ |
| ದುಡಿಯುವ ಬಂಡವಾಳ | 5.62 ಕೋಟಿ |
| ನಿವ್ವಳ ಲಾಭ | 26.79 ಲಕ್ಷ |

| ಬಾಗಲಕೋಟೆ ಬಸವಶ್ರೀ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಬಾಗಲಕೋಟೆ | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
| ಶೇರು ಬಂಡವಾಳ | 53,12,200 |
| ಠೇವಣಿಗಳು | 13,72,60,389 |
| ಸಾಲಗಳು | 11,16,12,694 |
| ಗುಂತಾವಣಿ | 1,84,25,560 |
| ನಿವ್ವಳ ಲಾಭ | 27,90,630 |
| ದುಡಿಯುವ ಬಂಡವಾಳ | 15,23,21,396 |

| ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿ., ಯರಗಟ್ಟಿ | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
| ಒಟ್ಟು ವ್ಯವಹಾರ | 51,91,55,598 |
| ನಿವ್ವಳ ಲಾಭ | 19,10,844 |
| ಶೇರು ಬಂಡವಾಳ | 12,60,700 |
| ಒಟ್ಟು ನಿಧಿಗಳು | 47,61,041 |
| ಒಟ್ಟು ಠೇವಣಿಗಳು | 11,54,01,936 |
| ಒಟ್ಟು ಸಾಲಗಳು | 9,26,68,155 |
| ದುಡಿಯುವ ಬಂಡವಾಳ | 12,14,23,677 |
| ಶಾಖೆಗಳು | 02 |

| ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ, ಹುಕ್ಕೇರಿ, ಬೆಳಗಾವಿ. | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
| ಸದಸ್ಯರ ಸಂಖ್ಯೆ | 15,109 |
| ವಸೂಲಾದ ಶೇಅರ ಬಂಡವಾಳ | 99,37,000 |
| ಕಾಯ್ದಿಟ್ಟ ನಿಧಿ & ಇತರ ನಿಧಿಗಳು | 21,02,94,896 |
| ಠೇವುಗಳು | 217,26,99,519 |
| ಗುಂತಾವಣೆಗಳು | 68,13,20,648 |
| ಸಾಲಗಳು | 169,78,80,225 |
| ದುಡಿಯುವ ಬಂಡವಾಳ | 239,29,31,416 |
| ಒಟ್ಟು ವಹಿವಾಟು | 1651,58,92,081 |
| ನಿವ್ವಳ ಲಾಭ | 4,53,63,969 |
| ಲಾಭಾಂಶ ನೀಡಿದ್ದು | 25 %. |
| ಶಾಖೆಗಳು | 9+1 |
| ಸಾಲ ವಸೂಲಾತಿ | 99% |

# ಸಹಕಾರ ಸಂಘಗಳ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಅವಧಿ- 5 ವರ್ಷಗಳು - ಒಂದು ಪುನರ್ ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ

"ಸ್ವಾಭಿಮಾನಿ ಸಹಕಾರಿ" ಯ ನವೆಂಬರ್ 2021ರ ಸಂಚಿಕೆಯಲ್ಲಿ ಪ್ರಕಟವಾದ ಮುಂದಿನ ಭಾಗವಾಗಿ ಈ ಲೇಖನ ತಯಾರಿಸಿದ್ದೇನೆ.

ಸಹಕಾರ ಸಂಸ್ಥೆಗಳ ಕಾಯಿದೆ 1959ರ ಕಲಂ.28ಎ(4) ಈ ಕೆಳಕಂಡಂತೆ ಉಲ್ಲೇಖಿಸಿದೆ.

"29ಎ ಮತ್ತು 39ಎ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟ ಮಂಡಳಿಯ ಅನ್ಯಥ ಉಪಬಂಧಗಳಿಗೆ ಒಳಪಟ್ಟ ಮಂಡಳಿಯ ಅನ್ಯಥ ಉಪಬಂಧಿಸಿದುದನ್ನುಳಿದು ಸದಸ್ಯರುಗಳ ಅವಧಿಯ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಂದು ಮಂಡಳಿಯ ಅಂಥ ಸದಸ್ಯರು ಅವರ ಪದವನ್ನು ತೆರವು ಮಾಡಿರುವುದಾಗಿ ಭವಿಸತಕ್ಕದ್ದು.

1. ರಾಜ್ಯ ಸಕಾರವು, ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘದ ಮಂಡಳಿಯನ್ನು ಹೊರತು ಪಡಿಸಿದ ಪ್ರತಿಯೊಂದು ಸಹಾಯಕ ಸಂಘದ ಮಂಡಳಿಯ ಪ್ರತಿನಿಧಿಯಂತೆ ಒಬ್ಬ ವ್ಯಕ್ತಿಯನ್ನು ನಾಮ ನಿರ್ದೇಶಿಸಬಹುದು.

**28ಎ(4) ನ ಪರಂತುಕ**

ಪರಂತು ಯಾವುದೇ ಸಹಕಾರ ಸಂಘದ ಮಂಡಳಿಯ ಚುನಾವಣೆಯನ್ನು 1997 ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ಮೊದಲು ಈಗಾಗಲೇ ನಡೆಸಿದ್ದರೆ, ಅಂಥ ಸಹಕಾರ ಸಂಘದ ಮಂಡಳಿಯ ಪದಾವಧಿಯು ಯಾವ ಸಹಕಾರ ಸಂಘದ ಮಂಡಳಿಯ ಪದಾವಧಿಯು ಯಾವ ಸಹಕಾರ ವರ್ಷದಲ್ಲಿ ಅಂಥ ಚುನಾವಣೆಯನ್ನು ನಡೆಸಲಾಗಿದ್ದರೂ, ಆ ವರ್ಷವೂ ಸೇರಿದಂತೆ ಮೂರು ವರ್ಷಗಳಾಗಿರತಕ್ಕದ್ದು.

**ವಿವರಣೆ:** ಅಷ್ಟೇ ಅಲ್ಲದೆ ನೋಂದಣಿಯ ನಂತರ ಸಂಘದ ಮೊದಲ ಸಾಮಾನ್ಯ ಸಭೆಯನ್ನು ನಿರ್ವಹಿಸುವುದಕ್ಕಾಗಿ ಮೊದಲ ಮಂಡಳಿಯನ್ನು ಚುನಾಯಿಸಲು ಸಂಘದ ನೋಂದಾವಣೆಯಾದ ನಂತರ ಅದರ ನೋಂದಣಿಯ ದಿನಾಂಕದಿಂದ ಒಂದು ತಿಂಗಳೊಳಗಾಗಿ ಆ ಸಂಘದ ಮೊದಲ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು ಮತ್ತು ಅಂಥ ಮಂಡಳಿಯ ಪದಾವಧಿಯೂ ಸಹ ಚುನಾವಣೆ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು. ಅಷ್ಟೇ ಅಲ್ಲದೆ ಪ್ರಕರಣ 14ರನ್ವಯ ಸಂಯೋಜನೆ ಅಥವಾ ಪುನಃ ಸಂಯೋಜನೆ ಅಥವಾ ವಿಭಜನೆಗೊಂಡ ನಂತರ ರಚನೆಯಾದ ಸಹಕಾರ ಸಂಘದ ಅಥವಾ ಸಂಘಗಳ ವ್ಯವಹಾರವನ್ನು ನಿರ್ವಹಿಸಿಕೊಂಡು ಹೋಗಲು ಪ್ರಥಮ ಮಂಡಳಿ ಆಯ್ಕೆಯನ್ನು ಮಾಡುವುದಕ್ಕಾಗಿ ಮೊದಲ ಸಾಮಾನ್ಯ ಸಭೆಯನ್ನು ನೋಂದಣಿಯಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ನಡೆಸತಕ್ಕದ್ದು ಮತ್ತು ಅಂತಹ ಮಂಡಳಿಯ ಪದಾವಧಿಯೂ ಸಹ ಚುನಾವಣೆಗೆ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು.

**ಕಲಂ.29ಸಿ(3)(ಎ):** 39ಎ ಮತ್ತು 39ಎಫ್ ಕಲಮುಗಳ ಪ್ರಕಾರ ಚುನಾವಣೆಗಳನ್ನು ನಡೆಸಲು ಸಹಕಾರಿ ಚುನಾವಣಾ ಆಯೋಗಕ್ಕೆ ನೆರವಾಗಲು ವಿಫಲವಾದರೆ

ಹಾಗೆ ವಿಫಲವಾದ ಮಂಡಳಿಯ ಪ್ರತಿಯೊಬ್ಬ ಸದಸ್ಯನು, ಅನರ್ಹತೆಯ ಆದೇಶದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಂಘದ ಮಂಡಳಿಯ ಸದಸ್ಯನಾಗಿ ಚುನಾಯಿತನಾಗಿರಲು ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು.

ಕಲಂ. 30(2)(v) ಗೊತ್ತುಪಡಿಸಿದ ಕಾಲದೊಳಗೆ ಮಂಡಳಿಗೆ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ನಿರೂಪಿಸಿರುವ ಕ್ಯಾಲೆಂಡರಿನ ಪ್ರಕಾರ ಚುನಾವಣಾ ಆಯೋಗ ಪುಸ್ತಕಗಳು ಮತ್ತು ದಾಖಲೆಗಳು ಅವಶ್ಯ ಮಾಹಿತಿ ಮತ್ತು ನೆರವನ್ನು ಒದಗಿಸಲು ವಿಫಲವಾಗಿದೆ ಎಂದು ಮತ್ತು ತತ್ಪರಿಣಾಮವಾಗಿ ಅಥವಾ ಅನ್ಯಥಾ ಗೊತ್ತುಪಡಿಸಿದ ಕಾಲದೊಳಗೆ ಚುನಾವಣಾ ಆಯೋಗವು ಚುನಾವಣೆಗಳನ್ನು ನಡೆಸಲು ವಿಫಲವಾಗಿದೆ ಎಂದು.

ನಿಬಂಧಕರು ಅಭಿಪ್ರಾಯಪಟ್ಟರೆ, ಅವನು ಮಂಡಳಿಯ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ತಿಳಿಸಲು ಮಂಡಳಿಗೆ ಒಂದು ಅವಕಾಶವನ್ನು ನೀಡಿದ ತರುವಾಯ. ಲಿಖಿತ ಆದೇಶದ ಮೂಲಕ ಸದರಿ ಮಂಡಳಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು. ಮತ್ತು ಆರು ತಿಂಗಳನ್ನು ಮೀರದ ಅವಧಿಗೆ ಸಂಘದ ವ್ಯವಹಾರಗಳನ್ನು ನಿರ್ವಹಿಸಲು ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು.

ಪರಂತು. ಯಾವುದೇ ಸರ್ಕಾರಿ ಷೇರು ಧಾರಣೆ ಅಥವಾ ಸಕಾರವು ನೀಡಿರುವ ಸಾಲ, ಹಣಕಾಸು ನೆರವು ಅಥವಾ ಯಾವುದೇ ಖಾತ್ರಿ ಇಲ್ಲದಿದ್ದರೆ, ಯಾವುದೇ ಸಹಕಾರ ಸಂಘದ ಮಂಡಳಿಯನ್ನು ರದ್ದುಗೊಳಿಸತಕ್ಕದ್ದಲ್ಲ. ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ.

ಮತ್ತು ಪರಂತು, ಸಹಕಾರ ಸಂಘದ ಮಂಡಳಿಯ ರದ್ದತಿಯನ್ನು ಸಂಧರ್ಭಾನುಸಾರ ಭಾರತದ ರಿಸರ್ವ್ ಬ್ಯಾಂಕ್‌ನೊಂದಿಗೆ/ ರಾಷ್ಟ್ರೀಯ ಬ್ಯಾಂಕ್ ನೊಂದಿಗೆ ಸಮಾಲೋಚಿಸಿ ತರುವಾಯ ಮಾತ್ರವೇ ಮಾಡತಕ್ಕದ್ದು ಮತ್ತು ಬ್ಯಾಂಕಿಂಗ್ ವಿನಿಮಯ ಅಧಿನಿಯಮ, 1949ರ (೦೦ಅಖ) ಉಪನಿಬಂಧಗಳೂ ಸಹ ಅನ್ವಯವಾಗತಕ್ಕದ್ದು.

**ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ.24(2) ಈ ಕೆಳಕಂಡಂತೆ ಉಲ್ಲೇಖಿಸಿದೆ.**

"(2) ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು ಚುನಾಯಿತ ನಿರ್ದೇಶಕರುಗಳ ಅದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಒಂದು ವರ್ಷಗಳಾಗಿರತಕ್ಕದ್ದು.

ಪರಂತು, ಸಂಯುಕ್ತ ಸೌಹಾರ್ದ ಸಹಕಾರಿಯ ನಿರ್ದೇಶಕತ್ವದ ಅಧಿಕಾರಾವಧಿಯು ಪ್ರತಿನಿಧಿಸಲ್ಪಡುವ ಸಹಕಾರಿಯ ಆಡಳಿತ ಮಂಡಳಿಯ ಅಧಿಕಾರವಧಿಯೊಂದಿಗೆ ಅಂತ್ಯವಾಗತಕ್ಕದ್ದು".

ಪರಂತು, ಸಂಯುಕ್ತ ಸಹಕಾರಿಯ ನಿರ್ದೇಶಕನತನ ಅಧಿಕಾರಾವಧಿಯು ಆತನು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ ಮುಕ್ತಾಯಗೊಳ್ಳತಕ್ಕದ್ದು.

ಕಲಂ. 38(ಸಿ): ಅದು ಚುನಾವಣೆಯನ್ನು ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತೆ ಯಾವುದೇ ಕಾರಣದಿಂದ ಚುನಾವಣೆ ಪ್ರಾಧಿಕಾರವು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿ ಮುಕ್ತಾಯದ ನಿಕಟ ಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ.ಎಂದು ಸಂಯುಕ್ತ ಸಹಕಾರಿಯ ಅಭಿಪ್ರಾಯಪಟ್ಟಲ್ಲಿ, ಅದು ಮಂಡಳಿಯನ್ನು ರದ್ದುಗೊಳಿಸಬಹುದು ಅಥವಾ ಅಮಾನತ್ತಿನಲ್ಲಿಡಬಹುದು ಮತ್ತು ಸಂಯುಕ್ತ ಸಹಕಾರಿಯು ನಿರ್ದಿಷ್ಟ ಪಡಿಸ ಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಗೆ ಸಹಕಾರಿಯ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಾಧಿಕಾರಿಯನ್ನು ನೇಮಕ ಮಾಡಬಹುದು.

**ಕಲಂ. 54(3):**

ಸಂಯುಕ್ತ ಸಹಕಾರಿಯ ಮಂಡಳಿಯ ಪದಾವಧಿ ಚುನಾವಣೆ ನಡೆಸಿದದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು".

**ಕಲಂ. 55(2):**

"ನಿರ್ಗಮಿಸುತ್ತಿರುವ ಮಂಡಳಿ ಪದಾವಧಿಯು ಮುಕ್ತಾಯವಾಗುವುದರೊಳಗಾಗಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಅಗತ್ಯನೆರವು ನೀಡದಿದ್ದರೆ" ಕಲಂ.25(2)(ಎ)(ಬಿ)(ಸಿ)(ಇ) ಅನ್ವಯಿಸತಕ್ಕದ್ದು.

**ಕಲಂ.**

ಈ ಮೇಲ್ಕಂಡ ಕಾನೂನಿನ ಅವಕಾಶಗಳನ್ನು ಅಧ್ಯೆಸಿದ ನಂತರ ಒಂದು ಸಣ್ಣ ಪೀಠಿಕೆ ನೀಡುವುದು ಅವಶ್ಯಕ.

**ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ರಿಟ್‌ದಾಖಲಿಸಬಹುದೇ?**

ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಸಂಸ್ಥೆ, ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ. 53ರಲ್ಲಿ ರಾಜ್ಯಕ್ಕೆ ಒಂದು ಸಂಯುಕ್ತ ಸಹಕಾರಿ ಇರತಕ್ಕದ್ದು ಎಂದು ನಿಗದಿ ಪಡಿಸಿದೆ. ಕಾಯಿದೆ ಕಲಂ.25(2)(ಎ) ನಿಗದಿಪಡಿಸಿದ ಅವಧಿಯೊಳಗೆ ಚುನಾವಣೆ ನಡೆಸದಿದ್ದರೆ ಅಂತಹ ಮಂಡಳಿಯ ಪ್ರತಿಯೊಬ್ಬ ಸದಸ್ಯನೂ ಐದು ವರ್ಷದ ಅವಧಿವರೆವಿಗೂ ಅನರ್ಹತೆಗೊಳಗಾಗುತ್ತಾನೆ. ಇದನ್ನ 25(4)ರಡಿ ಸಂಯುಕ್ತ ಸಹಕಾರಿ ಸಂಬಂದ ಪಟ್ಟ ಮಂಡಳಿ ಸದಸ್ಯರಿಗೆ ಅವಹಾಲು ಕೇಳೀಕೊಳ್ಳಲು ಅವಕಾಶ ನಿಡಿದ ನಂತರ, ಅನರ್ಹತೆ ಆದೇಶ ಮಾಡತಕ್ಕದ್ದು ಮತ್ತು ಅಂತಹ ಸಂಯುಕ್ತ ಸಹಕಾರಿ ಮಾಡಿದ ಆದೇಶಕ್ಕೆ ನಿಬಂಧಕರು ಮೇಲ್ಮನವಿ ಪ್ರಾಧಿಕಾರವಾಗಿರತಕ್ಕದ್ದು ಎಂದಿದೆ. ಅಂದರೆ ಸಂಯುಕ್ತ ಸಹಕಾರಿ ಶಾಸನಾತ್ಮಕ ಸಂಸ್ಥೆಯಾಗಿ, ಸದಸ್ಯ ಸಹಕಾರಿಗಳು, ಐದು ವರ್ಷದ ಒಳಗೆ ಹೊಸ ಮಂಡಳಿ ರಚನೆಗೆ ಚುನಾವಣಾ ಪ್ರಾಧಿಕಾರಕ್ಕೆ ಸಹಕರಿಸದಿದ್ದರೆ ಅಂತಹ ಮಂಡಳಿ ಎಲ್ಲಾ ಸದಸ್ಯರನ್ನು ಅನರ್ಹಗೊಳಿಸುವ ಪ್ರಾಧಿಕಾರವೇ ಉಚ್ಚ ನ್ಯಾಯಾಲಯದಲ್ಲಿ ತನ್ನ 5 ವರ್ಷದ ಅವಧಿ ಮುಗಿದರೂ, ಆಡಳಿತಾಧಿಕಾರಿ ನೇಮಿಸದಂತೆ ರಿಟ್ ದಾಖಲಿಸಬಹುದು ಎಂಬ ತೀರ್ಮಾನವನ್ನು ತೆಗೆದುಕೊಂಡ ಶಾಸನಾತ್ಮಕ ಸಂಯುಕ್ತ ಸಹಕಾರಿ ಮೇಲೆ ಕ್ರಮವೇಕಿಲ್ಲ?

ರಿಟ್ ಸಂಖ್ಯೆ 12511-12515/2016 ರಲ್ಲಿ ಮೊದಲೇ ಅರ್ಜಿದಾರನಾಗಿ, ಶಾಸನಾತ್ಮಕ ಸಂಸ್ಥೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ರಿಟ್ ದಾಖಲಿಸುವುದು, ಸದಸ್ಯ ಸಹಕಾರಿಗಳ ಮೇಲೆ ಕ್ರಮ ಜರುಗಿಸುವ ನೈತಿಕ ಹಾಗೂ ಶಾಸನಾತ್ಮಕ ಹಕ್ಕು ಹೇಗೆ ಚಲಾಯಿಸುತ್ತಾರೆ. ಅಂದರೆ ಒಂದು ಸಂಸ್ಥೆಯ ಕಾರ್ಯಾಂಗದ ಮುಖ್ಯಸ್ತ , ಆ ಸಂಸ್ಥೆ ತೆಗೆದುಕೊಂಡ ಪ್ರತಿಯೊಂದು ತೀರ್ಮಾನವನ್ನು ಜಾರಿಮಾಡುವ ಅಧಿಕಾರಿ, ಆ ಅಧಿಕಾರಿಗೆ ಕಾಯಿದೆಯಲ್ಲಿ ನಿಗದಿಪಡಿಸಿದ ಐದು ವರ್ಷಗಳ ಮಂಡಳಿ ಅವಧಿಯನ್ನು ಪ್ರಶ್ನಿಸುವ ಅಧಿಕಾರವಿಲ್ಲ. ಚುನಾಯಿತ ಪ್ರತಿನಿಧಿಗಳು ಮಾತ್ರ ರಿಟ್ ದಾಖಲಿಸಬಹುದು. ಏಕೆಂದರೆ ಅವರ ಅಧಿಕಾರಕ್ಕೆ ಸಂಬಂದಪಟ್ಟ ವಿಷಯ, ಆದರೆ ವ್ಯವಸ್ಥಾಪಕ ನಿರ್ದೇಶಕ ರಿಟ್ ದಾಖಲಿವುದು ಸರ್ಕಾರವೇ ತನ್ನನ್ನು ತಾನೇ ರಿಟ್ ಮೂಲಕ ಪ್ರಶ್ನಿಸಿದಂತೆ. ಈ ರಿಟ್ ಪ್ರಕರಣದಲ್ಲಿ ಐವರು ರಿಟ್ ದಾರರಿದ್ದರೆ(2-5) ಅವರು ಚುನಾಯಿತ ಪ್ರತಿನಿಧಿಗಳು ಅವರಿಗೆ ಪ್ರಶ್ನಿಸುವ ಅಧಿಕಾರವಿದೆ. ಆದರೆ ರಿಟ್ ದಾಖಲಿಸಿದಾಗ ಖರ್ಚನ್ನು ಸಂಯುಕ್ತ ಸಹಕಾರಿಯು ಭರಿಸಿದೆ, ಸಂಯುಕ್ತ ಸಹಕಾರಿ ಯಾವುದೇ ರಿಟ್ ಅರ್ಜಿಯು ಎದುರು ಅದೇಶದಾರರಾಗಬೇಕೇ ಹೊರತು ಅರ್ಜಿದಾರನಲ್ಲ ಏಕೆಂದರೆ ರಿಟ್‌ನ ತೀಮಾನವನ್ನು ಜಾರಿ ಮಾಡುವ ಜವಾಬ್ದಾರಿ ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕನಿಗೆ ಸೇರಿದ್ದು. ರಿಟ್ ಅರ್ಜಿಯು ಸಂಯುಕ್ತ ಸಹಕಾರಿ 6ನೇ ಎದುರು ಅರ್ಜಿದಾರ ಎಂದು ರಿಟ್ ಟಿಪ್ಪಣಿಯಲ್ಲಿ ತಿಳಿಸಿದ್ದರೂ ದಾಖಲೆಯಲ್ಲಿ 6ನೇ ಎದುರು ಅರ್ಜಿದಾರನಲ್ಲವೇ ಇಲ್ಲ. ಇದರ ಜೊತೆ ರಿಟ್ ದಾಖಲಿಸಿದ 2-5 ಅರ್ಜಿದಾರರು ಪ್ರತಿನಿಧಿಸಿದ ಸಹಕಾರಿಯಿಂದ ರಿಟ್ ದಾಖಲಿಸಲು ಮತ್ತು ಖರ್ಚನ್ನು ಭರಿಸಲು ತೀರ್ಮಾನವಾಗಿದೆಯೇ ಎಂಬುದನ್ನು ಪರಿಶೀಲಿಸುವ ಜವಾಬ್ದಾರಿಯು ಮೊದಲನೇ ರಿಟ್ ಅರ್ಜಿದಾರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರ ಜವಾಬ್ದಾರಿ. ಈ ರೀಟ್ ಅರ್ಜಿಗಳಿಗೆ ಮಾಡಿದ ಖರ್ಚನ್ನು ಸಂಯುಕ್ತ ಸಹಕಾರಿ ಭರಿಸದಿದ್ದರೆ, ಅದನ್ನು ವ್ಯವಸ್ಥಾಪಕ ನಿರ್ದೇಶಕರಿಮದ ವಸೂಲಿ ಮಾಡುವ ಜವಾಬ್ದಾರಿ ಸಂಯುಕ್ತ ಸಹಕಾರಿ ಮಂಡಳಿಗೆ ವಿಹತವಾಗಿದೆ. ಇಲ್ಲವಾದರೆ. ನಿಬಂಧಕರು/ ಸರ್ಕಾರ ಮಧ್ಯಪ್ರವೇಶ ಮಾಡಿ ಸಂಯುಕ್ತ ಸಹಕಾರಿ ಮಂಡಳಿ ಮೇಲೆ ಕ್ರಮ ಜರುಗಿಸಬೇಕು.

**ಈ ಪ್ರಕರಣದಲ್ಲಿ ನಿಬಂಧಕರ ಪಾತ್ರವೇನು?**

ಈ ಪ್ರಕರಣದಲ್ಲಿ ಎದುರು ಅರ್ಜಿದಾರರು ಸಕಾರದ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ, ಸಹಕಾರ ಸಂಘಗಳ ನಿಬಂಧಕರು, ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ ಮತ್ತು ಕೊನೆಯದಾಗಿ, ಚುನಾವಣೆ ನಡೆಸಲು ನೇಮಕವಾದ ವಿಭಾಗೀಯ ಆಯುಕ್ತರನ್ನಾಗಿ ಮಾಡಲಾಗಿದೆ.

ಈ ಮೇಲ್ಕಂಡ ಎಲ್ಲರೂ ಸರ್ಕಾರದ ಅಧಿಕಾರಿಗಳಾದ್ದರಿಂದ, ಸರ್ಕಾರದ ಹಿರಿಯ ವಕೀಲರೇ ಪ್ರಕರಣ ನಡೆಸಬೇಕು. ಮತ್ತು ಚುನಾವಣಾ ಪ್ರಾಧಿಕಾರ ಮತ್ತು ವಿಭಾಗೀಯ ಆಯುಕ್ತರಿಗೆ ಪ್ರತ್ಯೇಕ ವಕೀಲರನ್ನು ನೇಮಿಸಿಕೊಂಡಿದ್ದಾರೆ.

ಕರ್ನಾಟಕ ಸೌಹಾರ್ದ ಕಾಯಿದೆಯನ್ನು ಶಾಸನಾತ್ಮಕವಾಗಿ ಕೆಲವು ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ನೀಡಿದ್ದರೂ ಕಾಯಿದೆ ನಿರ್ವಹಿಸುವ ಜವಾಬ್ದಾರಿ ನಿಬಂಧಕರಿಗೆ ವಿಹಿತವಾಗಿದೆ ಮತ್ತು ಸಂಯುಕ್ತ ಸಹಕಾರಿ, ನಿಬಂಧಕರ ವ್ಯಾಪ್ತಿಗೆ ಬರುತ್ತದೆ.

ಮೇಲ್ಕಂಡ ರಿಟ್ ಅರ್ಜಿ ವಿಚಾರಣೆಗೆ ಬಂದಾಗ, ಸರ್ಕಾರದ ವಕೀಲರ ಮುಖಾಂತರ ಶ್ರೇಷ್ಠ ನ್ಯಾಯಾಲಯ ಮತ್ತು ಉಚ್ಚನ್ಯಾ;ಯಗಳು ಈಗಾಗಲೇ ತೀರ್ಮಾನಿಸಿರುವಂತೆ, ಕಾಯಿದೆಯಲ್ಲೂ ನಿಗದಿಪಡಿಸಿದ ಅವಧಿಗೆ ಮಂಡಳಿ ರಚನೆಯಾದ ಐದು ವರ್ಷಕ್ಕೆ ಮುಕ್ತಾಯವಾಗುತ್ತದೆ ಮತ್ತು ಆಡಳಿತಾಧಿಕಾರಿ ನೇಮಕ ಮಾಡುವುದು ಒಂದು ಆಡಳಿತಾತ್ಮಕ ಜವಾಬ್ದಾರಿ ಎಂದು ಏಕೆ ರಿಟ್ ಪ್ರಕರಣ ಪೂರ್ವಭಾವಿ ವಿಚಾರಣೆಗೆ ಬಂದಾಗ ಪ್ರತಿ ಪಾದಿಸಲಿಲ್ಲ. ಶ್ರೇಷ್ಟ ನ್ಯಾಯಾಲಯ ಎಪಿಎಂಸಿ ಕಾಯಿದೆ, ಜಿಲ್ಲಾ ಪಂಚಾಯತ್ ಕಾಯಿದೆಗಳಲ್ಲಿ ನಿಗದಿ ಪಡಿಸಿದ ಅವಧಿ ಮುಕ್ತಾಯವಾದ ದಿನಾಂಕಕ್ಕೆ ಆಡಳಿತಾಧಿಕಾರಿ ಅಧಿಕಾರವಹಿಸಿಕೊಳ್ಳುತ್ತಾನೆ ಎಂದು ಏಕೆ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಿಲ್ಲ. ನಿಬಂಧಕರ ಕಛೇರಿಯಲ್ಲೂ ಕಾನೂನು ಕೋಶ ಏನುಮಾಡುತ್ತಿದೆ.?

ಸರ್ಕಾರ ಹಿರಿಯ ವಕೀಲರನ್ನು ಹಾಜರಾಗಲು ತಿಳಿಸಿ, ಮರು ಪರಿಶೀಲನಾ ಅರ್ಜಿದಾಖಲಿಸಬಹುದೇ ಎಂಬುದನ್ನು ಪರಿಶೀಲಿಸಬೇಕು. ಏಕೆಂದರೆ ಇದೇರೀತಿ ಎಲ್ಲಾ ಸಹಕಾರ ಸಂಸ್ಥೆಗಳ ರಿಟ್ ದಾಖಲಿಸಿ, ಪರಿಹಾರ ಪಡೆದು ನಿಗದಿಪಡಿಸಿದ ಅವಧಿಮೀರಿ ಅಧಿಕಾರದಲ್ಲಿ ಮುಂದುವರಿದರೆ, ಅವಶ್ಯ ನಿಬಂಧಕರ ಜವಾಬ್ದಾರಿಯಲ್ಲವೇ.

### ಸಂಯುಕ್ತ ಸಹಕಾರಿ ಜವಾಬ್ದಾರಿ

ಈ ಮೇಲ್ಕಂಡ ರಿಟ್ ದಾಖಲಿಸಿದ ಐವರಲ್ಲಿ 4 ಅರ್ಜಿದಾರರೂ ಈ ಸಂಸ್ಥೆಯಲ್ಲಿ ಅಧ್ಯಕ್ಷರು ಅಥವಾ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಸದಸ್ಯ ಸಹಕಾರಿಗಳು ಅವಧಿಯೊಳಗೆ ಚುನಾವಣೆ ಮಾಡದಿದ್ದರೆ ಆ ಮಂಡಳಿ ಎಲ್ಲಾ ಸದಸ್ಯರೂ ಅನರ್ಗತೆಗೊಳಿಸುವ ಅಧಿಕಾರವನ್ನು ಕಾಯಿದೆಯಲ್ಲಿ ಪಡಿದು, ಅದನ್ನು ಸಂಯುಕ್ತ ಸಹಕಾರಿ ಮಂಡಳಿ ಕಾನೂನು ಮುರಿದರೆ, ಸದಸ್ಯ ಸಹಕಾರಿಗಳಿಗೆ ಯಾವ ಸಂದೇಶ ನಿಡುತ್ತದೆ. ಅಂದರೆ ಕಾನೂನು ಜಾರಿ ಮಾಡುವ ಪ್ರಾಧಿಕಾರವೇ ಕಾನೂನು ಉಲ್ಲಂಘನೆ ಮಾಡಿದಂತಲ್ಲವೇ, ಅದಕ್ಕೆ ಶಿಕ್ಷೆ ಪಡೆಯಲೇ ಬೇಕಲ್ಲವೇ. ಅಂದರೆ ರಿಟ್ ಅರ್ಜಿದಾರರಾದ (2–5) ಅರ್ಜಿದಾರರು 5 ವರ್ಷದ ಅವಧಿಗೆ ಅನರ್ಹತೆಗೊಳಿಸಲಾಗುವುದಲ್ಲವೇ.

(ಇನ್ನಿತರ ಮಂಡಳಿ ಸದಸ್ಯರನ್ನು ಸೇರಿಸಿ)

ಇದನ್ನು ಕಾನೂನು ಇಲಾಖೆಯಿಂದ ನಿಬಂಧಕರು ಪರಿಶೀಲಿಸಿ, ಕ್ರಮ ಜರುಗಿಸದಿದ್ದರೆ, ಇಂತಹ ಪ್ರಸಂಗಗಳು ಮರುಕಳಿಸುವುದಿಲ್ಲವೆಂದು ಏನು ಖಾತ್ರಿ?

ಮೇಲ್ಕಂಡ ರಿಟ್ ಅರ್ಜಿಯನ್ನು ದಿನಾಂಕ 25–11–2020ರಂದು "ರಿಟ್ ನಿರರ್ಥಕವೆಂದು" ತೀರ್ಮಾನಿಸಿತು ಅಂದರೆ ಹೆಚ್ಚುವರಿಯಾಗಿ (5 ವರ್ಷಗಳ ನಂತರ) ಸುಮಾರು 1 1/2 ವರ್ಷಗಳ ಅಧಿಕಾರದಲ್ಲಿ ಇದ್ದ ಮಂಡಳಿ, ಆ ಅವಧಿಯಲ್ಲಿ ಆದ ಹಣಕಾಸು ಖರ್ಚು, ತಾಂತ್ರಿಕ ತೀರ್ಮಾನಗಳಿಂದ ಆದ ಆರ್ಥಿಕ ನಷ್ಟ, ಮತ್ತು ಸಭೆಗಳು, ಪ್ರವಾಸಭತ್ಯೆ, ಸಭಾಭತ್ಯೆಗಳನ್ನು ವಸೂಲಿ ಮಾಡುವುದು ಹೇಗೆ? ಈ ಬಗ್ಗೆ ನಿಬಂಧಕರು ಪುನರ್ ವಿಮರ್ಷೆ ಅರ್ಜಿ ದಾಖಲಿಸುವ ಬಗ್ಗೆ ತುರ್ತಾಗಿ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯ.

### ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯ ತೀರ್ನಿಸಬೇಕಾದ ಪ್ರಮುಖ ಪ್ರಶ್ನೆಗಳೇನು?

1. ಕರ್ನಾಟಕ ಸೌಹಾರ್ದ ಕಾಯಿದೆ ಕಲಂ. 25(2)(ಎ) ಒಂದು ಚುನಾಯಿತ ಮಂಡಳಿ ತನ್ನ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಮಂಡಳಿ ರಚನೆ ಮಾಡಬೇಕು ಇಲ್ಲವಾದರೆ ಅಂತಹ ಮಂಡಳಿ ಎಲ್ಲಾ ಸದಸ್ಯರು ಐದು ವರ್ಷದ ಅವಧಿಗೆ ಅನರ್ಹತೆ ಹೊಂದಿರುತ್ತಾರೆ.

2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಕಲಂ. 55(2)(1) ರಡಿ ಹೊಸ ಮಂಡಳಿ ರಚನೆ ಮಾಡಲು ಚುನಾವಣಾ ಪ್ರಾಧಿಕಾರಕ್ಕೆ ಸಹಕಾರ ನೀಡದಿದ್ದರೆ ಕಲಂ.25(2)(ಎ) ಅನ್ವಯ ಎಲ್ಲಾ ನಿರ್ದೇಶಕರು ಐದು ವರ್ಷದ ಅವಧಿವರೆವಿಗೆ ಅನರ್ಹತೆಗೊಳಗಾಗುತ್ತದೆ ಎಂಬುದು ನ್ಯಾಯಯುತವಲ್ಲವೇ?

3. ಸೌಹಾರ್ದ ಕಾಯಿದೆ ಕಲಂ.38ರಡಿ ಮಂಡಳಿಯು ಸದಸ್ಯ ಸಹಕಾರಿಗಳು ಮಂಡಳಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಮಂಡಳಿ ರಚನೆಗೆ ಚುನಾವಣಾ ಪ್ರಾಧಿಕಾರಕ್ಕೆ ಸಹಕಾರ ನೀಡದಿದ್ದರೆ, ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸುವ ಸಂಯುಕ್ತ ಸಹಕಾರಿ ಅಧಿಕಾರ ಸಿಂಧುವಲ್ಲವೇ? ಮತ್ತು ಅದೇರೀತಿ ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿಯನ್ನು ಕಾಯಿದೆ ಕಲಂ. 53ಬಿ ಅಡಿ ನಿರ್ವಹಿಸದಿದ್ದರೆ 38ಎ ಅನ್ವಯ ಆಡಳಿತಾಧಿಕಾರ/ವಿಶೇಷಾಧಿಕಾರಿ ನೇಮಿಸುವ ಅಧಿಕಾರ ಸಿಂಧುವಲ್ಲವೇ?

4. ಸೌಹಾರ್ದ ಕಾಯಿದೆ ಕಲಂ. 54(3)ರಲ್ಲಿ ನಿಗದಿಪಡಿಸಿದ ಚುನಾಯಿತ ಮಂಡಳಿಯ ಅವಧಿ ಐದು ವರ್ಷ ಎಂಬುದು ಊರ್ಜಿತವಲ್ಲವೇ?

5. ಸೌಹಾರ್ದಕಾಯಿದೆ ಕಲಂ. 64ಎ(ಇ) ಅಡಿ ಚುನಾವಣೆ ನಡೆಸುವ ಬಗ್ಗೆ ನಿಬಂಧಕರಿಗೆ ವರದಿಯನ್ನು ಸೆಪ್ಟಂಬರ್ ಅಂತ್ಯದೊಳಗೆ ಸಲ್ಲಿಸದಿದ್ದರೆ ಕಲಂ.68(6) ರಡಿ 68(7)ರಡಿ ಶಿಕ್ಷೆ ಮತ್ತು ಅಪರಾಧಕ್ಕೆ ಗುರಿಯಾಗುವುದಿಲ್ಲವೇ?

6. ಚುನಾವಣೆ ನಡೆಸಲು ಆಗದಿದ್ದಾಗ ನಿಬಂಧಕರು ಆಡಳಿತಾಧಿಕಾರಿ ನೇಮಿಸಬಾರದೆಂಬ ರಿಟ್ ಅರ್ಜಿಯಲ್ಲಿ ಕೊರಿದಂತೆ ಪರಿಹಾರ ಪಡೆಯಲು ಅರ್ಹರೇ?

7. ಅವಧಿ ಮುಗಿದ ನಂತರವೂ ಮಂಡಳಿ ಈ ರಿಟ್ ಮೂಲಕ ಅನುಭವಿಸಿದ ಹೆಚ್ಚುವರಿ ಅವಧಿ(ಅಂದರೆ ಐದು ವರ್ಷಕ್ಕಿಂತ ಹೆಚ್ಚುವರಿ ಅವಧಿ) ಯಲ್ಲಿ ಆದ ಖರ್ಚು, ತಾತ್ವಿಕ ತೀರ್ಮಾನಗಳು ಮಂಡಳಿ ಸದಸ್ಯರು ಪಡೆದ ಸಂಭಾವನೆ, ವಾಹನವೆಚ್ಚ, ಅಧಿಕಾರಿ ವೆಚ್ಚಗಳನ್ನು ಭರಿಸುವವರಾರು ಎಂಬುದರ ಬಗ್ಗೆ ತೀರ್ಮಾನ.

ಈ ಮೇಲ್ಕಂಡ ಅಂಶಗಳ ಪರಿಹಾರ ನೀಡದೇ ರಿಟ್ ಅರ್ಜಿಗಳ ನಿರರ್ಥಕ ಎಂದು ಮುಕ್ತಾಯಗೊಳಿಸಿದರೆ ಈ ಮೇಲ್ಕಂಡ ಅಂಶಗಳ ಬಗ್ಗೆ ಬೆಳಕು ಚೆಲ್ಲುವವರಾರು. ಏಕೆಂದರೆ ಶ್ರೇಷ್ಠ ನ್ಯಾಯಾಲಯ ಕಾಯಿದೆಯಲ್ಲಿ ಐದು ವರ್ಷ ಎಂದು ನಿಗದಿಪಡಿಸಿದಾಗ ಆ ಅವದಿಗಿಂತ ಒಂದು ದಿವಸ ಹೆಚ್ಚುವರಿಯಾಗಿ ಮಂಡಳಿ ಮುಂದುವರಿಯತಕ್ಕದ್ದಲ್ಲ ಎಂದು ಎಪಿಎಂಸಿ ಕಾಯಿದೆ ಮತ್ತು ಜಿಲ್ಲಾಪಂಚಾಯತ್ ಕಾಯಿದೆಗೆ ನೀಡಿದ ತೀರ್ಪು, ಈ ಕಾಯಿದೆಗೆ ಅನ್ವಯವಾಗುವುದಿಲ್ಲವೇ? ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತರದೇ ಇದ್ದರೆ ಇಂತಹ "ನಿರರ್ಥಕ" ಎಂಬ ತೀರ್ಮಾನಕ್ಕೆ ಬರಲಾಯಿತೇ? ಇದಕ್ಕೆ ಸರ್ಕಾರದ ಅಧಿಕಾರಿಗಳು ಮತ್ತು ಹಿರಿಯ ಸರ್ಕಾರಿ ವಕೀಲರು ಉತ್ತರಿಸಬೇಕು.

# ತ್ಯಾಜ್ಯ ನಿರ್ವಹಣಾ ಸಹಕಾರ ಸಂಘ ನಿ., ಪುನಾ ಯಶೋಗಾಥೆ : ತ್ಯಾಜ್ಯ ಸಮಸ್ಯೆ ಸಮರ್ಪಕ ನಿರ್ವಹಣೆ

– ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಬದುಕಲೊಂದು ನೆಪ – ಈ ಕಾಯಕ. ಮಾದಿಗ, ಕಮ್ಮಾರ ಕುಂಬಾರ, ಒಕ್ಕಲಿಗ ಯಾರೇ ಆಗಲಿ ಅವರು ತಮ್ಮ ಕಾಯಕವನ್ನು ಮನಮೆಚ್ಚುವಂತೆ ಮಾಡಿದರೆ ಅದೇ ಸ್ವರ್ಗ! ಎಂಬುದು ಬಸವಣ್ಣನವರ ತತ್ವ. ಇದರಿಂದಲೇ 'ಕಾಯಕವೇ ಕೈಲಾಸ' ಎಂಬ ನುಡಿಯನ್ನಿತ್ತರು – ಬಸವಣ್ಣನವರು. ಅದರಂತೆ ಪುಣೆಯಲ್ಲಿ ಒಂದು ಮಹಾನ ಕಾರ್ಯವು ಒಂದು ಸಹಕಾರಿ ಸಂಘದಿಂದ ನಡೆಯುತ್ತಲಿದೆ. ಅಂತಹ ಸಹಕಾರ ಸಂಘದ ಕುರಿತು ಯಶೋಗಾಥೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದೇನೆ. **ತ್ಯಾಜ್ಯ ನಿರ್ವಹಣೆ ಸಹಕಾರ ಸಂಘ ನಿ., ಪುನಾ** ಇವರು ಮಹಾನಗರ ಪಾಲಿಕೆಯ ತ್ಯಾಜ್ಯ ನಿರ್ವಹಣೆ ಸಮಸ್ಯೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಸಹಕಾರಿ ಸಂಘ–ಸಂಸ್ಥೆಗಳು ಯಾವಾ ಕೆಲಸನವನ್ನಾದರೂ ಅಚ್ಚುಕಟ್ಟಾಗಿ ಅದ್ಬುತವಾಗಿ ನಿರ್ವಹಿಸುತ್ತಿವೆ ಎಂಬುದಕ್ಕೆ ನಿದರ್ಶನವಾಗಿದೆ ಈ ಸಹಕಾರಿ ಸಂಘ. ಸ್ವಚ್ಛ ಕಾರ್ಯಕರ್ತರು ಪುಣೆಯ ರಾಮನಗರ ಕೊಳೆಗೇರಿಯಿಂದ ಬೇರ್ಪಡಿಸಿದ ತ್ಯಾಜ್ಯವನ್ನು ಸಂಗ್ರಹಿಸುತ್ತಾರೆ. ಪ್ರಪಂಚದಾದ್ಯಂತದ ವಿವಿಧ ಸ್ಥಳಗಳಲ್ಲಿ ವಿಸ್ತೃತ ನಿರ್ವಹಣೆ ಜವಾಬ್ದಾರಿ ವ್ಯವಸ್ಥೆಗಳನ್ನು ಪರಿಶೀಲಿಸಿದಾಗ ಈ ಸರಣಿಯು ಪ್ರಪಂಚದಾದ್ಯಂತ ವಿಸ್ತೃತ ನಿರ್ವಹಣೆ ಜವಾಬ್ದಾರಿ ನೀತಿಗಳು ಮತ್ತು ವ್ಯವಸ್ಥೆಗಳ ಬೆಳೆಯುತ್ತಿರುವ ಅಳವಡಿಕೆಯು ಸಾಂಪ್ರದಾಯಿಕವಾಗಿ ಮರುಬಳಕೆ ಸುಧಾರಿಸಬಹುದು ಎಂಬುದನ್ನು ನೋಡುತ್ತದೆ. ಇದರ ಗುರಿ : ಸುಸ್ಥಿರ SWM ಮೇಲೆ ಗಮನ ಕೇಂದ್ರೀಕರಿಸುವುದರೊಂದಿಗೆ ತಮ್ಮ ಜೀವನ ಪರಿಸ್ಥಿತಿಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ತ್ಯಾಜ್ಯ ಕೀಳುವವರ ಯಶಸ್ವಿ, ಸ್ವಯಂ–ಸಮರ್ಥನೀಯ ಸಾಮಾಜಿಕ ಉದ್ಯಮವಾಗುವ ಗುರಿ ಹೊಂದಿದೆ. ಮಿಷನ್: ತ್ಯಾಜ್ಯ ಪಿಕ್ಕರ್‌ಗಳ ಉದ್ಯಮಶೀಲ ಕಾರ್ಯಪಡೆಯನ್ನು ಸಮರ್ಥ, ಸ್ಪಂದಿಸುವ ಮತ್ತು ಜವಾಬ್ದಾರಿಯುತ ಸಂಸ್ಥೆಯಾಗಿ ತೊಡಗಿಸಿಕೊಳ್ಳಲು ಮತ್ತು ಪುಣೆಯಲ್ಲಿನ SWM ಪರಿಸ್ಥಿತಿಯನ್ನು ಪರಿವರ್ತಿಸಲು ಪುರಸಭೆಯ ಖಘಾಬ ವ್ಯವಸ್ಥೆಯ ಸಹಭಾಗಿತ್ವದಲ್ಲಿ ಕೆಲಸ ಮಾಡುವುದು ದೃಷ್ಟಿ: SWaCH ಸಾಮಾಜಿಕವಾಗಿ ನ್ಯಾಯಯುತ, ಆರ್ಥಿಕವಾಗಿ ಸಮಾನತೆ, ಸಾಂಸ್ಕೃತಿಕವಾಗಿ ಬಹುವಚನ, ರಾಜಕೀಯವಾಗಿ ಪ್ರಜಾಪ್ರಭುತ್ವ, ಪರಿಸರ ಸುಸ್ಥಿರ, ಶಾಂತಿಯುತ ಮತ್ತು ಮಾನವೀಯ ಸಮಾಜವನ್ನು ಕಲ್ಪಿಸುತ್ತದೆ.

### ಸ್ವಚ್ ಇತಿಹಾಸ

1993 ರಲ್ಲಿ, ಪುಣೆ ಮತ್ತು ಪಿಂಪ್ರಿ ಚಿಂಚ್‌ವಾಡ್‌ನಲ್ಲಿ ತ್ಯಾಜ್ಯ ತೆಗೆಯುವವರು ಮತ್ತು ಸಂಚಾರಿ ತ್ಯಾಜ್ಯ ಖರೀದಿದಾರರು ಒಟ್ಟಾಗಿ ಸದಸ್ಯತ್ವ ಆಧಾರಿತ ಕಾರ್ಮಿಕ ಸಂಘವಾದ ಕಾಗಡ್ ಕಚ್ ಪಾತ್ರ ಕಷ್ಟಕಾರಿ ಪಂಚಾಯತ್ (ಕೆಕೆಪಿಕೆಪಿ) ಅನ್ನು ರಚಿಸಿದರು. ಪರಿಸರಕ್ಕೆ ತ್ಯಾಜ್ಯ ತೆಗೆಯುವವರ ಕೊಡುಗೆ, ಕಾರ್ಮಿಕರಾಗಿ ಅವರ ಸ್ಥಾನಮಾನ ಮತ್ತು ನಗರದ ಘನತ್ಯಾಜ್ಯ ನಿರ್ವಹಣೆಯಲ್ಲಿ (SWM) ಅವರ ನಿರ್ಣಾಯಕ ಪಾತ್ರವನ್ನು ಸ್ಥಾಪಿಸಲು ಮತ್ತು ಪ್ರತಿಪಾದಿಸಲು ಒಕ್ಕೂಟವು ಗುರಿಯನ್ನು ಹೊಂದಿದೆ. ಇಂದು, KKPKP 9000 ಪ್ಲಸ್ ಸದಸ್ಯರನ್ನು ಹೊಂದಿದೆ, ಅವರಲ್ಲಿ 80 ಪ್ರತಿಶತದಷ್ಟು ಮಹಿಳೆಯರು ಸಾಮಾಜಿಕವಾಗಿ ಹಿಂದುಳಿದ ಮತ್ತು ಅಂಚಿನಲ್ಲಿರುವ ಜಾತಿಗಳ ಮಹಿಳೆಯರು. ಪ್ರತಿಯೊಬ್ಬ ಸದಸ್ಯರು ಸಂಸ್ಥೆಗೆ ವಾರ್ಷಿಕ ಶುಲ್ಕವನ್ನು ಮತ್ತು ಅವರ ಜೀವ ವಿಮಾ ರಕ್ಷಣೆಗೆ ಸಮಾನ ಮೊತ್ತವನ್ನು ಪಾವತಿಸುತ್ತಾರೆ. ಸದಸ್ಯರಿಗೆ PMC ಯಿಂದ ಅನುಮೋದಿಸಲಾದ I-ಕಾರ್ಡ್‌ಗಳನ್ನು ನೀಡಲಾಗುತ್ತದೆ ಮತ್ತು ಬಡ್ಡಿ–ಮುಕ್ತ ಸಾಲಗಳು ಮತ್ತು ಅವರ ಮಕ್ಕಳಿಗೆ ಶೈಕ್ಷಣಿಕ ಬೆಂಬಲದಂತಹ ಇತರ ಪ್ರಯೋಜನಗಳನ್ನು ಪಡೆಯಬಹುದು.

KKPKP ನೀಡಿದ ಪ್ರಮುಖ ಕೊಡುಗೆಗಳಲ್ಲಿ ಒಂದಾಗಿದೆ, ಇದು ತ್ಯಾಜ್ಯವನ್ನು ತೆಗೆಯುವವರಿಗೆ ಅವರ ಹಕ್ಕುಗಳು ಮತ್ತು ಬಾಕಿಗಳನ್ನು ನೀಡಲು ಸಹಾಯ ಮಾಡಿತು, SWM (ಕೇಸ್ ಸ್ಟಡಿ) ಗೆ ತ್ಯಾಜ್ಯ ಆಯ್ದುಕೊಳ್ಳುವವರ ಕೊಡುಗೆಯ ಪ್ರಮಾಣೀಕರಣವಾಗಿದೆ. ತ್ಯಾಜ್ಯ ತೆಗೆಯುವವರು ನಡೆಸಿದ ಪುನಶ್ಚೇತನ ಕಾರ್ಯಾಚರಣೆಗಳು ವಾಸ್ತವವಾಗಿ ಪುಣೆ ಮತ್ತು ಪಿಂಪ್ರಿ ಚಿಂಚ್‌ವಾಡ್ ಮುನ್ಸಿಪಲ್ ಕಾರ್ಪೊರೇಷನ್‌ಗಳಿಗೆ ತ್ಯಾಜ್ಯ ನಿರ್ವಹಣೆ ವೆಚ್ಚದಲ್ಲಿ ಹಲವಾರು ಕೋಟಿ ರೂಪಾಯಿಗಳನ್ನು ಉಳಿಸಿವೆ ಎಂದು ಈ ಅಧ್ಯಯನವು ಸ್ಪಷ್ಟವಾಗಿ ದೃಢಪಡಿಸಿತು.

ಕೆಕೆಪಿಕೆಪಿಯು ತ್ಯಾಜ್ಯ ತೆಗೆಯುವವರಿಗೆ ಉತ್ತಮ ಕೆಲಸದ ಪರಿಸ್ಥಿತಿಗಳಿಗಾಗಿ ಮತ್ತು ಸರ್ಕಾರಕ್ಕೆ ಪ್ರಾತಿನಿಧ್ಯಗಳ ಮೂಲಕ ತ್ಯಾಜ್ಯ ತೆಗೆಯುವವರ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಿತು. ಬಹುಮುಖ್ಯವಾಗಿ, KKPKP ತ್ಯಾಜ್ಯ ಸಂಗ್ರಹಣೆ/ವಿಲೇವಾರಿ ವ್ಯವಸ್ಥೆಯಲ್ಲಿ ತ್ಯಾಜ್ಯ ಸಂಗ್ರಹಕಾರರನ್ನು ಏಕೀಕರಣಗೊಳಿಸಲು, ತ್ಯಾಜ್ಯ ಉತ್ಪಾದನೆಯ ಹಂತದಲ್ಲಿಯೇ – ಅಂದರೆ, ಮನೆಗಳು, ಕಚೇರಿಗಳು ಅಥವಾ ವ್ಯಾಪಾರಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಕ್ಕೆ ಪ್ರವೇಶವನ್ನು ನೀಡುತ್ತದೆ. ಈ ಎಲ್ಲಾ ಬೇಡಿಕೆಗಳು ವಿವಿಧ ಸರ್ಕಾರಿ ವರದಿಗಳು ಮತ್ತು ದಾಖಲಾತಿಗಳ ಭಾಗವಾಗಿದೆ.

**ಸ್ವಚ್ ರಚನೆ :** 2000 ರಲ್ಲಿ, ಹೊಸ MSW ಕಾನೂನುಗಳು ಮತ್ತು ನಿಯಮಗಳನ್ನು ಅಂಗೀಕರಿಸಲಾಯಿತು, ಇದು ತ್ಯಾಜ್ಯವನ್ನು ಪ್ರತ್ಯೇಕಿಸುವುದು, ಮನೆಯಿಂದ ಮನೆಗೆ ತ್ಯಾಜ್ಯ ಸಂಗ್ರಹಣೆ ಮತ್ತು ತ್ಯಾಜ್ಯವನ್ನು ಸುರಿಯುವ ಬದಲು ಸಂಸ್ಕರಣೆ ಮಾಡುವ ಅಗತ್ಯವಿದೆ. (MSW_rules_2000).

ರಸ್ತೆಯಲ್ಲಿರುವ ಕಂಟೈನರ್‌ಗಳನ್ನು ಕಡಿಮೆ ಮಾಡುವ ಮತ್ತು ನಗರವನ್ನು 'ಕಂಟೇನರ್-ಮುಕ್ತ'ವನ್ನಾಗಿ ಮಾಡುವ ಕಡೆಗೆ ತಳ್ಳುವಿಕೆಯೂ ಇತ್ತು, ಮೇಲ್ನೋಟಕ್ಕೆ ಹೆಚ್ಚು ನೈರ್ಮಲ್ಯ ಪರಿಸ್ಥಿತಿಗಳು ಮತ್ತು ಸ್ವಚ್ಛತೆಯ ಹೆಸರಿನಲ್ಲಿ.

ತ್ಯಾಜ್ಯ ಕೀಳುವವರ ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸಲು KKPKP ಈ ಅವಕಾಶವನ್ನು ಬಳಸಿಕೊಂಡಿತು. 2005 ರಲ್ಲಿ, KKPKP PMC ಸಹಯೋಗದೊಂದಿಗೆ ಪ್ರಾಯೋಗಿಕ ಕಾರ್ಯಕ್ರಮವನ್ನು ಪ್ರಾರಂಭಿಸಿತು, ಅಲ್ಲಿ ತ್ಯಾಜ್ಯ ಪಿಕ್ಕರ್ಗಳನ್ನು ಮನೆ-ಮನೆಗೆ ತ್ಯಾಜ್ಯ ಸಂಗ್ರಹಣೆ (DTDC) ಕೆಲಸದಲ್ಲಿ ಸಂಯೋಜಿಸಲಾಯಿತು. ಇದು ಔಪಚಾರಿಕ ಸಂಸ್ಥೆಯಾದ ಖಿಘಚಿಅಊ, ಬಡವರ ಪರವಾದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಂಪೂರ್ಣ ಸ್ವಾಮ್ಯದ ಕಾರ್ಮಿಕರ ಸಹಕಾರಿ ಅಂತಹ ಕೆಲಸವನ್ನು ಕೈಗೊಳ್ಳಲು ದಾರಿ ಮಾಡಿಕೊಟ್ಟಿತು. SWaCH DTDC ಮಾದರಿಯು ಸೇವಾ ಬಳಕೆದಾರರಿಂದ ಬಳಕೆದಾರರ ಶುಲ್ಕವನ್ನು ಮರುಪಡೆಯುವಿಕೆ ಮತ್ತು ಪುರಸಭೆಯಿಂದ ಮೂಲಸೌಕರ್ಯ ಮತ್ತು ನಿರ್ವಹಣೆಯ ಬೆಂಬಲವನ್ನು ಒದಗಿಸುವುದರ ಮೇಲೆ ಆಧಾರಿತವಾಗಿದೆ, ಇದು ಸಹ ಸಕ್ರಿಯಗೊಳಿಸುವ ಪಾತ್ರವನ್ನು ವಹಿಸುತ್ತದೆ.

**SWaCH ಕಾರ್ಯಾರಂಭ :** SNDT ಮಹಿಳಾ ವಿಶ್ವವಿದ್ಯಾನಿಲಯದ ವಯಸ್ಕರ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಪ್ರಾಯೋಗಿಕ ಯೋಜನೆಯು 2006/2008 ರಲ್ಲಿ ಕಾರ್ಯನಿರ್ವಹಿಸಿತು ಮತ್ತು 1,25,000 ರಿಂದ ಮನೆಯಿಂದ ಮನೆಗೆ ತ್ಯಾಜ್ಯವನ್ನು ಸಂಗ್ರಹಿಸಲು 1500 ತ್ಯಾಜ್ಯ ಪಿಕ್ಕರ್‌ಗಳನ್ನು ಸೇವಾ ಪೂರೈಕೆದಾರರನ್ನಾಗಿ ಮಾಡಲು ಅನುವು ಮಾಡಿಕೊಟ್ಟಿತು. ಪುಣೆ ನಗರದಲ್ಲಿ ಮನೆಗಳು.

ಇದು ಅವರ ಕೆಲಸದ ಪರಿಸ್ಥಿತಿಗಳನ್ನು ಗಣನೀಯವಾಗಿ ಸುಧಾರಿಸಿತು ಮತ್ತು ಅವರ ಜೀವನೋಪಾಯವನ್ನು ಸುಧಾರಿಸಿತು, ಮನೆಗಳು ಮತ್ತು ಪುರಸಭೆಯ ತ್ಯಾಜ್ಯ ಸಂಗ್ರಹ ಸೇವೆಯ ನಡುವಿನ ಅಂತರವನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡುತ್ತದೆ. ಉಪಕ್ರಮವು ಎರಡು ಹಿತಾಸಕ್ತಿಗಳನ್ನು ಒಟ್ಟುಗೂಡಿಸಿತು – ತಮ್ಮ ಜೀವನೋಪಾಯವನ್ನು ನವೀಕರಿಸಲು ತ್ಯಾಜ್ಯವನ್ನು ಆರಿಸುವವರ ಆಸಕ್ತಿ ಮತ್ತು ಸಮರ್ಥನೀಯ ಖಘಒ ನಲ್ಲಿ ಪುರಸಭೆಯ ಆಸಕ್ತಿವಹಿಸಿದೆ. 2008 ರಲ್ಲಿ, ಈ ಉದ್ದೇಶಕ್ಕಾಗಿ ನಿರ್ದಿಷ್ಟವಾಗಿ ನೋಂದಾಯಿಸಲಾದ SWaCH ನ ಆಶ್ರಯದಲ್ಲಿ ಮನೆ ಬಾಗಿಲಿನ ಸಂಗ್ರಹ ಕಾರ್ಯವನ್ನು ಸಾಂಸ್ಥಿಕಗೊಳಿಸಲಾಯಿತು. ಕಾಲಾನಂತರದಲ್ಲಿ, SWaCH ವೈವಿಧ್ಯಗೊಳಿಸಿತು ಮತ್ತು ಅದರ ಸೇವೆಯ ವಿತರಣೆಯನ್ನು ಮತ್ತೊಂದು ನಗರಕ್ಕೆ ವಿಸ್ತರಿಸಿತು.

**SWaCH-PMC ಪಾಲುದಾರಿಕೆ :**

2005 ರಲ್ಲಿ, ಕಾಗಡ್ ಕಚ್ ಪತ್ರ ಕಷ್ಟಕಾರಿ ಪಂಚಾಯತ್ ಎಸ್‌ಎನ್‌ಡಿಟಿಯ ವಯಸ್ಕರ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ 1,500 ತ್ಯಾಜ್ಯ-ಪಿಕ್ಕರ್‌ಗಳನ್ನು ಮನೆಯಿಂದ ಮನೆಗೆ ತ್ಯಾಜ್ಯವನ್ನು ಸಂಗ್ರಹಿಸಲು (ಡಿಟಿಡಿಸಿ) ಸೇವಾ ಪೂರೈಕೆದಾರರಾಗಿ ಕೌಶಲ್ಯವನ್ನು ಹೆಚ್ಚಿಸಲು ಪ್ರಾಯೋಗಿಕ ಕಾರ್ಯಕ್ರಮವನ್ನು ಜಾರಿಗೊಳಿಸಿತು. ಈ ಪೈಲಟ್ ಜೀವನೋಪಾಯ ಮತ್ತು ಕೆಲಸದ ಪರಿಸ್ಥಿತಿಗಳನ್ನು ಸುಧಾರಿಸುವುದಲ್ಲದೆ, ಇದು ಮನೆಗಳು ಮತ್ತು ಪುರಸಭೆಯ ತ್ಯಾಜ್ಯ-ಸಂಗ್ರಹಣೆ ಸೇವೆಯ ನಡುವಿನ ಅಂತರವನ್ನು ಕಡಿಮೆ ಮಾಡಿದೆ. ಈ ಕಾರ್ಯಕ್ರಮದಿಂದಲೇ 2007 ರಲ್ಲಿ ಸ್ವಚ್ ಪುಣೆ ಸೇವಾ ಸಹಕಾರಿ ಸಂಸ್ಥೆಯನ್ನು ರಚಿಸಲಾಯಿತು.

2008 ರಲ್ಲಿ, PMC DTDC ಸೇವೆಗಳನ್ನು ವಿಕೇಂದ್ರೀಕರಿಸಲು ಖಘಚಿಅಊ ನೊಂದಿಗೆ ಐದು ವರ್ಷಗಳ ಒಪ್ಪಂದವನ್ನು ಮಾಡಿಕೊಂಡಿತು, ಇದರಲ್ಲಿ ಸಹಕಾರಿ ಸದಸ್ಯರು 2000 ಮನೆಗಳಿಂದ ಬೇರ್ಪಡಿಸಿದ ತ್ಯಾಜ್ಯವನ್ನು ಸಂಗ್ರಹಿಸುತ್ತಾರೆ. ಮರುಬಳಕೆ ಮಾಡಲಾಗದ ಕಸವನ್ನು ಮತ್ತಷ್ಟು ಮಾರಾಟಕ್ಕೆ ಪ್ರತ್ಯೇಕಿಸಲಾಗುತ್ತದೆ, ಆದರೆ ಆರ್ದ್ರ/ಸಾವಯವ ಮತ್ತು ಮರುಬಳಕೆ ಮಾಡಲಾಗದ ತ್ಯಾಜ್ಯವನ್ನು PMC ಫೀಡರ್ ಪಾಯಿಂಟ್‌ಗಳಲ್ಲಿ ಬಿಡಲಾಗುತ್ತದೆ, ಅಲ್ಲಿಂದ ಅದನ್ನು ಪುರಸಭೆಯ ಕಸದ ಟ್ರಕ್‌ಗಳಿಂದ ಸಂಗ್ರಹಿಸಿ ಭೂಕುಸಿತಕ್ಕೆ ಕಳುಹಿಸಲಾಗುತ್ತದೆ.

ಇದು ಪಿಎಂಸಿಗೆ ರೂ. ತ್ಯಾಜ್ಯ ನಿರ್ವಹಣೆ ವೆಚ್ಚದಲ್ಲಿಯೇ ವಾರ್ಷಿಕ 20 ಕೋಟಿ ರೂ. SWaCH ತ್ಯಾಜ್ಯ-ಪಿಕ್ಕರ್‌ಗಳು ಮರುಬಳಕೆ ಮಾಡುವುದರಿಂದ ಮತ್ತು ಭೂಕುಸಿತಗಳಿಗೆ ಕಳುಹಿಸಲಾದ ತ್ಯಾಜ್ಯದ ಪ್ರಮಾಣವನ್ನು ಕಡಿಮೆ ಮಾಡುವುದರಿಂದ ಮಾದರಿಯು ಶಕ್ತಿ-ಸಮರ್ಥ ಮತ್ತು ಪರಿಸರಕ್ಕೆ ಪ್ರಯೋಜನಕಾರಿಯಾಗಿದೆ. ಇದು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾದ ಇಂಗಾಲ ಮತ್ತು ಇತರ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ. SWaCH ದಿನಕ್ಕೆ 850 ಟನ್ ಪುರಸಭೆಯ ಘನ ತ್ಯಾಜ್ಯವನ್ನು (MSW) ಸಂಗ್ರಹಿಸುತ್ತದೆ, ಅದರಲ್ಲಿ ~ 150 ಟನ್‌ಗಳನ್ನು ಮರುಬಳಕೆ ಮಾಡಲಾಗುತ್ತದೆ ಮತ್ತು ~ 130 ಟನ್‌ಗಳನ್ನು ಮಿಶ್ರಗೊಬ್ಬರ ಮಾಡಲಾಗುತ್ತದೆ.

**ಸ್ವಚ್ಛ ಭಾರತದ ಹೀರೋಸ್:**

ಭಾರತದ ಕಸದ ಬಿಕ್ಕಟ್ಟಿನ ವಿರುದ್ಧ ಹೋರಾಡುವುದು: ಸ್ವಚ್ಛ -ಘನತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆಯ ಒಂದು ಭಾಗವಾಗಿದೆ, ಇದು ಭಾರತದ ಅತಿದೊಡ್ಡ ಸಹಕಾರಿ, ಸಂಪೂರ್ಣವಾಗಿ ತ್ಯಾಜ್ಯ ಕಾರ್ಮಿಕರ ಒಡೆತನದಲ್ಲಿದೆ. 2005 ರವರೆಗೆ ಅನೌಪಚಾರಿಕವಾಗಿ ಮಾಡುತ್ತಿದ್ದ ಅದೇ ಕೆಲಸಕ್ಕಾಗಿ ತ್ಯಾಜ್ಯ ತೆಗೆಯುವವರು ಈಗ PMC ಯಿಂದ ಗುರುತಿಸಲ್ಪಟ್ಟಿದ್ದಾರೆ ಮತ್ತು ಮೆಚ್ಚುಗೆ ಪಡೆದಿದ್ದಾರೆ. ಸ್ವಚ್ ಪುಣೆ, ತ್ಯಾಜ್ಯ ಪಿಕ್ಕರ್‌ಗಳ ಸಹಕಾರಿ ಸಂಸ್ಥೆಯು ಮೂಲದಲ್ಲಿ ತ್ಯಾಜ್ಯ ವಿಂಗಡಣೆಯನ್ನು ಉತ್ತೇಜಿಸುವ ಮೂಲಕ ದಿನಕ್ಕೆ 1000 ಟನ್‌ಗಳಷ್ಟು ತ್ಯಾಜ್ಯವನ್ನು ಲ್ಯಾಂಡ್‌ಫಿಲ್‌ಗಳಿಗೆ ಪ್ರವೇಶಿಸದಂತೆ ಇಡುತ್ತಿದೆ

**ಇ-ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ :**

2012 ರಲ್ಲಿ, ಮಹಾರಾಷ್ಟ್ರ ಮಾಲಿನ್ಯ ನಿಯಂತ್ರಣ ಮಂಡಳಿಯು

ಇ–ತ್ಯಾಜ್ಯ (ನಿರ್ವಹಣೆ) ನಿಯಮಗಳು, 2012 ರ ಪ್ರಕಾರ ಇ–ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ಚಾನಲ್ ಮಾಡಲು SWaCH ಗೆ ಅಧಿಕಾರ ನೀಡಿತು. ಸರಿಯಾಗಿ ವಿಲೇವಾರಿ ಮಾಡಿದರೆ, ಬಳಸಿದ ಕಂಪ್ಯೂಟರ್‌ಗಳು, ಸೆಲ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಇತರ ತ್ಯಾಜ್ಯ ಎಲೆಕ್ಟ್ರಾನಿಕ್ಸ್ ಎರಡಕ್ಕೂ ಗಂಭೀರ ಅಪಾಯವನ್ನುಂಟುಮಾಡುತ್ತದೆ. ಮಾನವರು ಮತ್ತು ನೈಸರ್ಗಿಕ ಪರಿಸರ. ಆದ್ದರಿಂದ ಸ್ವಚ್ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳು, ಶಾಲೆಗಳು ಮತ್ತು ಕಾಲೇಜುಗಳು ಮತ್ತು ವಸತಿ ಸಂಘಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಇ–ತ್ಯಾಜ್ಯ ಸಂಗ್ರಹದ ತೊಟ್ಟಿಗಳನ್ನು ಸ್ಥಾಪಿಸಿದೆ. ನಾಗರಿಕರು ತಮ್ಮ ಇ–ತ್ಯಾಜ್ಯವನ್ನು ಕೊತ್ರುಡ್ ಕಚ್ರಾ ಡಿಪೋದಲ್ಲಿರುವ ಸ್ವಚ್ ಕಚೇರಿ ಅಥವಾ ಧನಕವಾಡಿಯ ಲೋಕನೆಟ್ ಶರದ್ಚಂದ್ರ ಪವಾರ್ ವಿವಿಧೋದ್ದೇಶ ಸಂಕೀರ್ಣದಲ್ಲಿ ಬಿಡಬಹುದು ಅಥವಾ ಮನೆಯಿಂದ ನೇರವಾಗಿ ಸಂಗ್ರಹಿಸಲು ಆಯ್ಕೆ ಮಾಡಬಹುದು.

### ಸ್ವಚ್ ಮತ್ತು ಪಿಸಿಎಂಸಿ

2009–2010ರಲ್ಲಿ ಪಿಂಪ್ರಿ ಚಿಂಚ್‌ವಾಡ್ ಮುನ್ಸಿಪಲ್ ಕಾರ್ಪೊರೇಷನ್ (PCMC) KKPKP ಅನ್ನು ಸಂಪರ್ಕಿಸಿತು ಮತ್ತು SWaCH ಅನ್ನು ತನ್ನ ಮಿತಿಯಲ್ಲಿ ಮನೆ–ಮನೆಗೆ ತ್ಯಾಜ್ಯ ಸಂಗ್ರಹಣೆಯನ್ನು (DTDC) ಕೈಗೊಳ್ಳಲು ಕೇಳಿಕೊಂಡಿತು. ಪಿಸಿಎಂಸಿಯು ವಾರ್ಷಿಕವಾಗಿ–ಕಡಿಮೆಗೊಳಿಸುವ ಕಾರ್ಯಸಾಧ್ಯತೆಯ ಅಂತರ ನಿಧಿಯನ್ನು ಒದಗಿಸಲು ಒಪ್ಪಿಕೊಂಡಿತು, ಎ ಮತ್ತು ಡಿ ವಾರ್ಡ್‌ಗಳಿಗೆ ಒಳಗೊಳ್ಳುವ ಮನೆಗಳ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ, ಬಳಕೆದಾರರ ಶುಲ್ಕ ಪಾವತಿಯನ್ನು ನಗರದ ನಿವಾಸಿಗಳು ಸ್ವೀಕರಿಸುವವರೆಗೆ. ಇದರ ನಂತರ, ಪಿಂಪ್ರಿ ಚಿಂಚ್‌ವಾಡ್‌ನ ಉಳಿದ ಭಾಗಗಳಿಗೆ ಸೇವೆಯನ್ನು ವಿಸ್ತರಿಸಲಾಗುವುದು.

ಒಪ್ಪಂದದ ಪ್ರಕಾರ (SWaCH PCMC MoU), SWaCH ಪ್ರಾಥಮಿಕ ಸಂಗ್ರಹಣೆಯನ್ನು (ಮನೆಯಿಂದ ಮನೆಗೆ) ಕೈಗೊಳ್ಳುವುದು ಮತ್ತು ತ್ಯಾಜ್ಯವನ್ನು ದ್ವಿತೀಯ ಸಂಗ್ರಹಣಾ ವ್ಯವಸ್ಥೆಗೆ ವರ್ಗಾಯಿಸುವುದು. ತ್ಯಾಜ್ಯ ಆಯ್ದುಕೊಳ್ಳುವವರು ಮರುಬಳಕೆ ಮಾಡಬಹುದಾದ ವಸ್ತುಗಳ ಮರುಪಡೆಯುವಿಕೆ ಮತ್ತು ಮಾರಾಟದಿಂದ ಗಳಿಸಿದ ಆದಾಯದ ಹಕ್ಕನ್ನು ಉಳಿಸಿಕೊಳ್ಳುತ್ತಾರೆ. ಈ ಯೋಜನೆಯನ್ನು ಪ್ರಾರಂಭಿಸಲಾಯಿತು ಮತ್ತು ನಾಗರಿಕರು, ತ್ಯಾಜ್ಯ ತೆಗೆಯುವವರು ಮತ್ತು ಪಿಸಿಎಂಸಿಯ ತೃಪ್ತಿಗಾಗಿ ಕಾರ್ಯನಿರ್ವಹಿಸುತ್ತಿದೆ. SWaCH ತಮ್ಮ ಸದಸ್ಯರನ್ನು ಗುತ್ತಿಗೆ ಪಡೆದ ಪಕ್ಷಗಳಿಂದ ನೇಮಿಸಿಕೊಳ್ಳಲು ಮತ್ತು ಅನ್ವಯವಾಗುವ ಕನಿಷ್ಠ ವೇತನ ಮತ್ತು ಶಾಸನಬದ್ಧ ಪ್ರಯೋಜನಗಳನ್ನು ಪಾವತಿಸಲು ಯಶಸ್ವಿಯಾಗಿ ಪ್ರಚಾರ ಮಾಡಿದೆ.

### ಇವರ ಕಾರ್ಯವೈಖರಿ

ಪುಣೆಯ ಕೆಲವು ಭಾಗಗಳಲ್ಲಿ, ಪ್ರತಿ ಮನೆಯವರು ತ್ಯಾಜ್ಯವನ್ನು ಮೂರು ಪ್ರಾಥಮಿಕ ವರ್ಗಗಳಾಗಿ ವಿಂಗಡಿಸುತ್ತಾರೆ – ತೇವ, ಒಣ ಮತ್ತು ನೈರ್ಮಲ್ಯ ತ್ಯಾಜ್ಯ, ಇದರಲ್ಲಿ ಪ್ಯಾಡ್‌ಗಳು, ಡೈಪರ್‌ಗಳು ಮತ್ತು ಕಾಂಡೋಮ್‌ಗಳು ಸೇರಿವೆ. ಇದರೊಂದಿಗೆ, ಥರ್ಮಾಕೋಲ್ ತ್ಯಾಜ್ಯವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತದೆ ಏಕೆಂದರೆ ಅದು ಪ್ರಕೃತಿಯಲ್ಲಿ ದೊಡ್ಡದಾಗಿದೆ.

ಪುಣೆ ನಗರದ ಈ ಸಹಕಾರ ಸಂಘದವರು ಪ್ರತಿದಿನ ಬೆಳಗ್ಗೆ 7:15ಕ್ಕೆ ತನ್ನ ಮನೆಯಿಂದ ಕೆಲಸದ ನಿಮಿತ್ತ ಹೊರಡುತ್ತಾರೆ. ಅವರು ಹಾಜರಾತಿಯನ್ನು ಗುರುತಿಸಲು ಅಸೆಂಬ್ಲಿ ಪಾಯಿಂಟ್‌ಗೆ ಹೋಗುತ್ತಾರೆ. ತ್ವರಿತ 15 ನಿಮಿಷಗಳ ರೋಲ್ ಕಾಲ್ ಮತ್ತು ಸಾಮಾನ್ಯ ಕ್ಯಾಚಿಂಗ್ ನಂತರ, ಎಲ್ಲಾ ಸಹೋದ್ಯೋಗಿಗಳು ಮುನ್ಸಿಪಲ್ ಘನತ್ಯಾಜ್ಯವನ್ನು (MSW) ಮನೆ–ಮನೆಗೆ ಸಂಗ್ರಹಿಸಲು ಚದುರಿಹೋಗುತ್ತಾರೆ. ಬೆಳಿಗ್ಗೆ 10:30–11 ರ ಹೊತ್ತಿಗೆ, ಅವರು ತಮ್ಮ ಸುತ್ತಮುತ್ತಲಿನ ಸುಮಾರು 300 ಮನೆಗಳಿಂದ ಕಸವನ್ನು ಸಂಗ್ರಹಿಸುತ್ತಾರೆ. ತದನಂತರ ಸಂಗ್ರಹಿಸಿದ ತ್ಯಾಜ್ಯವನ್ನು ಬೇರ್ಪಡಿಸುವ ಮತ್ತು ವಿಂಗಡಿಸುವ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ; ಅವರು ತಮ್ಮ ಕೆಲಸದ ಪಾಳಿಯನ್ನು ಮಧ್ಯಾಹ್ನ 2:30–3 ಗಂಟೆಗೆ ಮುಗಿಸುತ್ತಾರೆ.

ಒಣ ತ್ಯಾಜ್ಯವನ್ನು ಪ್ಲಾಸ್ಟಿಕ್ ಬಾಟಲಿಗಳು, ಕಂಟೈನರ್‌ಗಳು, ಆಹಾರ ಪೆಟ್ಟಿಗೆಗಳು, ಪ್ಲಾಸ್ಟಿಕ್ ಚೀಲಗಳು ಮತ್ತು ಬಹುಪದರದ ಪ್ಲಾಸ್ಟಿಕ್‌ನಂತಹ ವರ್ಗಗಳಾಗಿ ವಿಂಗಡಿಸಲಾಗಿದೆ. ಇವರು ಬೆಲೆಬಾಳುವ ತ್ಯಾಜ್ಯವನ್ನು ಹಿಂಪಡೆಯುತ್ತಾರೆ ಮತ್ತು ಜೀವನೋಪಾಯಕ್ಕಾಗಿ ಮರುಬಳಕೆ ಮಾಡುವವರಿಗೆ ಮಾರಾಟ ಮಾಡುತ್ತಾರೆ. ಮರುಬಳಕೆ ಮಾಡಲಾಗದ ಒಣ ತ್ಯಾಜ್ಯ ಅಥವಾ ಶಾಂಪೂ ಸ್ಯಾಚೆಟ್‌ಗಳಂತಹ ವಸ್ತುಗಳನ್ನು ಮಾರಾಟ ಮಾಡಲಾಗುವುದಿಲ್ಲ, ಅವುಗಳನ್ನು ಪುಣೆ ಮುನ್ಸಿಪಲ್ ಕಾರ್ಪೊರೇಷನ್ (PMC) 'ಫೀಡರ್ ಪಾಯಿಂಟ್'ಗಳಲ್ಲಿ ಬಿಡಲಾಗುತ್ತದೆ. ಅದೇ ರೀತಿ, ಹೌಸಿಂಗ್ ಸೊಸೈಟಿಗಳು ತಮ್ಮ ಒದ್ದೆಯಾದ ತ್ಯಾಜ್ಯವನ್ನು ಗೊಬ್ಬರ ಮಾಡಲು ಸಹಾಯ ಮಾಡುತ್ತಾರೆ, ಅವುಗಳು ಮಿಶ್ರಗೊಬ್ಬರ ಸೌಲಭ್ಯವನ್ನು ಹೊಂದಿವೆ. ಉಳಿದ ತೇವ ತ್ಯಾಜ್ಯವನ್ನು ಸ್ಯಾನಿಟರಿ ತ್ಯಾಜ್ಯದೊಂದಿಗೆ ಮತ್ತೆ ಪಿಎಂಸಿಗೆ ನೀಡಲಾಗುತ್ತದೆ.

ಘನತ್ಯಾಜ್ಯ ನಿರ್ವಹಣೆ (SWM) ನಿಯಮಗಳು, 2016 ರ ಆದೇಶದ ಮೂಲ ಪ್ರತ್ಯೇಕತೆ ಮತ್ತು ತ್ಯಾಜ್ಯ ಪಿಕ್ಕರ್‌ಗಳ ಸೇರ್ಪಡೆ ಆದರೆ ದೆಹಲಿಯು ಹಾಗೆ ಮಾಡಲು ಸಾಧ್ಯವಾಗಲಿಲ್ಲ. ರಾಷ್ಟ್ರ ರಾಜಧಾನಿಯಲ್ಲಿ, ಜನರು ಮನೆ–ಮನೆಗೆ ತ್ಯಾಜ್ಯ ಸಂಗ್ರಹಣೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಆದರೆ ಅವರಿಗೆ ನೇರವಾಗಿ ಪಾವತಿಸಲಾಗುವುದಿಲ್ಲ. ಮರುಬಳಕೆ ಮಾಡಬಹುದಾದ ವಸ್ತುಗಳನ್ನು ಮಾರಾಟ ಮಾಡಿ ಜೀವನ ಸಾಗಿಸಬೇಕು.

ದೇಶದಲ್ಲಿ ಎಲ್ಲೆಡೆ ಘನತ್ಯಾಜ್ಯ ನಿರ್ವಹಣೆಯು ಒಂದು ಸಂಕೀರ್ಣ ಸಮಸ್ಯೆಯಾಗಿದೆ ಮತ್ತು ಎಲ್ಲಾ ಪಾಲುದಾರರ ನಡುವೆ ಸಮನ್ವಯದ ಅಗತ್ಯವಿದೆ. ನಗರಗಳು ಸಾರ್ವಕಾಲಿಕ ಕಸವನ್ನು ಉತ್ಪಾದಿಸುತ್ತವೆ ಮತ್ತು

31ನೇ ಪುಟಕ್ಕೆ.....

# ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳು ಹಾಗೂ ಮುಂದಿನ ದಾರಿ (ಭಾಗ - 01)

– ಮೂಲ : ಆರ್. ಮುರಳೀಧರನ್, ಪುದುಚೇರಿ ನಾಗರೀಕ ಸೇವೆ (ನಿವೃತ್ತ), ನಿರ್ದೇಶಕರು, ಕ್ಯಾಟಲಿಸ್ಟ್ (ತರಬೇತಿದಾರರು)
– ಅನುವಾದ : ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**ಹಿಂದಿನ ಸಂಚಿಕೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳ ಹೆಸರುಗಳನ್ನು ತಿಳಿಸಿದ್ದು, ಈ ಸಮಿತಿ ಹಾಗೂ ಆಯೋಗಗಳ ಸಾರಾಂಶಗಳು ಈ ಲೇಖನದಲ್ಲಿ ಮುಂದುವರೆದಿದ್ದು, ಆ ಸಮಯದಲ್ಲಿನ ಶಿಫಾರಸ್ಸುಗಳ ಪಕ್ಷಿನೋಟವನ್ನು ಸಂಕ್ಷಿಪ್ತಗೊಳಿಸಲಾಗಿದ್ದು, ಓದುಗರಿಗೆ ಇದೊಂದು ಅದ್ಭುತ ಪಯಣವಾಗಿದೆ.**

### • ಫ್ರೆಡ್ರಿಕ್ ನಿಕೋಲ್ಸನ್ ಅವರ ವರದಿ (1897)

1892ರಲ್ಲಿ, ಮದ್ರಾಸಿನ ಗವರ್ನರ್ ಲಾರ್ಡ್ ವೆನ್ಲಾಕ್, ಕೃಷಿಕರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಮತ್ತು ವರದಿಯನ್ನು ಸಲ್ಲಿಸಲು ಮದ್ರಾಸ್‌ನ ಅಂದಿನ ಕಲೆಕ್ಟರ್ ಫ್ರೆಡ್ರಿಕ್ ನಿಕೋಲ್ಸನ್, ಐಸಿಎಸ್ ಇವರಿಗೆ ನಿರ್ದೇಶನ ನೀಡಿದರು. ನಿಕೋಲ್ಸನ್ ತನ್ನ ವರದಿಯನ್ನು 'ಫೈಂಡ್ ರೈಫಿಸೆನ್' ಎಂಬ ಎರಡು ಪದಗಳೊಂದಿಗೆ ಸಂಕ್ಷಿಪ್ತಗೊಳಿಸಿದರು. ಎಫ್‌ಡಬ್ಲ್ಯೂ ರೈಫಿಸೆನ್ (1818–1888), ಜರ್ಮನಿಯ ವೇಯರ್ ಬುಷ್‌ನ ಮೇಯರ್ 1862ರಲ್ಲಿ ಜರ್ಮನಿಯಲ್ಲಿ ಮೊದಲ ಅಗ್ರಿಕಲ್ಚರಲ್ ಕ್ರೆಡಿಟ್ ಬ್ಯಾಂಕ್ ಆಫ್ ದಿ ವರ್ಲ್ಡ್ ಅನ್ನು ಸ್ಥಾಪಿಸಿದರು. 'ಫೈಂಡ್ ರೈಫೆಸಿಸೆನ್' ಪದಗಳ ಮೂಲಕ ನಿಕೋಲ್ಸನ್ ಜರ್ಮನ್ ಮಾದರಿಯ ಕೃಷಿ ಪತ್ತಿನ ಬ್ಯಾಂಕ್‌ಗಳ ರಚನೆಗೆ ಸಲಹೆಯನ್ನು ನೀಡಿದರು. ಪ್ರಾಯೋಗಿಕವಾಗಿ ಅಂತಹ ಕೆಲವು ಬ್ಯಾಂಕುಗಳನ್ನು ಸ್ಥಾಪಿಸಲು ಮದ್ರಾಸ್ ಸರ್ಕಾರವು ಅವರನ್ನು ಕೇಳಿಕೊಂಡಿತು. ಇದರ ಫಲಿತಾಂಶವು ಉತ್ತೇಜನಕಾರಿಯಾಗಿದೆ. 1901ರಲ್ಲಿ, ಅಂದಿನ ಭಾರತ ಸರ್ಕಾರವು ಅಂತಹ ಬ್ಯಾಂಕುಗಳ ಬಗ್ಗೆ ಅಭಿಪ್ರಾಯಗಳನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿತು. ಜುಲೈ 1901ರಲ್ಲಿ, ಸಮಿತಿಯು ಸಹಕಾರಿ ಪತ್ತಿನ ಸಂಘಗಳನ್ನು ಸ್ಥಾಪಿಸುವ ತೀರ್ಮಾನಕ್ಕೆ ಬಂದಿತು. ಕರಡು ಮಸೂದೆಯನ್ನು ಆಂಗ್ಲ ಸ್ನೇಹಿ ಸೊಸೈಟಿಗಳು (English Friendly Societies) ಮತ್ತು ಇಂಡಸ್ಟ್ರಿಯಲ್ ಹಾಗೂ ಪ್ರಾವಿಡೆಂಟ್ ಸೊಸೈಟಿಗಳ ಕಾಯ್ದೆಯ ಮಾದರಿಯಲ್ಲಿ ಸಿದ್ಧಪಡಿಸಲಾಯಿತು. ಅಂತಿಮವಾಗಿ, ಈ ಬಿಲ್ ಅನ್ನು ಸಹಕಾರಿ ಕ್ರೆಡಿಟ್ ಸೊಸೈಟೀಸ್ ಆಕ್ಟ್ 1904 ಆಗಿ 1904ರ ಮಾರ್ಚ್ 25ರಂದು ಅಂಗೀಕರಿಸಲಾಯಿತು. ಈ ಕಾಯಿದೆಯಡಿಯಲ್ಲಿ ಮದ್ರಾಸ್‌ನ ಟ್ರಿಪ್ಲಿಕನ್ ಅರ್ಬನ್ ಕೋಆಪರೇಟಿವ್ ಸೊಸೈಟಿಯನ್ನು ಮೊದಲು ನೋಂದಾಯಿಸಲಾಯಿತು.

### • ಮ್ಯಾಕ್ಲಗನ್ ಸಮಿತಿ ವರದಿ (1915)

ಸಹಕಾರದ ಪ್ರಯತ್ನವು ಭಾರತಕ್ಕೆ ಅನ್ಯ ವಿದ್ಯಮಾನವಲ್ಲ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ, 'ಕಾರ್ಮಿಕರ ಸಂಘಗಳು ಮತ್ತು ಯಾವುದೇ ಸಹಕಾರಿ ಕೆಲಸವನ್ನು ನಿರ್ವಹಿಸುವವರು ತಮ್ಮ ಗಳಿಕೆಯನ್ನು ಸಮಾನವಾಗಿ ಅಥವಾ ಪರಸ್ಪರ ಒಪ್ಪಿದಂತೆ ಹಂಚಿಕೊಳ್ಳಬೇಕು' ಎಂದು ವಿವರಿಸಿದ್ದಾರೆ. ಆಧುನಿಕ ಭಾರತದಲ್ಲಿ ಸಹಕಾರಿ ಪತ್ತಿನ ಆಂದೋಲನವು ಕುತೂಹಲಕಾರಿಯಾಗಿ, ರಾಜ್ಯ-ಪ್ರಾರಂಭಿತ ಚಳುವಳಿಯಾಗಿದೆ. ಬ್ಯಾಂಕಿಂಗ್ ಬಿಕ್ಕಟ್ಟು ಮತ್ತು ಮೊದಲ ಮಹಾಯುದ್ಧವು ಸಹಕಾರಿಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರಿತು, ಆದರೂ ಸದಸ್ಯರ ಠೇವಣಿಗಳು ತೀವ್ರವಾಗಿ ಹೆಚ್ಚಿದವು, ಯುದ್ಧವು ರಫ್ತು ಮತ್ತು ನಗದು ಬೆಳೆಗಳ ಬೆಲೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿತು, ಇದರ ಪರಿಣಾಮವಾಗಿ ಪ್ರಾಥಮಿಕ ಕೃಷಿ ಸಂಘಗಳ ಸಾಲಗಳ ಬಾಕಿ ಹೆಚ್ಚಳವಾಯಿತು. ಪರಿಸ್ಥಿತಿಯನ್ನು ಪರಿಶೀಲಿಸಲು, ಅಕ್ಟೋಬರ್ 1914ರಲ್ಲಿ, ಸಹಕಾರಿಗಳ ಸ್ಥಿತಿಯನ್ನು ಅಧ್ಯಯನ ಮಾಡಲು ಮತ್ತು ಭವಿಷ್ಯಕ್ಕಾಗಿ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ಸರ್ ಎಡ್ವರ್ಡ್ ಮ್ಯಾಕ್ಲಗನ್ ಅವರ ನೇತೃತ್ವದಲ್ಲಿ ಸಹಕಾರ ಸಮಿತಿಯನ್ನು ರಚಿಸಿತು. ಮೂಲಭೂತವಾಗಿ ಅಲ್ಪಾವಧಿಯ ಮತ್ತು ಮಧ್ಯಮ-ಅವಧಿಯ ಹಣಕಾಸು ಒದಗಿಸಲು, ತಳ ಮಟ್ಟದಲ್ಲಿ ಪ್ರಾಥಮಿಕ, ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಮತ್ತು ಮಧ್ಯ ಶ್ರೇಣಿಯಲ್ಲಿ ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳೊಂದಿಗೆ ಪ್ರತಿ ಪ್ರಾಂತ್ಯದಲ್ಲಿ ಬಲವಾದ ಮೂರು ಹಂತದ ರಚನೆಯನ್ನು ನಿರ್ಮಿಸಲು ಶಿಫಾರಸ್ಸು ಮಾಡಿತು.

### • ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್ (1928)

ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್ ಅನ್ನು ಲಾರ್ಡ್ ಲಿನ್ಲಿತ್ಗೋ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು: "ಹೆಚ್ಚುತ್ತಿರುವ ಜನಸಂಖ್ಯೆ, ನೀರಾವರಿ ಸೌಲಭ್ಯಗಳ ವಿಸ್ತರಣೆ ಮತ್ತು ರಕ್ಷಣೆ, ಕೈಗಾರಿಕೆಗಳು ಹಾಗೂ ಪ್ರಾಯೋಗಿಕ ಕೃಷಿ ಫಾರ್ಮ್‌ಗಳು ಸೇರಿದಂತೆ ಸರ್ಕಾರದ ಉದ್ದೇಶಗಳಿಗಾಗಿ ಹುಲ್ಲುಗಾವಲುಗಳನ್ನು ಸ್ವಾಧೀನಪಡಿಸಿಕೊಳ್ಳುವ ಕಾರಣದಿಂದಾಗಿ ಬೇಸಾಯ ಪ್ರದೇಶದ ವಿಸ್ತಾರದೊಂದಿಗೆ ಮೇಯಿಸಲು ಲಭ್ಯವಿರುವ ಪ್ರದೇಶದ ವಿಸ್ತಾರವು ಗಣನೀಯವಾಗಿ ಕಡಿಮೆಯಾಯಿತು. ಆಗ ತಳಿಗಾರರು ದೊಡ್ಡ ಹಿಂಡುಗಳನ್ನು ಸಾಕಲು ಕಷ್ಟಪಟ್ಟರು. ಹೀಗಾಗಿ ಅವರ ಗಳಿಕೆ ಕುಸಿಯಿತು. ಅವರ ಜಾನುವಾರುಗಳ ಗುಣಮಟ್ಟ ಹದಗೆಟ್ಟಿತು, ಆಹಾರದ ಗುಣಮಟ್ಟ ಕುಸಿಯಿತು ಮತ್ತು ಋಣಭಾರ ಹೆಚ್ಚಾಯಿತು. ಕೃಷಿ ಪತ್ತಿನ ಸನ್ನಿವೇಶವು ಕಳವಳಕಾರಿಯಾಯಿತು ಮತ್ತು ವಿವಿಧ ಸಮಿತಿಗಳು ವಿವಿಧ ಪ್ರಾಂತ್ಯಗಳಲ್ಲಿನ ಸಹಕಾರಿ ಬ್ಯಾಂಕ್‌ಗಳ ಸಮಸ್ಯೆಗಳನ್ನು ಪರಿಶೀಲಿಸಿದವು. ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರ್ ಸಹ ಸಹಕಾರಿ ವಲಯವನ್ನು ಪರಿಶೀಲಿಸಿತು

ಮತ್ತು ಇತರರ ನಡುವೆ ಭೂಮಿ ಅಡಮಾನ ಬ್ಯಾಂಕುಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು.

- **ಮೆಹ್ತಾ ಸಮಿತಿ (1937)**

1934ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (RBI) ಸ್ಥಾಪನೆಯು ಕೃಷಿ ಪತ್ತಿನ ಒತ್ತಡದಲ್ಲಿ ಪ್ರಮುಖ ಬೆಳವಣಿಗೆಯಾಗಿದೆ. ಸಹಕಾರಿ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿಗೆ ಮಾಧ್ಯಮಗಳಾಗಿದ್ದರಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್ (1934) ನಲ್ಲಿ ಸ್ವತಃ ಆರ್‌ಬಿಐಗೆ ಕೃಷಿ ಪತ್ತು ಇಲಾಖೆಯನ್ನು ಸ್ಥಾಪಿಸುವ ಅಗತ್ಯವಿತ್ತು, 1935ರಲ್ಲಿ ಜನಪ್ರಿಯವಾಗಿ ಚುನಾಯಿತ ಸರ್ಕಾರಗಳ ಸ್ಥಾಪನೆಯೊಂದಿಗೆ, ಗ್ರಾಮೀಣ ಋಣಭಾರಕ್ಕೆ ಆದ್ಯತೆ ನೀಡುವ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಮೆಹ್ತಾ ಸಮಿತಿಯು ಸಹಕಾರಿ ಪತ್ತಿನ ಸೊಸೈಟಿಗಳನ್ನು ವಿವಿಧೋದ್ದೇಶ ಸಹಕಾರಿಗಳಾಗಿ ಮರುಸಂಘಟನೆ ಮಾಡಲು ನಿರ್ದಿಷ್ಟವಾಗಿ ಶಿಫಾರಸ್ಸು ಮಾಡಿತು.

- **ಗಾಡ್ಗೀಲ್ ಸಮಿತಿ (1944)**

1994ರಲ್ಲಿ, ಗಾಡ್ಗೀಲ್ ಸಮಿತಿಯು ಕಡ್ಡಾಯವಾಗಿ ಸಾಲಗಳನ್ನು ಹೊಂದಾಣಿಕೆ ಮಾಡಲು ಮತ್ತು ಸಹಕಾರಿ ಸಂಸ್ಥೆಗಳು ಸಾಕಷ್ಟು ಪ್ರಬಲವಾಗಿಲ್ಲದಿರುವ ಕಡೆಗಳಲ್ಲಿ ಕೃಷಿ ಸಾಲ ನಿಗಮಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತು.

- **ಸಹಕಾರಿ ಯೋಜನಾ ಸಮಿತಿ (1945)**

ಆರ್‌ಜಿ ಸಾರಯ್ಯ ಅವರ ಅಧ್ಯಕ್ಷತೆಯಲ್ಲಿ ಸಹಕಾರಿ ಯೋಜನಾ ಸಮಿತಿಯನ್ನು 1945ರಲ್ಲಿ ರಚಿಸಲಾಯಿತು. ಸಮಿತಿಯು ಆರ್ಥಿಕ ಯೋಜನೆಯ ಪ್ರಜಾಪ್ರಭುತ್ವೀಕರಣಕ್ಕೆ ಸಹಕಾರಿ ಸಂಸ್ಥೆಗಳನ್ನು ಅತ್ಯಂತ ಸೂಕ್ತವಾದ ಮಾಧ್ಯಮವೆಂದು ಕಂಡುಕೊಂಡಿತು ಮತ್ತು ಆರ್ಥಿಕ ಅಭಿವೃದ್ಧಿಯ ಪ್ರತಿಯೊಂದು ಕ್ಷೇತ್ರವನ್ನು ಪರಿಶೀಲಿಸಿತು.

- **ರಿಜಿಸ್ಟ್ರಾರ್ ಸಮ್ಮೇಳನ (1947)**

1947ರಲ್ಲಿ ನಡೆದ ರಿಜಿಸ್ಟ್ರಾರ್ ಸಮ್ಮೇಳನವು ಕೇಂದ್ರ ಬ್ಯಾಂಕುಗಳ ಮೂಲಕ ಪ್ರಾಥಮಿಕ ಸಂಘಗಳಿಗೆ ಹೆಚ್ಚಿನ ಸಹಾಯವನ್ನು ಒದಗಿಸಲು ಪ್ರಾಂತೀಯ ಸಹಕಾರಿ ಬ್ಯಾಂಕುಗಳನ್ನು ಮರು-ಸಂಘಟಿಸಬೇಕೆಂದು ಶಿಫಾರಸ್ಸು ಮಾಡಿತು. ಮಾರ್ಕೆಟಿಂಗ್‌ನೊಂದಿಗೆ ಪತ್ತನ್ನು ಪರಿಣಾಮಕಾರಿಯಾಗಿ ಜೋಡಿಸುವುದು ಮತ್ತು ಹೆಚ್ಚಿನ ಸಂಖ್ಯೆಯ ಉಗ್ರಾಣಗಳು ಹಾಗೂ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಉದಾರ ಸಾಲ ಮತ್ತು ಸಬ್ಸಿಡಿಗಳ ಮೂಲಕ ಸಹಾಯವನ್ನು ಒದಗಿಸುವುದನ್ನು ಮೊದಲ ಬಾರಿಗೆ ಪರಿಗಣಿಸಲಾಯಿತು.

- **ಅಖಿಲ ಭಾರತ ಗ್ರಾಮೀಣ ಪತ್ತು ಸಮೀಕ್ಷೆ ಸಮಿತಿಯ (ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೇ ಸಮಿತಿ) (1954)**

1951ರಲ್ಲಿ, ಆರ್‌ಬಿಐ ಗ್ರಾಮೀಣ ಪತ್ತಿನ ಸ್ಥಿತಿಯನ್ನು ತಿಳಿಯಲು ಸಾಮಾನ್ಯವಾಗಿ ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೇ ಸಮಿತಿ ಎಂದು ಕರೆಯಲ್ಪಡುವ ನಿರ್ದೇಶನ ಸಮಿತಿಯನ್ನು ರಚಿಸಿತು. ಎ ಡಿ ಗೋರ್ವಾಲಾ ಅವರು ಸಮಿತಿಯ ನೇತೃತ್ವವನ್ನು ವಹಿಸಿದ್ದರು, ಇದು 1954ರಲ್ಲಿ ವರದಿಯನ್ನು ಸಲ್ಲಿಸಿತು, ಗ್ರಾಮೀಣ ಭಾರತದಲ್ಲಿ ಹಣವನ್ನು ಸಾಲ ನೀಡುವ ವ್ಯವಸ್ಥೆಯ ಅಪಾಯಗಳನ್ನು ಎತ್ತಿ ತೋರಿಸಿತು. ಗ್ರಾಮೀಣ ಭಾರತದಲ್ಲಿ ಶೇ.93ರಷ್ಟು ಹಣವನ್ನು ಲೇವಾದೇವಿಗಾರರು ಮತ್ತು ಅವರ ಸಂಬಂಧಿಕರು ಹಣಕಾಸು ಅಗತ್ಯವಿರುವ ಜನರಿಗೆ ಸಾಲ ನೀಡುತ್ತಾರೆ ಎಂದು ಸಮಿತಿಯು ವರದಿ ಮಾಡಿತು. ಇದಕ್ಕೆ ವ್ಯತಿರಿಕ್ತವಾಗಿ, ಸರ್ಕಾರ ಮತ್ತು ಸಹಕಾರಿ ಬ್ಯಾಂಕುಗಳು ಒಟ್ಟಾಗಿ ಶೇ.<7ರಷ್ಟಿವೆ. ಅಖಿಲ ಭಾರತ ಗ್ರಾಮೀಣ ಪತ್ತು ಸಮೀಕ್ಷೆ ಸಮಿತಿಯ ವರದಿಯ ಪ್ರಕಟಣೆಯು ಭಾರತದ ಸಹಕಾರ ಚಳುವಳಿಯ ಇತಿಹಾಸದಲ್ಲಿ ಒಂದು ಪ್ರಮುಖ ಹೆಗ್ಗುರುತಾಗಿದೆ. ಈ ಸಮಿತಿಯು "ಭಾರತದಲ್ಲಿ ಸಹಕಾರ ವಿಫಲವಾಗಿದೆ ಆದರೆ ಯಶಸ್ವಿಯಾಗಬೇಕು" ಎಂಬ ತೀರ್ಮಾನಕ್ಕೆ ದಾರಿ ಮಾಡಿಕೊಟ್ಟಿತು.

- **ಅಖಿಲ ಭಾರತ ಸಹಕಾರಿ ಕಾಂಗ್ರೆಸ್ (1956)**

1956ರಲ್ಲಿ ಪಾಟ್ನಾದಲ್ಲಿ ನಡೆದ ಅಖಿಲ ಭಾರತ ಸಹಕಾರಿ ಕಾಂಗ್ರೆಸ್ ಸಹಕಾರಿ ಸಂಸ್ಥೆಗಳ ನಿರ್ದೇಶಕರ ಮಂಡಳಿಯಲ್ಲಿ ರಾಜ್ಯದ ಭಾಗವಹಿಸುವಿಕೆ ಮತ್ತು ಸರ್ಕಾರದ ಪ್ರಾತಿನಿಧ್ಯದ ತತ್ವವನ್ನು ಅಂಗೀಕರಿಸಿತು. ಅಂತಹ ನಾಮನಿರ್ದೇಶಿತರ ಸಂಖ್ಯೆಯು ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗವನ್ನು ಮೀರಬಾರದು ಅಥವಾ ಮೂರು, ಯಾವುದು ಕಡಿಮೆಯೋ ಮತ್ತು ಒಟ್ಟು ಶೇರು ಬಂಡವಾಳದ ಶೇ.50ಕ್ಕಿಂತ ಹೆಚ್ಚು ಸರ್ಕಾರಿ ಶೇರು ಬಂಡವಾಳವನ್ನು ಹೊಂದಿರುವ ಸಹಕಾರಿ ಸಂಸ್ಥೆಗಳಿಗೂ ಅನ್ವಯಿಸುತ್ತದೆ ಎಂದು ನಿರ್ಣಯಿಸಿತು.

- **ಕಾನೂನು ಸಮಿತಿ (1956)**

ಎಸ್‌ಟಿ ರಾಜಾ ಅವರ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರವು ಕಾನೂನು ಸಮಿತಿಯನ್ನು ರಚಿಸಿತು. ಸಹಕಾರಿ ಸಂಘಗಳ ಕಾರ್ಯನಿರ್ವಹಣೆಯನ್ನು ನಿಯಂತ್ರಿಸಲು ಸರಳ ಕಾನೂನನ್ನು ರೂಪಿಸಲು ಈ ಸಮಿತಿಯನ್ನು ನೇಮಿಸಲಾಯಿತು. ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ರಿಜಿಸ್ಟ್ರಾರ್‌ಗೆ ಸಹಾಯ ಮಾಡಲು ಕೆಲಸ ಮಾಡುವವರನ್ನು ಹೊರತುಪಡಿಸಿ ರಿಜಿಸ್ಟ್ರಾರ್‌ನ ಅಧಿಕಾರವನ್ನು ಬೇರೆ ವ್ಯಕ್ತಿಗಳಿಗೆ ನೀಡಬಾರದು ಎಂದು ಸಮಿತಿಯು ಅಭಿಪ್ರಾಯಪಟ್ಟಿತು. ರಿಜಿಸ್ಟ್ರಾರ್‌ನಿಂದ ಅಧೀನ ಅಧಿಕಾರಿಗಳವರೆಗೆ ಕ್ರಮೇಣ ಮತ್ತು ಹೆಚ್ಚುತ್ತಿರುವ ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಸಮಿತಿಯು ಸೂಚಿಸಿತು. ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನು, ಅವುಗಳ ಜಾರಿ ಮತ್ತು ಆಡಳಿತದ ಜವಾಬ್ದಾರಿ ರಾಜ್ಯ ಸರ್ಕಾರಗಳ ಮೇಲಿತ್ತು. ಸಮಿತಿಯ ವರದಿಯ ನಂತರ, ಅನೇಕ ರಾಜ್ಯ ಸರ್ಕಾರಗಳು ತಮ್ಮ ಹೊಸ ಕಾಯಿದೆಗಳನ್ನು ಅಂಗೀಕರಿಸಿದವು.

- **ಮೆಹ್ತಾ ಸಮಿತಿ (1959)**

ಸಹಕಾರಿ ಪತ್ತು ಸಮಿತಿಯು ಅಕ್ಟೋಬರ್ 1960ರಲ್ಲಿ ತನ್ನ ವರದಿಯನ್ನು ಹಲವು ಪ್ರಮುಖ ಶಿಫಾರಸ್ಸುಗಳೊಂದಿಗೆ ನೀಡಿತು, ಪ್ರಾಥಮಿಕ ಹಂತದಲ್ಲಿ

ಕಾರ್ಯಸಾಧ್ಯತೆಯ ಪ್ರಶ್ನೆಯನ್ನು ನಿರ್ಧರಿಸಲು, ಸಾಕಷ್ಟು ಹಣಕಾಸು ಮತ್ತು ರಾಜ್ಯ ಭಾಗವಹಿಸುವಿಕೆಯನ್ನು ಒದಗಿಸುತ್ತದೆ. ಸಮಿತಿಯು ಕೃಷಿ ಉತ್ಪಾದನೆಗೆ ಸಾಲ ಸೌಲಭ್ಯಗಳನ್ನು ವಿಸ್ತರಿಸಲು ಮತ್ತು ಸಹಕಾರ ಚಳುವಳಿಯನ್ನು ಬಲಪಡಿಸಲು ಪತ್ತು ರಚನೆಗೆ ಸಲಹೆಗಳನ್ನು ನೀಡಿತು.

- **ಸಹಕಾರಿ ಬೇಸಾಯದಲ್ಲಿ ಕಾರ್ಯನಿರತ ಗುಂಪು (1959)**

ಯಾವುದೇ ಸಂಘಗಳು ತರಾತುರಿಯಲ್ಲಿ ಸಂಘಟಿತರಾಗಬಾರದು ಹಾಗೂ ಸಾಗುವಳಿದಾರರು ಸ್ವಯಂ ಪ್ರೇರಿತರಾಗಿ ಸಹಕಾರಿ ಕೃಷಿ ಸಂಘಕ್ಕೆ ಸೇರಬೇಕು ಮತ್ತು ಅವರನ್ನು ಸಮಾಜಕ್ಕೆ ಕರೆತರುವ ಒತ್ತಾಯ ಬೇಡ ಎಂದು ಎಸ್.ನಿಜಲಿಂಗಪ್ಪ ನೇತೃತ್ವದ ಸಹಕಾರಿ ಬೇಸಾಯ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿತು. ರಾಜ್ಯ ಸಹಕಾರ ಸಂಘಗಳ ಕಾಯಿದೆಗೆ ಸೂಕ್ತ ತಿದ್ದುಪಡಿ ತರಬೇಕು, ಇದರಿಂದ ರೈತ ಸಂಘಗಳು ಭೂಮಿಯನ್ನು ಅಡಮಾನಗೊಳಿಸಿದ ಬ್ಯಾಂಕ್‌ಗಳಲ್ಲಿ ಸದಸ್ಯರಾಗಬಹುದು ಮತ್ತು ದೀರ್ಘಾವಧಿಯ ಹಣಕಾಸು ಪಡೆಯಬಹುದೆಂದು ಸಲಹೆ ನೀಡಿತು.

- **ಸಹಕಾರಿ ತರಬೇತಿಯ ಅಧ್ಯಯನ ತಂಡದ ವರದಿ (1961)**

ಎಸ್ ಡಿ ಮಿಶ್ರಾ ಅವರ ಅಧ್ಯಕ್ಷತೆಯಲ್ಲಿನ ಸಹಕಾರಿ ತರಬೇತಿಯ ಅಧ್ಯಯನ ತಂಡವು ಕಾರ್ಯಕ್ರಮಕ್ಕೆ ಈ ಕೆಳಗಿನ ವಿಧಾನಗಳನ್ನು ಸೂಚಿಸಿತು: (i) ಸಹಕಾರಿ ಶಿಕ್ಷಣ ಮತ್ತು ತರಬೇತಿಯ ಪರಿಣಾಮಕಾರಿ ಕಾರ್ಯಕ್ರಮವು ಸಹಕಾರಿ ಚಳುವಳಿಯ ಉತ್ತಮ ಬೆಳವಣಿಗೆಯ ಒಂದು ಲಕ್ಷಣವಾಗಿದೆ. (ii) ಸಹಕಾರಿ ಚಳವಳಿಯಿಂದ ಹೊರಗುಳಿದವರಿಗೆ ತರಬೇತಿ ನೀಡಲು, ಅವರನ್ನು ಸಹಕಾರ ಮನೋಭಾವದವರನ್ನಾಗಿ ಮಾಡಲು ಪ್ರಯತ್ನಗಳನ್ನು ಮಾಡಬೇಕು. (iii) ಸಹಕಾರ ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮದ ಜವಾಬ್ದಾರಿಯನ್ನು ಸಮರ್ಥವಾಗಿ ವಹಿಸಿಕೊಳ್ಳುವಂತೆ ಜಿಲ್ಲಾ ಮತ್ತು ರಾಜ್ಯ ಸಹಕಾರ ಸಂಘಗಳನ್ನು ಬಲಪಡಿಸಬೇಕು. (iv) ಗರಿಷ್ಠವಾಗಿ ಸರ್ಕಾರಿ ಸಿಬ್ಬಂದಿಯ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮವನ್ನು ವಿಕೇಂದ್ರೀಕೃತ ಆಧಾರದ ಮೇಲೆ ನಡೆಸಬೇಕು.

- **ಗ್ರಾಹಕರ ಸಹಕಾರಿಗಳ ಸಮಿತಿ (1961)**

ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮತ್ತು ಉಗ್ರಾಣ ಮಂಡಳಿಯು ಸುಸ್ಥಿರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಗ್ರಾಹಕರ ಸಹಕಾರ ಚಳುವಳಿಯ ಪ್ರಚಾರ ಮತ್ತು ಸಾಂಸ್ಥಿಕ ಅಂಶಗಳನ್ನು ಪರೀಕ್ಷಿಸಲು ಗ್ರಾಹಕ ಸಹಕಾರಿಗಳ ಸಮಿತಿಯನ್ನು ಡಾ. ಪಿ.ನಟೇಶನ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಪ್ರಾಥಮಿಕ ಗ್ರಾಹಕರ ಮಳಿಗೆಗಳನ್ನು ಸಂಘಟಿಸುವುದು, ಉಗ್ರಾಣಗಳ ನಿರ್ಮಾಣಕ್ಕೆ ಸರ್ಕಾರದ ನೆರವು ಮತ್ತು ಶೇರು ಬಂಡವಾಳದಲ್ಲಿ ಕೊಡುಗೆ, ಸಹಕಾರಿ ಬ್ಯಾಂಕ್‌ಗಳಿಂದ ನಗದು ಸಾಲ ಮತ್ತು ರಾಷ್ಟ್ರೀಯ ಗ್ರಾಹಕರ ಮಳಿಗೆಗಳ ಒಕ್ಕೂಟದ ಸ್ಥಾಪನೆ ಇದರ ಪ್ರಮುಖ ಶಿಫಾರಸ್ಸುಗಳಾಗಿವೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು......

.....28ನೇ ಪುಟದಿಂದ

ಪುಣೆಯು ಭಿನ್ನವಾಗಿಲ್ಲ. ನವೀನ SWaCH ಮಾದರಿಯು ಪುಣೆಯನ್ನು ಪ್ರಪಂಚದ ಇತರ ಭಾಗಗಳಿಗಿಂತ ವಿಭಿನ್ನವಾಗಿಸುತ್ತದೆ, ಅದು ಸರಾಗವಾಗಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಹಲವಾರು ತಪಾಸಣೆ ಮತ್ತು ಸಮತೋಲನಗಳನ್ನು ಹೊಂದಿದೆ. ಇದು ಸಮರ್ಪಿತ ಕ್ಷೇತ್ರ ಸಿಬ್ಬಂದಿಯನ್ನು ಹೊಂದಿದೆ, ಅವರು ಪ್ರತಿದಿನ ನೆಲದ ಮೇಲೆ ವ್ಯವಸ್ಥೆಯು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಪ್ರತಿ ಮನೆಯಿಂದ ಕಸವನ್ನು ಸ್ವಯಂ ಉದ್ಯೋಗಿ ತ್ಯಾಜ್ಯ ತೆಗೆಯುವವರಿಂದ ಸಂಗ್ರಹಿಸಲಾಗುತ್ತದೆ, ಸಮನ್ವಯದ ಸುಲಭದ ಮೂಲ ಘಟಕವೆಂದರೆ ಚುನಾವಣಾ ವಾರ್ಡ್ ಅಥವಾ ಪ್ರಭಾಗ್. ನಗರದಲ್ಲಿ ಇಂತಹ 76 ಪ್ರಭಾಗ್ ಗಳಿದ್ದು, ಸಂಯೋಜಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರತಿ ಪ್ರಭಾಗ್‌ಗೆ ಒಬ್ಬ ಸಂಯೋಜಕರು ಇದ್ದಾರೆ, ಅವರು ನಾಗರಿಕರು ಮತ್ತು ತ್ಯಾಜ್ಯ ತೆಗೆಯುವವರ ನಡುವೆ ಸಂಪರ್ಕ ಹೊಂದಿದ್ದಾರೆ ಮತ್ತು ಕಸವನ್ನು ಸುಗಮವಾಗಿ ಸಂಗ್ರಹಿಸಲು ಮತ್ತು ವಿಲೇವಾರಿ ಮಾಡಲು ಪಿಎಂಸಿ ಸಿಬ್ಬಂದಿಯನ್ನು ಸಂಪರ್ಕಿಸುತ್ತಾರೆ. ಸಂಯೋಜಕರು SWaCH ತ್ಯಾಜ್ಯ ಪಿಕ್ಕರ್‌ಗಳೊಂದಿಗೆ ಕೆಲಸ ಮಾಡುತ್ತಾರೆ ಮತ್ತು ವ್ಯವಸ್ಥೆಯು ಎಣ್ಣೆಯ ಚಕ್ರಗಳಲ್ಲಿ ಚಲಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು PMC ಸಿಬ್ಬಂದಿ ಮತ್ತು ನಾಗರಿಕರೊಂದಿಗೆ ಸಂಪರ್ಕ ಸಾಧಿಸುತ್ತಾರೆ.

ಪ್ರಭಾಗ್‌ನ ಆಚೆಗೆ ಉಲ್ಬಣಗೊಳ್ಳುವ, ಒಂದಕ್ಕಿಂತ ಹೆಚ್ಚು ಪ್ರಭಾಗ್‌ಗಳ ಮೇಲೆ ಪರಿಣಾಮ ಬೀರುವ ಅಥವಾ ಪ್ರಭಾಗ್–ಸಂಯೋಜಕರ ವ್ಯಾಪ್ತಿಯನ್ನು ಮೀರಿದ ಯಾವುದೇ ಸಮಸ್ಯೆಯನ್ನು ವಾರ್ಡ್–ಸಂಯೋಜಕರು ನಿರ್ವಹಿಸುತ್ತಾರೆ. ಈ ವಾರ್ಡ್‌ಗಳಲ್ಲಿ ಸುಗಮ ಸಂಗ್ರಹಣೆ ಮತ್ತು ವಿಲೇವಾರಿ ಮೇಲೆ ಪರಿಣಾಮ ಬೀರುವ ಸಮಸ್ಯೆಗಳನ್ನು ಟ್ರ್ಯಾಕ್ ಮಾಡುವ 15 ವಾರ್ಡ್ ಸಂಯೋಜಕರು ಇದ್ದಾರೆ.

ಕೆಲವು ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚು ವಾರ್ಡ್‌ಗಳಲ್ಲಿ ಸಮಸ್ಯೆಗಳು ಹರಡುತ್ತವೆ ಮತ್ತು ಅಂತಹ ಸಂದರ್ಭಗಳಲ್ಲಿ ವಲಯ–ಸಂಯೋಜಕರು ಅಧಿಕಾರ ವಹಿಸಿಕೊಳ್ಳುತ್ತಾರೆ. ಪುಣೆ ಘನತ್ಯಾಜ್ಯ ನಿರ್ವಹಣೆಯನ್ನು 4 ವಲಯಗಳಾಗಿ ವಿಂಗಡಿಸಲಾಗಿದೆ ಮತ್ತು ಈ ಪ್ರತಿಯೊಂದು ವಲಯವನ್ನು ನಿರ್ವಹಿಸುವ SWaCH ವಲಯ ಸಂಯೋಜಕರು ಇದ್ದಾರೆ. ಕೆಲಸವನ್ನು ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ನಡೆಸಲಾಗುತ್ತದೆ ಎಂದು ಅವರು ಖಚಿತಪಡಿಸುತ್ತಾರೆ.

SWaCH ನ ಕಾರ್ಯಾಚರಣೆ ವ್ಯವಸ್ಥಾಪಕರು ಈ ಎಲ್ಲಾ ವಲಯಗಳನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುತ್ತಾರೆ ಮತ್ತು ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯು ಸುಗಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಖಚಿತಪಡಿಸುತ್ತದೆ.

ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು..........

# ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಕಾಯಕವೇ ಕೈಲಾಸ ಕಾರ್ಮಿಕರ ಮೂಲ ಮಂತ್ರ

– ಶ್ರೀಮತಿ ಶಮಂತ ಲಕ್ಷ್ಮಿ ಎಮ್, ಮೈಸೂರು

ಮೇ ದಿನ ಅಥವಾ 'ಅಂತರ ರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯನ್ನು' ಪ್ರತಿ ವರ್ಷದ ಮೇ 1ನೇ ತಾರೀಖಿನಂದು ಪ್ರಪಂಚದ ಹಲವು ದೇಶಗಳಲ್ಲಿ ಆಚರಿಸಲಾಗುತ್ತದೆ. ಈ ದಿನದಂದು ಕಾರ್ಮಿಕ ಆಂದೋಲನದ ಸಾಮಾಜಿಕ ಮತ್ತು ಸಾಧನೆಗಳನ್ನು ಆಚರಿಸಲಾಗುತ್ತದೆ.

**'ಬಂಡವಾಳ ಶಾಹಿ' ಮತ್ತು 'ಸಮಾಜವಾದಿ ಸಿದ್ಧಾಂತ :**

1896ರ ಮೇ ತಿಂಗಳಿನಲ್ಲಿ 'ನ್ಯಾಷನಲ್' ದಲ್ಲಿ ಇದರ ಬಗ್ಗೆ ವಿಸ್ತೃತವಾಗಿ ರಚಿಸಿ ಮೇ 1890ರಿಂದ ಮೇ 1ನ್ನು 8 ಗಂಟೆಗಳ ಬೇಡಿಕೆಗೆ, ಆಚರಿಸುವ ಕರೆಯನ್ನು ಕೊಟ್ಟರು. ಇದಕ್ಕಿಂತ ಮಿಗಿಲಾಗಿ ಮೇ 1ನೇಯ ತಾರೀಖನ್ನು "ವಿಶ್ವ ಕಾರ್ಮಿಕರ ದಿನ" ವೆಂದೂ 'ದೀಕ್ಷಾದಿನ' ಔ ಆಗಿಯೂ ಆಚರಿಸುವಂತೆ ರೂಪಿಸಲಾಯಿತು. ಅಂದರೆ ಕಾರ್ಮಿಕರು ತಮ್ಮ ಐತಿಹಾಸಿಕ ಜವಾಬ್ದಾರಿಯಾದ ಸಮಾಜವಾದಿ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ನಡೆಸಬೇಕಾದ ಹೋರಾಟಗಳ ವಾರ್ಷಿಕ ಆಚರಣೆಯಾಗಿ ರೂಪಿಸಿದ್ದರು. 'ವಿಶ್ವದ ಮೊದಲ ಸಮಾಜವಾದಿ ರಾಷ್ಟ್ರ' ವನ್ನು ಸ್ಥಾಪಿಸಿದ ವಿ ಐ ಲೆನಿನ್ ರವರ 'ಮೇ ದಿನಾಚರಣೆ' ಯನ್ನು ಕುರಿತು ಹೇಳಿರುವ ಮಾತುಗಳು. ಕಾರ್ಮಿಕರು ದಿನ ನಿತ್ಯದ ಸಮಸ್ಯೆಗಳನ್ನು ಕುರಿತು ಚಿಂತಿಸಲು ಹಾಗೂ ಬೇಡಿಕೆಗಳನ್ನು ರೂಪಿಸಿ ಹೋರಾಡಲು ರೋಷವೆಲ್ಲಾ ತೆರವಾಗುತ್ತದೆ. ಆದರೆ ವಿಶ್ವದಲ್ಲಿ ಬಂಡವಾಳ ಶಾಹಿಯು ನಡೆಸುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಗಳನ್ನು ಅಂತ್ಯಗೊಳಿಸಿ, ಶೋಷಣಾ ರಹಿತ ಸರಿಸಮಾನತೆಯ, ಸಮಾಜದ ನಿರ್ಮಾಣಕ್ಕಾಗಿ ನಡೆಸಬೇಕಾದ ಹೋರಾಟಗಳ ಬಗ್ಗೆ ಹಾಗೂ ಮಾಡಬೇಕಾದ ಯೋಜನೆಗಳ ಬಗ್ಗೆ ಚಿಂತನೆ ಮಾಡಲು ಹಾಗೂ ನಿಣಯಗಳನ್ನು ಕೈಗೊಳ್ಳಲು 'ಮೇದಿನ. ವನ್ನು ಮೀಸಲಿಡಬೇಕು. ಎಂದು ಎಲ್ಲಾ ದೇಶಗಳ ಕಾರ್ಮಿಕರೇ ಒಂದಾಗಿರಿ, ವಿಶ್ವದ ಕಾರ್ಮಿಕರೇ ಒಂದಾಗಿರಿ, ಇದು 'ಮೇ ದಿನಾಚರಣೆಯನ್ನು' ಘೋಷಣೆ. ವಿಶ್ವದ ಮೇ ದಿನವನ್ನು ಸತತವಾಗಿ 123 ವರ್ಷದಿಂದ ಆಚರಿಸುತ್ತಾ ಬಂದಿದೆ. 2009ರಂದು ಬದಲಾದ ವಿಶ್ವದ ಪರಿಸ್ಥಿಯಲ್ಲಿ ನಾವು ಕಾಣುವುದು, ಬಂಡವಾಳ ಶಾಹಿ ವ್ಯವಸ್ಥೆಯ ಪೂರ್ಣ ಪತನದ ಪಥ, ಹಾಗಾಗಿ ಈ ವರ್ಷವನ್ನು 'ವಿಶ್ವ ಸಮಾಜವಾದಿ ಸಮಾಜ ಪ್ರತಿಷ್ಠಾಪನೆಯ ದೀಕ್ಷಾ ದಿನ, ವೆಂದು ಆಚರಿಸುವ ಪರಿಸ್ಥಿತಿ ಬಂದಿದೆ.

**"1929–30 ರಲ್ಲಾದ ವಿಶ್ವದ ಆರ್ಥಿಕ ಮುಗ್ಗಟ್ಟು".**

ಚಾರಿತ್ರಿಕ ಸಂಗತಿಯೆಂದರೆ 1929–30ರ ದಶಕದಲ್ಲಿ 'ಗ್ರೇಟ್ ಡಿಪ್ರೆಶನ್' ಸಂಭವಿಸಿತ್ತು. ಆದರೆ 2008ರ ಅದೇ ಮರುಕಳಿಸಿದ 'ಗ್ರೇಟ್ ಡಿಪ್ರೆಶನ್' ನ್ನು ಗಮನಿಸಿದರೆ, ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಪರಿಹಾರವಿಲ್ಲವೆಂಬ ತಳಮಳ, ಈಗ ಎಲ್ಲೆಡೆ ಪ್ರಾರಂಭವಾಗಿದೆ. ಈ ಸಂಕ್ರಮಣದ ಕಾಲದಲ್ಲಿ ವಿಶ್ವದ ಗಮನ, ಸಮಾಜವಾದಿ ರಾಷ್ಟ್ರಗಳ ಕಡೆಗೆ ಹೊರಳಿದೆ. ಒಂದೆಡೆ ಬಲಾಢ್ಯ–ಚೈನ, ತನ್ನ ಸಮಾಜವಾದದ ಪ್ರಯೋಗದಿಂದಲೇ ವಿಶ್ವದ ಅತೀ ಬಲಿಷ್ಠ ರಾಷ್ಟ್ರವಾಗಿ ಮೆರೆಯುತ್ತಿದೆ. ಮತ್ತೊಂದು ಕಡೆ, ಸಣ್ಣ–ಪುಟ್ಟ ರಾಷ್ಟ್ರಗಳಾದ ಬ್ರೆಝಿಲ್, ಮೆಕ್ಸಿಕೊ, ನಿಕರವಾಗುವ, ನೇಪಾಳ, ಮುಂತಾದ ರಾಷ್ಟ್ರಗಳು ಎಲ್ಲರ ಗಮನವನ್ನು ಸೆಳೆಯುತ್ತಿವೆ.

ಭಾರತದಲ್ಲಿ ಮೇ1 ಅನ್ನು ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವನ್ನು ಅಂತರ ರಾಷ್ಟ್ರೀಯ ಶ್ರಮಿಕ್ ದಿವಸ್ ಎಂದು ಆಚರಿಸಲಾಗುತ್ತದೆ. ಪಾದಾಪಣೆ ಮಾಡಿ ವಿಶ್ವದ ಸಮಾಜವಾದದ 'ಇತಿ–ಹಾಸದ ಕೊನೆ' 'ಸಿದ್ಧಾಂತದ ಕೊನೆ' ಹತ್ತಿರಕ್ಕೆ ಬಂದಿದೆ. ಹಿಂದೆ 'ಸೋವಿಯತ್ ಯೂನಿಯನ್'ನಲ್ಲಿ 'ಸಮಾಜವಾದಿ– ವ್ಯವಸ್ಥೆ' ವಿಘಟನೆಗೊಂಡಾಗಲೇ ಸಮಾಜವಾದಿ ಸಿದ್ಧಾಂತದ ಅಂತ್ಯವಾಯಿತೆಂದು ಬೀಗುತ್ತದೆ. ಬಂಡವಾಳ ಶಾಹಿ ಇತಿಹಾಸ ತಜ್ಞರು ಹಾಗೂ ಅರ್ಥಶಾಸ್ತ್ರಜ್ಞರು, ಈಗ ಬಂಡವಾಳ ಶಾಹಿಯ ಅಂತ್ಯ ಸನ್ನದ್ದವಾಯಿತೆಂದು ನಂಬಿಕೆ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯ ಕುಸಿತದಿಂದ ಸಂಭವಿಸಿದ ಸಮಸ್ಯೆಯಾಗಿರುವ ಕಾರಣಕ್ಕಾಗಿ, ಮತ್ತೊಂದು 'ಸಮರ್ಥ ಪರ್ಯಾಯ' ವ್ಯವಸ್ಥೆಯ ಕಡೆಗೆ ಹುಡುಕಾಟ ನಡೆಯುತ್ತಿದೆ.

**ಹಿನ್ನೆಲೆ ಮತ್ತು ಇತಿಹಾಸ**

1886ರ ವರ್ಷದ ಮೇ 4ರಂದು ಚಿಕಾಗೋದ, ಇಲಿನಾಯ್ಸ್ ಪ್ರದೇಶದ ಹೇ ಮಾರ್ಕೆಟ್ ಎಂಬಲ್ಲಿ ಕಾರ್ಮಿಕರ ಮೇಲೆ ನಡೆದ ದಮನಕಾರಿ ಘಟನೆಯನ್ನು ಈ ಆಚರಣೆ ಹಿನ್ನೆಲೆಯಾಗಿ ಇಟ್ಟುಕೊಂಡಿವೆ.

ಕಾರ್ಮಿಕ ಪ್ರಭುತ್ವದ ಶುಭಯುಗದ ಉದಯದ ಕುರುಹಾಗಿ ಮೇ 1ರಂದು ಉತ್ಸವಾಚರಣೆ ಮಾಡಬೇಕೆಂದು ರಾಬರ್ಟ್ ಓವೆನ್ ಸೂಚಿಸಿದ್ದ. ಆದರೆ ವಾಸ್ತವವಾಗಿ 1889 ಕ್ಕಿಂತ ಮುಂಚೆ ಮೇ ದಿನಾಚರಣೆ ಮಾಡಿದಕ್ಕೆ ಆದಾರಗಳು ದೊರಕುವುದಿಲ್ಲ. ಆ ವರ್ಷ ಪ್ಯಾರಿಸಿನಲ್ಲಿ ಸಮಾವೇಶ ಗೊಂಡಿದ್ದ ಸಮಾಜವಾದಿ ಅಂತರ ರಾಷ್ಟ್ರೀಯದ ಪ್ರಥಮ ಅಧಿವೇಶನದಲ್ಲಿ ಮೇ 1ನೆಯ ದಿನಾಂಕವನ್ನು (ಅದು ವಾರದ ಯಾವ ದಿನವೇ ಬರಲಿ)

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 33
Licensed to post without Prepayment License No. PMG BG/WPP-384/2023-2025.



ವಾರ್ಷಿಕ ಅಂತರ ರಾಷ್ಟ್ರೀಯ ಉತ್ಸವ ದಿನವೆಂದು ಆಚರಿಸಬೇಕೆಂದು ನಿರ್ಧರಿಸಲಾಯಿತು. ಮೇ 1ರಂದು ಸಾರ್ವಜನಿಕ ರಜಾದಿನವೆಂದು ಘೋಷಿಸಬೇಕೆಂದು ಒತ್ತಾಯ ಪಡಿಸಲು ನೇರ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

ಕಾರ್ಮಿಕ ಯಾವತ್ತಿಗೂ ಬಡವನು ಎಂದರ್ಥವಲ್ಲ ಕಾರ್ಮಿಕನು ಪ್ರತಿ ಯಶಸ್ಸಿನ ಅವಿಭಾಜ್ಯ ಅಂಗವಾಗಿದೆ. ಅದು ಇಟ್ಟಿಗೆಗಳಲ್ಲಿ ಹೊತ್ತುಹೋದ ವ್ಯಕ್ತಿಯಾಗಲಿ ಅಥವಾ ಕಛೇರಿಯಲ್ಲಿನ ಕಡತಗಳಿಂದ ಹೊರೆಯಾಗಿರುವ ಉದ್ಯೋಗಿಯಾಗಲಿ, ಸಂಸ್ಥೆಯಲ್ಲಿ ಕೆಲಸ ಮಾಡುವ ಮತ್ತು ಪ್ರತಿಯಾಗಿ ಹಣವನ್ನು ತೆಗೆದುಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ಕಾರ್ಮಿಕನೆ.

ನಮ್ಮ ಸಮಾಜದಲ್ಲಿ ದುಡಿಯುವ ವರ್ಗವನ್ನು ಯಾವಾಗಲೂ ಬಡ ವ್ಯಕ್ತಿಯೆಂದು ಪರಿಗಣಿಸಲಾಗುತ್ತದೆ. ಬಿಸಿಲಿನಲ್ಲಿ ಕೆಲಸ ಮಾಡುವವರನ್ನು ನಾವು ಕಾರ್ಮಿಕರೆಂದು ಪರಿಗಣಿಸುತ್ತೇವೆ. ಇದಕ್ಕೆ ವಿರುದ್ಧವಾಗಿ, ಕಾರ್ಮಿಕ ವರ್ಗದ ಸಮಾಜವು ಅದರ ಅವಿಭಾಜ್ಯ ಅಂಗವಾಗಿದೆ.

### ಭಾರತದಲ್ಲಿ ಮೊದಲ ಬಾರಿಗೆ ಕಾರ್ಮಿಕರ ದಿನ ಆಚರಿಸಿದ್ದು ಯಾವಾಗ

ಭಾರತದಲ್ಲಿ ಮೊದಲ ಮೇ ದಿವನ್ನು ಮದ್ರಾಸ್‌ನಲ್ಲಿ (ಈಗಿನ ಚೆನ್ನೈ) 'ಲೇಬರ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ '1923ರ ಮೇ 1ರಂದು ಆಯೋಜಿಸಿತು. ಪ್ರಸ್ತುತ ಕಾರ್ಮಿಕ ದಿನವನ್ನು ಭಾರತದಾದ್ಯಂತ ವಿವಿಧ ಹೆಸರುಗಳಿಂದ ಆಚರಿಸಲಾಗುತ್ತದೆ. ಕನ್ನಡದಲ್ಲಿ 'ಕಾರ್ಮಿಕ ದಿನಾಚರಣೆ' ಎಂದು ಆಚರಿಸಿದರೆ, ಹಿಂದಿಯಲ್ಲಿ 'ಕಾಮ್ಗರ್ ದಿನ್' ಅಥವಾ 'ಅಂತರ ರಾಷ್ಟ್ರೀಯ ಶ್ರಮಿಕ್ ದಿವಸ್' ತಮಿಳಿನಲ್ಲಿ 'ಉಝೋಪಾಲರ್ ನಾಲ್' ಮತ್ತು ಮರಾಠಿಯಲ್ಲಿ 'ಕಾಮ್ಗರ್ ದಿವಸ್' ಸೇರಿದಂತೆ ವಿವಿದ ಹೆಸರುಗಳಲ್ಲಿ ಆಚರಿಸಲಾಗುತ್ತದೆ.

### ಕಾರ್ಮಿಕ ದಿನಾಚರಣೆಯ ಮಹತ್ವ :

ಮೇ ದಿನವು ಸಮಾಜಕ್ಕೆ ಮತ್ತು ಕಾರ್ಮಿಕರ ಕೊಡುಗೆ ಮತ್ತು ತ್ಯಾಗವನ್ನು ತಿಳಿಸಿಕೊಡುವ, ಅರಿವು ಮೂಡಿಸುವ ದಿನವಾಗಿದೆ. ಹಾಗೆಯೆ ಕಾರ್ಮಿಕರ ಕಾನೂನುಗಳು, ಕಾರ್ಮಿಕರ ಹಕ್ಕುಗಳ ಉಲ್ಲಂಘನೆ, ಕೆಲಸದ ಅವಧಿ ಮೊದಲಾದವುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ನಡೆಸಲಾಗುತ್ತದೆ.

### ಕಾರ್ಮಿಕ ದಿನದ ಇತಿಹಾಸ

ಭಾರತದಲ್ಲಿ ಕಾರ್ಮಿಕ ದಿನವನ್ನು ಕಾರ್ಮಿಕ ಪುರುಷರು ಮತ್ತು ಮಹಿಳೆಯರ ಗೌರವಾರ್ಥವಾಗಿ ಆಚರಿಸಲಾಗುತ್ತದೆ. ಇದನ್ನು ಹಿಂದೂಸ್ತಾನದ ಲೇಬರ್ ಕಿಸಾನ್ ಪಾರ್ಟಿ ಆರಂಭಿಸಿತು. ಈ ಸಂಧರ್ಭದಲ್ಲಿ, ಸ್ವಾತಂತ್ರ್ಯದ ಮೊದಲು ಭಾರತದಲ್ಲಿ ಕೆಂಪು ಧ್ವಜಾವನ್ನು ಮೊದಲ ಬಾರಿಗೆ ಬಳಸಲಾಯಿತು.

### ಪ್ರಪಂಚದಲ್ಲಿ ಕಾರ್ಮಿಕರ ದಿನದ ಮೂಲ

ಮೇ 1 1986ರಂದು, ಅಮೇರಿಕದ ಎಲ್ಲಾ ಟ್ರೇಡ್ ಯೂನಿಯನ್‌ಗಳು ಒಟ್ಟಾಗಿ ತಾವು 8 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡುವುದಿಲ್ಲ ಎಂದು ನಿರ್ಧರಿಸುತ್ತವೆ, ಅದಕ್ಕಾಗಿ ಅವರು ಮುಷ್ಕರ ನಡೆಸುತ್ತಾರೆ. ಈ ಸಮಯದಲ್ಲಿ ಕಾರ್ಮಿಕ ವರ್ಗವನ್ನು 10–16 ಗಂಟೆಗಳ ಕಾಲ ಕೆಲಸವನ್ನು ಮಾಡುವಂತೆ ಒತ್ತಾಯ ಮಾಡಲಾಯಿತು, ಜೊತೆಗೆ ಅವರ ಸುರಕ್ಷತೆಯನ್ನು ನೋಡಿಕೊಳ್ಳಲಾಗಲಿಲ್ಲ. ಆ ಸಮಯದಲ್ಲಿ, ಕೆಲಸಗಾರನು ಕೆಲಸದ ಸಮಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿದನು, ಅನೇಕ ಜನರು ಸಾಯುತ್ತಿದ್ದರು. ಕೆಲಸದ ಸಮಯದಲ್ಲಿ ಮಕ್ಕಳು, ಮಹಿಳೆಯರು ಮತ್ತು ಪುರುಷರು ಸಾವಿನ ಅನುಪಾತವು ಹೆಚ್ಚುತ್ತಿದೆ. ಕೆಲವೊಮ್ಮೆ ಮುಷ್ಕರಗಳನ್ನು ಸಹ ಮಾಡಿದರು. ಆದರೆ ಉದ್ಯೋಗಿಗಳು(ಕಾರ್ಮಿಕರು) ಎದೆಗುಂದದೆ ಸಾಮಾಜಿಕ ಕಾರ್ಯಕರ್ತರ ನೆರವಿನಿಂದಾಗಿ, ಸ್ವಲ್ಪ ಸಮಯದ ನಂತರ 8 ಗಂಟೆಗಳ ಕೆಲಸದ ವಿಧಾನವನ್ನು ಭಾರತ ಮತ್ತು ಇತರ ದೇಶಗಳಲ್ಲಿ ಅಳವಡಿಸಲಾಯಿತು. ಅಂದಿನಿಂದ ವಿಶ್ವದಾದ್ಯಂತ ಕಾರ್ಮಿಕರ ದಿನವನ್ನು ಬಹಳ ಉತ್ಸಾಹದಿಂದ ಆಚರಿಸಲಾಗುತ್ತಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003